
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 37 ಸೆಪ್ಟೆಂಬರ್ 12, 2004 ಬೆಲೆ ರೂ. 3.00

ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಪಾತ್ರವೇನು?

ಉಮಾ ಭಾರತಿ ಪ್ರಕರಣ : ಸರ್ಕಾರದ ಶರಣಾಗತಿ



ಮನಮೋಹನ್ ಸಿಂಗ್ ಸರ್ಕಾರದ ನೂರು ದಿನಗಳು



ಕಾರ್ಮಿಕವರ್ಗದ ರಣಕಹಳೆ

ಬಿತ್ತನೆ ಬೀಜ ವಂಚಕರು ಜೈಲಿಗೆ

- ಸಿಐಟಿ : ಆಡಳಿತ ಮಂಡಳಿ ಪರ ತೀರ್ಮಾನ
- ತಾಲೀಬಾನೀಕರಣದತ್ತ ಬಾಂಗ್ಲಾದೇಶ
- ಒಲಂಪಿಕ್ಸ್ : ಬೀಜಿಂಗ್‌ನತ್ತ ಪಯಣ....

ಐಕ್ಯರಂಗ

ಕೈಗಾರಿಕಾ ವಿವಾದಗಳಲ್ಲಿ ಪೊಲೀಸರಿಗೇನು ಕೆಲಸ ?

24-08-2004ರಂದು ಕಾಂ.ಸೂರಿಯವರು ಬದುಕಿದ್ದರೆ ಅವರಿಗೆ 80 ವರ್ಷಗಳು ತುಂಬುತ್ತಿತ್ತು. ಆದರೆ ಎರಡು ವರ್ಷಗಳ ಹಿಂದೆಯಷ್ಟೇ ಅವರು ನಮ್ಮನ್ನಗಲಿದರು. ಆದರೂ ಅವರಿಗೆ ಆ ದಿನದಂದು ಬೆಂಗಳೂರಿನ ಯವನಿಕಾ ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಕಾರ್ಮಿಕರು, ನೌಕರರು ವಿಶಿಷ್ಟ ರೀತಿಯಲ್ಲಿ ನೆನಪಿನ ಕಾಣಿಕೆ ಅರ್ಪಿಸಿದರು.

ಕಾಂ.ಎಸ್.ಸೂರ್ಯನಾರಾಯಣರಾವ್ ಸ್ಮಾರಕ ದತ್ತಿ ಉಪನ್ಯಾಸ ಸಮಿತಿ ಅಂದು **'ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಪಾತ್ರ'** ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಗೃಹ ಇಲಾಖೆಯ ಹೊಣೆ ಹೊತ್ತವರೂ ಆದ ಧರಂಸಿಂಗ್‌ರವರು ಉದ್ಘಾಟನೆಗೆ ಒಪ್ಪಿದ್ದರು. ಆದರೆ ಉಮಾಭಾರತಿ ಪ್ರಕರಣದಿಂದ ಉಂಟಾದ ಪರಿಸ್ಥಿತಿಯಿಂದಾಗಿ ಅವರು ತಮ್ಮ ಬದಲು ತಮ್ಮ ಸಂಪುಟದ ಹಿರಿಯ ಸಚಿವ ಪಿ.ಜಿ.ಆರ್.ಸಿಂಧ್ಯಾರವರನ್ನು ಕಳುಹಿಸಿದ್ದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮಂಡಿಸಿದ ವಿಚಾರ ಸಂಕಿರಣದ ಆಶಯ ಪ್ರಬಂಧ ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಕೈಗಾರಿಕೆಗಳು ಆರಂಭವಾಗಿ, ಅದರೊಂದಿಗೆ ಕೈಗಾರಿಕಾ ವಿವಾದಗಳೂ ಆರಂಭವಾದಂದಿನಿಂದ ಈಗಿನ ಸಾಮ್ರಾಜ್ಯಶಾಹಿ ಜಾಗತೀಕರಣದ ಯುಗದವರೆಗೂ ಪೊಲೀಸರ ಮಧ್ಯಪ್ರವೇಶ ಏಕೆ ಮತ್ತು ಹೇಗಾಗುತ್ತಿದೆ ಎಂಬುದರ ಒಂದು ವಿಹಂಗಮ ನೋಟವನ್ನು ನೀಡಿತ್ತು.

ತಮ್ಮ ಪ್ರಬಂಧವನ್ನು ಮಂಡಿಸುತ್ತಾ ಕಾಂ.ವಿ.ಜೆ.ಕೆ.ನಾಯರ್‌ರವರು ಎರಡು ದಶಕಗಳ ಹಿಂದೆ ಗುಂಡೂರಾವ್‌ರವರ ಆಡಳಿತ ಕಾಲದಲ್ಲಿ ಕಾರ್ಮಿಕರ ಮೇಲೆ, ರೈತರ ಮೇಲೆ ಪೊಲೀಸರನ್ನು ಹರಿಯಬಿಟ್ಟಿದ್ದನ್ನು ನೆನಪಿಸಿದರು. ಆ ದೌರ್ಜನ್ಯಗಳ ವಿರುದ್ಧ ನಡೆದ ಹೋರಾಟಗಳ ಫಲವಾಗಿ 1983ರಲ್ಲಿ ಕಾಂಗ್ರೆಸ್ ಸರ್ಕಾರ ಸೋತು ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂತು, ರಾಜ್ಯದಲ್ಲಿ ಕಾರ್ಮಿಕ ಆಂದೋಲನ ಸ್ವಲ್ಪ ನಿಟ್ಟುಸಿರು ಬಿಡುವಂತಾಯಿತು. ಪೊಲೀಸ್ ಮಧ್ಯಪ್ರವೇಶ ನಿಂತಿತು ಎಂದೇನಲ್ಲ. ಆದರೆ ವಿಜೆಕೆಯವರು ವರ್ಣಿಸಿದಂತೆ **"ಮೈಯೆಲ್ಲಾ ಲಾಠಿಯಿಂದ ಬಾರಿಸುವ ಬದಲು, ಬರೇ ಮೊಣಕಾಲಿಗೆ ಹೊಡೆದರು"** ಈಗ ಹೊಸ ಆರ್ಥಿಕ ನೀತಿಗಳ ಜಾರಿಯಿಂದಾಗಿ ಮತ್ತೆ ಕಾರ್ಮಿಕರ ಹೋರಾಟಗಳಲ್ಲಿ ಪೊಲೀಸರ ಮಧ್ಯಪ್ರವೇಶ ಹೆಚ್ಚುತ್ತಿದೆ. ಇದು ಕಾರ್ಮಿಕ ಹಕ್ಕುಗಳನ್ನು ಮೊಟಕು ಮಾಡುವ ಆಳುವ ವರ್ಗಗಳ ಪ್ರಯತ್ನದ ಭಾಗ ಎಂದು ವಿಜೆಕೆ ವಿವರಿಸಿದರು.

ಪೊಲೀಸರಿಗೇನು ಕೆಲಸ?

ಕಾರ್ಮಿಕರ ಮತ್ತು ಮಾಲೀಕನ ನಡುವೆ ಆತನ ಉದ್ಯೋಗದ ಕುರಿತಂತೆ ಬರುವ ಭಿನ್ನಾಭಿಪ್ರಾಯವೇ ಕೈಗಾರಿಕಾ ವಿವಾದ. ಇದನ್ನು ಸಮಂಜಸವಾಗಿ ಇತ್ಯರ್ಥಪಡಿಸಲು ಸರ್ಕಾರದ ಮಧ್ಯಪ್ರವೇಶ ಅಗತ್ಯವಾಗಬಹುದು. ಆದರೆ ಈ ಮಧ್ಯಪ್ರವೇಶ ಸರ್ಕಾರದ ಲೇಬರ್ ಇಲಾಖೆಯ ಮೂಲಕ ಆಗಬೇಕೆ ಹೊರತು, ಪೊಲೀಸ್ ಇಲಾಖೆಯ ಮೂಲಕವಲ್ಲ ಎಂದರು ಕಾಂ.ವಿ.ಜೆ.ಕೆ.ನಾಯರ್.

ಬ್ರಿಟಿಷ್ ವಸಾತುಶಾಹಿ ಆಡಳಿತ - ಸ್ವಾತಂತ್ರ್ಯ ಸಂಗ್ರಾಮ ಮತ್ತು ಸ್ವಾತಂತ್ರ್ಯೋತ್ತರದ ಆಳುವವರ ನೀತಿಗಳನ್ನು ಹಲವಾರು ನಿದರ್ಶನಗಳ ಮೂಲಕ ವಿವರಿಸಿದರು.(ಅವರ ಪ್ರಬಂಧ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ)


ಇವಕ್ಕೆ ಒಂದೇ ಪರಿಹಾರವೆಂದರೆ ಪೊಲೀಸ್

ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಪಾತ್ರದ ಕುರಿತು ಕಾಂ. ಸೂರಿ ಸ್ಮಾರಕ ವಿಚಾರಸಂಕಿರಣ

ನೀತಿಯನ್ನು ಬದಲಿಸುವುದು. ಇದನ್ನು ನಾವು ಈ ಸರ್ಕಾರದಿಂದ ನಿರೀಕ್ಷಿಸುತ್ತೇವೆ ಎಂದ ವಿ.ಜೆ.ಕೆ.ನಾಯರ್ ಇವು ಈಡೇರಲು ಕೇವಲ ಭಾಷಣಗಳಿಂದಷ್ಟೇ ಸಾಧ್ಯವಿಲ್ಲ, ಹೋರಾಟಗಳು ಅತ್ಯಗತ್ಯ ಎಂದರು.

ಅಸಂಬದ್ಧ ವ್ಯವಸ್ಥೆ

ನಂತರ ಮಾತನಾಡಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ.ಎಸ್.ರಾಮಚಂದ್ರನ್ ಪಿಳ್ಳೈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಮಿಕರ ಹಕ್ಕುಗಳ ರಕ್ಷಣೆಯ ಮಹತ್ವವನ್ನು ವಿವರಿಸಿದರು. ಒಂದು ವಿಭಜಿತ ಸಮಾಜದಲ್ಲಿ ಬಡವರ ಹಿತಾಸಕ್ತಿಗಳನ್ನು ರಕ್ಷಿಸಬೇಕಾದರೆ ಅವರನ್ನು ಸಂಘಟಿಸಿ, ಅವರ ಹಕ್ಕುಗಳ ಅರಿವು ಮೂಡಿಸಿ, ಅದಕ್ಕಾಗಿ ಹೋರಾಡುವಂತೆ ಮಾಡಬೇಕಾಗುತ್ತದೆ.



ಕಾಂ.ಸೂರಿ ತಮ್ಮ ಜೀವಮಾನವಿಡಿ ಅದನ್ನೇ ಮಾಡಿದರು. ಈ ಹೋರಾಟದಲ್ಲಿ ಅವರು ಪೊಲೀಸರನ್ನು ಎದುರಿಸಬೇಕಾಗಿ ಬಂದದ್ದನ್ನು ಅವರು ನೆನಪಿಸಿದರು.

ಆಳರಸರು ಸಂಘಟನೆ ಹಕ್ಕನ್ನು ಮಾನ್ಯ ಮಾಡುವುದಿಲ್ಲ. ಅವರು ಕಾರ್ಮಿಕರನ್ನು ದಮನ ಮಾಡಲು ಪೊಲೀಸರನ್ನು ಬಳಸುತ್ತಾರೆ. ಆದರೆ ಕಾರ್ಮಿಕ ವಿವಾದಗಳಲ್ಲಿ ಪೊಲೀಸರಿಗೇನೂ ಕೆಲಸವಿಲ್ಲ. ಇದನ್ನು 1957ರಲ್ಲಿ ಇಎಂಎಸ್ ಹೇಳಿದಾಗ ದೊಡ್ಡ ಬೊಬ್ಬೆಯೆದ್ದಿತು. ಆದರೆ ಕ್ರಮೇಣ ಇತರ ಹಲವು ರಾಜ್ಯಗಳಲ್ಲಿ ಇದನ್ನು ಒಪ್ಪಲಾಯಿತು. ಅಪರಾಧ ನಡೆದಲ್ಲಿ ಮಾತ್ರ ಪೊಲೀಸರಿಗೆ ಪಾತ್ರವಿದೆ. ಒಂದು ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಜನರು ತಮ್ಮ ಹಕ್ಕುಗಳನ್ನು ಪಡೆಯುವಂತೆ ಪ್ರೋತ್ಸಾಹಿಸಿಸುವುದು ಸರ್ಕಾರದ ಜವಾಬ್ದಾರಿ. ಇದು ಪ್ರಜಾಪ್ರಭುತ್ವ ಹಕ್ಕುಗಳ ಪ್ರಶ್ನೆ, ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಪ್ರಶ್ನೆ ಎಂದ ಅವರು ಇದಕ್ಕೆ ಅಡ್ಡಿಯಾಗಿರುವ ಮೂರು ಅಂಶಗಳತ್ತ ಗಮನ ಸೆಳೆದರು. ಒಂದು, ಸಮಾಜದ ಶ್ರೀಮಂತ ವಿಭಾಗಗಳು, ಆಳುವ ಜನ, ಬಂಡವಾಳಶಾಹಿಗಳು, ಭೂಮಾಲೀಕರು ಪ್ರಜಾಪ್ರಭುತ್ವ ಹಕ್ಕುಗಳನ್ನು ವಿಸ್ತರಿಸಲು ಹಿಂಜರಿಕೆ ತೋರುತ್ತಾರೆ. ಎರಡು, ಹಳೆಯ ವಸಾಹತುಶಾಹೀ ಚೌಕಟ್ಟು ಮುಂದುವರೆ ದಿರುವುದು. ಬ್ರಿಟಿಷರ



ಕಾಲದ ಅಧಿಕಾರಶಾಹಿ, ಪೊಲೀಸ್ ಮತ್ತು ಮಿಲಿಟರಿ ವ್ಯವಸ್ಥೆ ಶೋಷಣಕಾರಿಯಾಗಿತ್ತು. ಅದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸಂಭದ್ಧವಾಗಿತ್ತು. ಆದರೂ ಅದನ್ನು ಮುಂದುವರೆಸ ಲಾಯಿತು. ಮೂರನೆಯದಾಗಿ, ಈಗಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳಡಿ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಧಾಳಿಗಳು ಆರಂಭವಾಗಿವೆ. ನ್ಯಾಯಾಂಗ ಕೂಡಾ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡಲು ಮುಂದಾಗಿದೆ, ಅದು ಕಾರ್ಯಾಂಗದ ಪಾತ್ರವನ್ನು ತಾನೆ ವಹಿಸುತ್ತದೆ, ಮುಷ್ಕರಗಳು, ಬಂದ್‌ಗಳ ಮೇಲೆ ಸಾರಾಸಗಟು ನಿಷೇಧ ಹಾಕುತ್ತಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು. ಇವುಗಳ ಬಗ್ಗೆ ಚರ್ಚೆಯಾಗಬೇಕು ಎಂದು ಕರೆ ನೀಡಿದರು.

ಲಕ್ಷಾಂತರ ಕಾರ್ಮಿಕರಿಗೆ ಬದುಕು ನೀಡಿದ ಸೂರಿ

ರಾಜ್ಯ ಸರ್ಕಾರದ ಪರವಾಗಿ ಮಾತನಾಡಿದ ಕೈಗಾರಿಕಾ ಸಚಿವ ಪಿ.ಜಿ.ಆರ್.ಸಿಂಧ್ಯಾ ರವರು ಸೂರಿಯವರದು 78 ವರ್ಷಗಳ ಸಾರ್ಥಕ ಬದುಕು, ಬೆಂಗಳೂರಿನ ಲಕ್ಷಾಂತರ ಕಾರ್ಮಿಕ ಕುಟುಂಬಗಳಿಗೆ ಬದುಕು ನೀಡಿದ ಬದುಕು ಎಂದು ಶ್ರದ್ಧಾಂಜಲಿ ಅರ್ಪಿಸಿದರು. ಮುಖ್ಯಮಂತ್ರಿಗಳು ಈ ವಿಚಾರ ಸಂಕಿರಣಕ್ಕೆ ಬರಲಾಗದಂತೆ ಕೋಮುವಾದಿ ಶಕ್ತಿಗಳು ಉಂಟು ಮಾಡಿದ ಪರಿಸ್ಥಿತಿಯನ್ನು ಅವರು ಖಂಡಿಸಿದರು.


ರಾಜ್ಯದಲ್ಲಿ ಕಾಂಗ್ರೆಸ್-ಜಾತ್ಯತೀತ ಜನತಾದಳ ಅಧಿಕಾರಕ್ಕೆ ಬಂದಿರುವುದು ಕೇವಲ ಅಧಿಕಾರಕ್ಕಾಗಿಯಲ್ಲ, ಜಾತ್ಯಾತೀತ ಆಳ್ವಿಕೆಗಾಗಿ ಎಂದ ಅವರು ತಮ್ಮ ಸರ್ಕಾರ ಬಡವಿಭಾಗಗಳ ಪರವಾಗಿ ಕೈಗೊಂಡಿರುವ, ಕೈಗೊಳ್ಳಲಿರುವ ಕ್ರಮಗಳ ಬಗ್ಗೆ ಮಾತನಾಡಿದರು. 67 ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡಿನಲ್ಲಿ 3 ರೂ.ಗೆ ಅಕ್ಕಿ ನೀಡಲಾಗುವುದು, ರೈತರಿಗೆ ಸಾಲ ವ್ಯವಸ್ಥೆ ಮಾಡಲಾಗುವುದು, ಆದರೆ ಇಷ್ಟೇ ಸಾಲದು ಎಲ್ಲಾ ಜನವಿಭಾಗಗಳಿಗೆ ರಕ್ಷಣೆ ನೀಡಲಾಗುವುದು ಎಂದ ಅವರು ಈ ಸರ್ಕಾರ ಶೋಷಿತ ವರ್ಗಗಳ ಪರವಾಗಿ ಇದೆ ಎಂಬುದನ್ನು ಕಾರ್ಯತಃ ತೋರಿಸುತ್ತೇವೆ ಅಗತ್ಯವಿದ್ದರೆ ಪೊಲೀಸ್ ನೀತಿ ಬದಲಿಸುತ್ತೇವೆ ಎಂದು ಕಿಕ್ಕಿರಿದು ನೆರೆದ ಕಾರ್ಮಿಕರಿಗೆ, ನೌಕರರಿಗೆ ಭರವಸೆ ನೀಡಿದರು.

ಸಾರ್ವಜನಿಕ ವಲಯ ಮತ್ತು ಸಾಮಾಜಿಕ ನ್ಯಾಯ ಒಂದು ಬಲಿಷ್ಠ ಮತ್ತು ಆರೋಗ್ಯಕರ ಸಮಾಜದ ಹಿತದೃಷ್ಟಿಯಿಂದ ಅಗತ್ಯ ಎಂದು ತಾವು ಭಾವಿಸುವುದಾಗಿ ಹೇಳಿದ ಸಚಿವರು ಸಾರ್ವಜನಿಕ ವಲಯವನ್ನು ಧ್ವಂಸ ಮಾಡಲು ಬಿಡುವುದಿಲ್ಲ, ಅದೇ ರೀತಿ ಕಾರ್ಮಿಕರ ಮೇಲೆ ಎಂದೂ ಪೊಲೀಸ್ ಶಕ್ತಿಯನ್ನು ಬಳಸುವುದಿಲ್ಲ ಎಂದು ಮತ್ತೊಮ್ಮೆ ಹೇಳಿದರು. ಉದ್ಯೋಗಾವಕಾಶ ನಿರ್ಮಿಸುವ ಸಣ್ಣ ಮತ್ತು ಪುಟ್ಟ ಕೈಗಾರಿಕಾ ವಲಯಗಳತ್ತ ಹೆಚ್ಚು ಗಮನ ನೀಡುವುದಾಗಿಯೂ ಅವರು ಹೇಳಿದರು.

ದಮನದ ವಿರುದ್ಧ ಹೋರಾಟ ಅಗತ್ಯ

ಸಿಐಟಿಯು ರಾಜ್ಯ ಅಧ್ಯಕ್ಷ ಕಾಂ.ಬಿ.ಮಾಧವ ಮಾತನಾಡಿ ದೇಶ ಸ್ವತಂತ್ರವಾಗಿ 57 ವರ್ಷಗಳಾದರೂ ಪೊಲೀಸ್ ನೀತಿ ಬದಲಾಗಿಲ್ಲವಾದ್ದರಿಂದ ಈ ವಿಷಯವನ್ನು ಆಯ್ದುಕೊಳ್ಳಲಾಯಿತು ಎಂದರು. ಬ್ರಿಟಿಷರು ದುಡಿಯುವ ಜನಗಳ ಪರವಾಗಿ ದನಿಯೆತ್ತುವುದನ್ನು ರಾಜದ್ರೋಹ ಎನ್ನುತ್ತಿದ್ದರು, ಅವರ ಮೇಲೆ

ಪುಟ 3 ಕ್ಕೆ



ಸೂರಿ ಸ್ಮಾರಕ ಟ್ರಸ್ಟ್‌ಗೆ ನಿವೇಶನ ಕೋರಿಕೆ

ಕಾಂ.ಸೂರಿ ಸ್ಮಾರಕ ಟ್ರಸ್ಟ್‌ಗೆ ಒಂದು ಸೂಕ್ತ ನಿವೇಶನ ಒದಗಿಸಬೇಕೆಂದು ಟ್ರಸ್ಟ್‌ನ ಕಾರ್ಯದರ್ಶಿ ಕಾಂ.ನಿತ್ಯಾನಂದ ಸ್ವಾಮಿ ನೀಡಿದ ಮನವಿಯನ್ನು ಸ್ವೀಕರಿಸಿದ ಸಚಿವರು ಕಾರ್ಮಿಕರಿಗೆ ಹೆಚ್ಚಿನ ಶಕ್ತಿ ನೀಡುವ ಕೇಂದ್ರವಾಗುವ ಟ್ರಸ್ಟಿಗೆ ಎಲ್ಲಾ ಸಹಕಾರ ನೀಡುವುದಾಗಿಯೂ ಆಶ್ವಾಸನೆಯಿತ್ತರು.

ಈ ಸಂದರ್ಭದಲ್ಲಿ ಹಿಂದೆ ಮೈಕೋ ಕಾರ್ಮಿಕರಾಗಿದ್ದ ಕಾಂ.ಗೋವಿಂದರಾಜ್ 10,000-00ರೂ.ಗಳನ್ನು, ಕಾಂ.ಬಾಲಾಜಿ 11,000-00ರೂ.ಗಳನ್ನು, ಕಾಂ.ಎಸ್. ಉಮೇಶ್ 5,000-00 ರೂ.ಗಳನ್ನು ಹಾಗೂ ಹಿಂದೆ ಮೈಕೋ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ.ಶಿವಶಂಕರ್ 10,000 ರೂ.ಗಳನ್ನು ಕಾಂ.ಸೂರಿ ಸ್ಮಾರಕ ಟ್ರಸ್ಟಿಗೆ ತಮ್ಮ ಕಾಣಿಕೆಯಾಗಿ ಅರ್ಪಿಸಿದರು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 3, 2004 ರಿಂದ**
  ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯತಿಗೆ ವಹಿಸುವುದರ ವಿರುದ್ಧ ಮತ್ತು ಸೇವಾ ನಿಯಮಾವಳಿಗಳನ್ನು ರಚಿಸಲು ಆಗ್ರಹಿಸಿ ಅಂಗನವಾಡಿ ನೌಕರರ ಧರಣಿ - ಬೆಂಗಳೂರು
- **ಸೆಪ್ಟೆಂಬರ್ 13, 2004**
  ಅರಣ್ಯಭೂಮಿಯಲ್ಲಿ ಒಕ್ಕಲೆಬ್ಬಿಸುವುದರ ವಿರುದ್ಧ ಭೂಹೀನರಿಗೆ ಭೂಮಿ ನೀಡಲು ಒತ್ತಾಯಿಸಿ ಭೂ ಸಮಾವೇಶ, ಮೂಡಗಣಪತಿ ಕಲ್ಯಾಣ ಮಂಟಪ, ಹೊನ್ನಾವರ
- **ಸೆಪ್ಟೆಂಬರ್ 13, 2004**
  ರಾಜ್ಯ ಸರ್ಕಾರಿ ನೌಕರರ ಚಳುವಳಿಯ ಸಮರಶೀಲ ನಾಯಕಿ ಮೇರಿ ದೇವಾಸಿಯಾ ಸ್ಮರಣಾರ್ಥ ಬೆಂಗಳೂರು, ಹೊಸಪೇಟೆ, ಮೊದಲಾದೆಡೆ ಸಭೆಗಳು
- **ಸೆಪ್ಟೆಂಬರ್ 20, 2004**
  ಕಟ್ಟಡ ಕಾರ್ಮಿಕರ ರಾಜ್ಯಮಟ್ಟದ ಸಭೆ ಕರೂರು ವೈಶ್ಯಾಬ್ಯಾಂಕ್ ಎಂಪ್ಲಾಯಿಸ್ ಯೂನಿಯನ್ ಕಛೇರಿ, ಬಸವನಗುಡಿ, ಬೆಂಗಳೂರು, ಬೆಳಿಗ್ಗೆ 10.30 ಕ್ಕೆ
- **ಸೆಪ್ಟೆಂಬರ್ 5 ರಿಂದ 8, 2004**
  ನಟರಂಗದವರಿಂದ 'ಕಾನೂನು ಹೆಗ್ಗಡತಿ' ನಾಟಕ. ರವೀಂದ್ರ ಕಲಾಕ್ಷೇತ್ರ, ಸಂಜೆ 6.45ಕ್ಕೆ

ಕೋಮುವಾದಿ ಶಕ್ತಿಗಳಿಗೆ ಧರಂ ಸರ್ಕಾರದ ಶರಣಾಗತಿ

ಬಿಜೆಪಿ ನಾಯಕಿ ಉಮಾಭಾರತಿ ವಿರುದ್ಧದ ಮೊಕದ್ದಮೆಗಳನ್ನು ರದ್ದುಪಡಿಸಲು ತಮ್ಮ ಆಕ್ಷೇಪವಿಲ್ಲವೆಂದು ಹೈಕೋರ್ಟ್‌ನಲ್ಲಿ ಹೇಳಿರುವ ರಾಜ್ಯ ಸರ್ಕಾರದ ಕ್ರಮದ ಬಗ್ಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಮಿತಿಯು ತನ್ನ ವಿರೋಧವನ್ನು ವ್ಯಕ್ತಪಡಿಸಬಯಸುತ್ತದೆ. ಕೋಮುವಾದಿ ಶಕ್ತಿಗಳ ಒತ್ತಡದ ತಂತ್ರಗಳಿಗೆ ಈ ಸರ್ಕಾರ ಶರಣಾಗುತ್ತಿರುವುದಕ್ಕೆ ಇದು ಸ್ಪಷ್ಟ ನಿದರ್ಶನವೆಂದು ಪಕ್ಷವು ಭಾವಿಸುತ್ತದೆ.

ಹತ್ತಾರು ವರ್ಷಗಳ ಕಾಲ ವರ್ಷದಲ್ಲಿ ಎರಡು ಬಾರಿ ಹುಬ್ಬಳ್ಳಿ ಧಾರವಾಡ ನಗರಗಳ ಹಾಗೂ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ಜನತೆಯ ಬದುಕನ್ನು ಕಲಕುತ್ತಿದ್ದ ಹಾಗೂ ಹಲವಾರು ಸಾವು ನೋವುಗಳಿಗ ಕಾರಣರಾದ ಕೋಮುವಾದಿಗಳಿಗೆ ಕೃಷ್ಣ ಸರ್ಕಾರ ತನ್ನ ಬೇಜವಾಬ್ದಾರಿತನದಲ್ಲಿ ನೀಡಿದ ರಿಯಾಯತಿಯನ್ನು ಸಮ್ಮಿಶ್ರ ಸರ್ಕಾರವೂ ಮುಂದುವರೆಸಿದಂತಾಗಿದೆ. ಒಂದು ವಾರದ ಹಿಂದೆ ಸಮರ ಸಿದ್ಧವೆಂದು ಮುಖ್ಯಮಂತ್ರಿಗಳು ಘೋಷಿಸಿದ ಹಿನ್ನೆಲೆಯಲ್ಲಿ ಈಗ ಸಮ್ಮಿಶ್ರ ಸರ್ಕಾರ ಧಿಡೀರನೆ ಮಾತುಗಳನ್ನು ಬದಲಿಸುತ್ತಿರುವುದು ಖಂಡನಾರ್ಹ.

ಇಂದು ರಾಜ್ಯದಲ್ಲಿ ತಲೆ ಎತ್ತುತ್ತಿರುವ ಕೋಮುವಾದಿ ಶಕ್ತಿಗಳನ್ನು ಕಾನೂನಿನ ರೀತಿಯುಲ್ಲದೆ, ರಾಜಕೀಯವಾಗಿ ದೃಢವಾಗಿ ಹಿಮ್ಮೆಟ್ಟಿಸಬೇಕಾಗಿದೆ. ಕಳೆದ ಚುನಾವಣೆಯಲ್ಲಿ ಜನತೆ ಮೂರನೆಯ ಭಾರಿಯೂ ಈ ಕೋಮುವಾದಿ ಶಕ್ತಿಗಳನ್ನು ತಿರಸ್ಕರಿಸಿ, ಜಾತ್ಯಾತೀತ ಶಕ್ತಿಗಳ ಪರವಾಗಿ ಜನಾದೇಶವನ್ನು ನೀಡಿದ್ದಾರೆಂಬುದನ್ನು ಮನದಲ್ಲಿ ಇಟ್ಟುಕೊಂಡು ಕಾಂಗ್ರೆ- ಜೆ.ಡಿ.(ಎಸ್) ಸಮ್ಮಿಶ್ರ ಸರ್ಕಾರ ಕೋಮುವಾದಿ ಶಕ್ತಿಗಳ ವಿರುದ್ಧ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸುತ್ತದೆ.

ಈ ನಿಟ್ಟಿನಲ್ಲಿ ರಾಜ್ಯದ ಜಾತ್ಯಾತೀತ ಶಕ್ತಿಗಳು, ಸಂಘಟನೆಗಳು ಕೋಮುವಾದಿ ಶಕ್ತಿಗಳ ಕುತಂತ್ರಗಳನ್ನು ಸೋಲಿಸಲು ಮತ್ತು ಸರ್ಕಾರದ ಮೇಲೆ ಒತ್ತಡವನ್ನು ಹೇರಲು ಮುಂದಾಗಬೇಕು.

ಈವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ವೃತ್ತಿ ಶಿಕ್ಷಣ ಬಿಕ್ಕಟ್ಟು : ಆಡಳಿತ ಮಂಡಳಿ ಪರ ತೀರ್ಮಾನಕ್ಕೆ ಎಸ್‌ಎಫ್‌ಐ ಖಂಡನೆ

ಸರ್ಕಾರ ಮತ್ತು ಖಾಸಗಿ ಆಡಳಿತ ಮಂಡಳಿಗಳ ನಡುವಿನ ಮಾತುಕತೆಯಲ್ಲಿ ವೃತ್ತಿಶಿಕ್ಷಣದಲ್ಲಿ ಉಚಿತ ಸೀಟುಗಳನ್ನು ಉಳಿಸಿಕೊಳ್ಳುವ ತೀರ್ಮಾನ ಕೈಗೊಂಡಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯಸಮಿತಿಯು ಸ್ವಾಗತಿಸುತ್ತದೆ. ಆದರೆ ಉಚಿತ ಸೀಟುಗಳ ಪ್ರಮಾಣ ಕನಿಷ್ಠ ಶೇ.50 ರ ಪ್ರಮಾಣಕ್ಕೆ ನಿಗದಿ ಯಾಗಬೇಕೆಂದೂ ಮತ್ತು ಶುಲ್ಕಗಳನ್ನು ಸರ್ಕಾರಿ ಕಾಲೇಜು ಶುಲ್ಕಗಳ ಮಟ್ಟದಲ್ಲಿ ನಿಗದಿಗೊಳಿಸಬೇಕೆಂದು ಎಸ್‌ಎಫ್‌ಐ ತೀವ್ರವಾಗಿ ಒತ್ತಾಯಿಸುತ್ತದೆ.

ಮಾತುಕತೆಯಲ್ಲಿ ಉಚಿತ ಸೀಟುಗಳ ಪ್ರಮಾಣ ಶೇ.30 ಮಾತ್ರ ಎಂದು ತೀರ್ಮಾನಕ್ಕೆ ಬರಲಾಗಿದೆ. ಈಗ ನಿಗದಿಯಾಗಿರುವಂತೆ ಉಚಿತ ಸೀಟುಗಳ ಅಡಿಯಲ್ಲಿ ಇದು ತಾಂತ್ರಿಕ ಶಿಕ್ಷಣಕ್ಕೆ ವಾರ್ಷಿಕ 15 ಸಾವಿರ, ವೈದ್ಯಕೀಯಕ್ಕೆ ವಾರ್ಷಿಕ 35 ಸಾವಿರ ದಂತವೈದ್ಯಕೀಯಕ್ಕೆ 25 ಸಾವಿರ ರೂಪಾಯಿಗಳನ್ನು ನೀಡುವುದು ಬಡರೈತ-ಕಾರ್ಮಿಕರು -ಕೂಲಿಕಾರರಿಗೆ ಸಾಧ್ಯವೇ ಇಲ್ಲ. ಈ ನೀತಿ ಬಡ-ಮಧ್ಯಮವರ್ಗ ವಿದ್ಯಾರ್ಥಿಗಳ ಶಕ್ತಿಯನ್ನು ಮೀರಿದ್ದಾಗಿದ್ದು ಶುಲ್ಕಗಳನ್ನು ಕಡಿತಗೊಳಿಸಬೇಕೆಂದು SFI ತೀವ್ರವಾಗಿ ಒತ್ತಾಯಿಸುತ್ತದೆ.

ಖಾಸಗಿ ಕಾಲೇಜು ಆಡಳಿತ ಮಂಡಳಿಗಳು ನೀಡಿರುವ ಅತ್ಯಂತ ಉತ್ಪ್ರೇಕ್ಷಿತ ಖರ್ಚು-ವೆಚ್ಚಗಳ ಆಧಾರದಲ್ಲಿ ನಿವೃತ್ತ ನ್ಯಾಯಮೂರ್ತಿ ಮುರಗೋಡ್ ಸಮಿತಿಯು ನಿಗದಿಗೊಳಿಸಿದ ಏಕರೂಪ ಶುಲ್ಕವು ತಾಂತ್ರಿಕ ಶಿಕ್ಷಣದಲ್ಲಿ ತಲಾ ವಿದ್ಯಾರ್ಥಿಗೆ ವಾರ್ಷಿಕ 32,590/- ರೂ ಇತ್ತು ಇದರಂತೆ ನೂರು ಸೀಟುಗಳಿಗೆ 32 ಲಕ್ಷ 59 ಸಾವಿರಗಳು ಸಂಗ್ರಹವಾಗುತ್ತಿತ್ತು. ಈಗ ನಿಗದಿಯಾಗಿರುವ ಶುಲ್ಕ ಸ್ವರೂಪದಂತೆ ಪ್ರತಿ ನೂರು ಸೀಟುಗಳಿಗೆ ಆಡಳಿತ ಮಂಡಳಿಗಳಿಗೆ 69.5 ಲಕ್ಷ ರೂ.ಗಳು ಸಂಗ್ರವಾಗಲಿದ್ದು, ಮುರಗೋಡ್ ಸಮಿತಿ ನಿಗದಿಗೊಳಿಸಿದ್ದ ಶುಲ್ಕಕ್ಕಿಂತ 36 ಲಕ್ಷ 91 ಸಾವಿರ ರೂಗಳು ಹೆಚ್ಚಾಗಲಿದ್ದು ಖಾಸಗಿ ಆಡಳಿತ ಮಂಡಳಿಗಳ ಸುಲಿಗೆಗೆ ಪೂರಕವಾಗಿರುವ ಈ ಶುಲ್ಕ ಸ್ವರೂಪವನ್ನು ವಿದ್ಯಾರ್ಥಿಗಳ ಹಿತಾಸಕ್ತಿಗಳಿಗೆ ಪೂರಕವಾಗಿ ಪುನರ್ರಚಿಸಬೇಕೆಂದು ಎಸ್‌ಎಫ್‌ಐ ಒತ್ತಾಯಿಸುತ್ತದೆ.

ಇದೇ ರೀತಿ ವೈದ್ಯಕೀಯ ಶುಲ್ಕಗಳಲ್ಲಿ ಮುರಗೋಡ್ ಸಮಿತಿಯ ಶುಲ್ಕಗಳ ಆಧಾರದಲ್ಲಿ ನೂರು ಸೀಟುಗಳಿಗೆ ಸಂಗ್ರಹವಾಗುವ ಮೊತ್ತಕ್ಕಿಂತ ಹೊಸ ಶುಲ್ಕ ಸ್ವರೂಪದಲ್ಲಿ ಒಟ್ಟಾರೆ ಸುಮಾರು 210 ಕೋಟಿ ರೂ.ಗಳು, ಹೆಚ್ಚುವರಿಯಾಗಿ 50 ರಿಂದ 60 ಕೋಟಿ ರೂ.ಗಳು ಹೆಚ್ಚು ಹಣ ಸಂಗ್ರಹವಾಗಲಿದ್ದು ಈ ರೀತಿ ಖಾಸಗಿ ಕಾಲೇಜು ಆಡಳಿತ ಮಂಡಳಿಗಳಿಗೆ ಹೆಚ್ಚುವರಿ ಶುಲ್ಕ ವಸೂಲಿಗೆ ಅವಕಾಶ ನೀಡುವ ಬದಲಿಗೆ ಉಚಿತ ಸೀಟಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶುಲ್ಕ, ಕಡಿತ ಮಾಡುವ ಮೂಲಕ ವೃತ್ತಿ ಶಿಕ್ಷಣದಲ್ಲಿ ಸಾಮಾಜಿಕ ನ್ಯಾಯವನ್ನು ಕಾಪಾಡಬೇಕೆಂದು ಎಸ್‌ಎಫ್‌ಐ ಸಂಘಟನೆ ತೀವ್ರವಾಗಿ ಒತ್ತಾಯಿಸುತ್ತದೆ.

ಹೊನ್ನಾವರದಲ್ಲಿ ಭೂ ಸಮಾವೇಶ

ಕರ್ನಾದಟಕ ಪ್ರಾಮತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಉತ್ತರ ಕನ್ನಡ ಜಿಲ್ಲಾ ಅರಣ್ಯ ಅತಿಕ್ರಮಣಕಾರರ ಹೋರಾಟ ಸಮಿತಿಗಳು ಸೆಪ್ಟೆಂಬರ್ 13, 2004 ರಂದು ಜಂಟಿ ಆಶ್ರಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾರದಲ್ಲಿ ಸೆಪ್ಟೆಂಬರ್ 13, 2004ರಂದು ಭೂಸಮಾವೇಶವನ್ನು ಸಂಘಟಿಸಲಾಗಿದ್ದು, ಕೃಷಿಕೂಲಿಕಾರರ ಸಂಘದ ಅಖಿಲ ಭಾರತ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯರಾದ ವಿಜ ರಾಘವನ್ ಉದ್ಘಾಟಿಸಲಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಉಳಿಯಾಲದಲ್ಲಿ 25 ವರ್ಷಗಳ ಹಿಂದೆ ನಡೆದ ಅರಣ್ಯ ಭೂಮಿ ಅತಿಕ್ರಮಣದ ಹೋರಾಟವನ್ನು ನೆನಪಿಸಿಕೊಳ್ಳಲಿರುವ ಈ ಸಮಾವೇಶವು ರೈತಾಪಿ ಜನತೆ, ಕೃಷಿ ಕೂಲಿಕಾರರು ಹಾಗೂ ಅರಣ್ಯ ಅತಿಕ್ರಮಣಕಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ರಾಜ್ಯಮಟ್ಟದ ಹೋರಾಟವನ್ನು ನಡೆಸಲು ಅಗತ್ಯವಾದ ಅಂಶಗಳನ್ನು ಚರ್ಚಿಸಲಿದೆ. ಉಳಿಯಾಳ ಭೂಹೋರಾಟದಲ್ಲಿ ಪೊಲೀಸರ ಗುಂಡಿಗೆ ತೆಗ್ಗಿನಳ್ಳಿ ಗ್ರಾಮದ ಮಾರುತಿ ಗಣೇಶಪ್ಪ ಪವಾರ್ ಬಲಿಯಾಗಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.

ಜಾಗತೀಕರಣದ ಇಂದಿನ ದಿನಗಳಲ್ಲಿ ಭೂಮಿತಿ ಕಾಯಿದೆಗೆ ತಿದ್ದುಪಡಿ ತಂದು ಬಡರೈತರ ಭೂಮಿ ಸಿರಿವಂತರ ಕೈಸೇರುತ್ತಿದೆ. ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರಕಾರಗಳು ಹಲವಾರು ವರ್ಷಗಳಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮತ್ತು ವಸತಿಗೆ ಉಪಯೋಗಿಸಿದ ರೈತರ ಮೇಲೆ ದಬ್ಬಾಳಿಕೆ ಆರಂಭಿಸಿದೆ. ಒಕ್ಕಲೆಬ್ಬಿಸುವ ಪ್ರಯತ್ನ ನಡೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಹಳಿಯಾಲ ಭೂ ಚಳುವಳಿ ನೆನಪಿನಿಂದ ಸ್ಪೂರ್ತಿ ಪಡೆದು ಭೂಹೀನರ ಬಡರೈತರ ಅರಣ್ಯಭೂಮಿ ಸಾಗುವಳಿದಾರರ ಬೃಹತ್ ಹೋರಾಟ ನಡೆಸಲಾಗಿದೆ. ಆ ನಿಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಮೂಢಗಣಪತಿ ಕಲ್ಯಾಣ ಮಂಟಪದಲ್ಲಿ ಸೆಪ್ಟೆಂಬರ್ 13, 2004 ರಂದು ನಡೆದಿರುವ ಭೂ ಸಮಾವೇಶ ಪ್ರಮುಖ ಹೆಜ್ಜೆಯಾಗಲಿದೆ.

ಪ್ರಾದೇಶಿಕ ಅಸಮಾನತೆ ವಿರುದ್ಧ ರಾಜ್ಯ ಮಟ್ಟದ ಸಮಾವೇಶ

ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆ ಪ್ರಾದೇಶಿಕ ಅಸಮಾನತೆಯನ್ನು ಸೃಷ್ಟಿಸುತ್ತದೆ. ಉಳ್ಳವರ ಪರವಾಗಿರುವ ಅದರ ನೀತಿಯಿಂದಾಗಿ ಕೆಲವೇ ಪ್ರದೇಶಗಳು ಅಭಿವೃದ್ಧಿಯತ್ತ ಸಾಗಿದರೆ ಬಹುಶೇಕ ಪ್ರದೇಶಗಳು ಹಿಂದುಳಿಯುವಿಕೆಗೆ ಕಾರಣವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಭೂಸುಧಾರಣೆ ಜಾರಿಯಾಗದೆ ಇರುವುದರಿಂದಾಗಿ ಅಭಿವೃದ್ಧಿ ಕುಂಠಿತವಾಗಿದ್ದರೆ ಕೈಗಾರಿಕೆಗಳು ಕೆಲವೇ ಕೇಂದ್ರಗಳಲ್ಲಿ ಕೇಂದ್ರಿತವಾಗಿರುವುದರಿಂದಲೂ ಪ್ರಾದೇಶಿಕ ಅಸಮಾನತೆ ಉಂಟಾಗುತ್ತದೆ.

ಇದರಿಂದ ಶ್ರೀಮಂತರು ಶ್ರೀಮಂತರಾಗುತ್ತಾ ಹೋಗುವುದು ಬಡವರು ಇನ್ನಷ್ಟು ಬಡವರಾಗುವುದು ಮಾತ್ರವಲ್ಲದೆ ಮುಂದುವರೆದ ಪ್ರದೇಶಗಳು ಇನ್ನಷ್ಟು ಅಭಿವೃದ್ಧಿ ಹೊಂದಿದರೆ ಹಿಂದುಳಿ ಪ್ರದೇಶಗಳು ಹಿಂದಕ್ಕೆ ತಳ್ಳಲ್ಪಡುತ್ತವೆ. ಜನರ ಅತೃಪ್ತಿಯನ್ನು ಉಪಯೋಗಿಸಿಕೊಂಡು ಪ್ರತ್ಯೇಕತಾವಾದಿ ಶಕ್ತಿಗಳು, ಛಿದ್ರಕಾರಿ ಶಕ್ತಿಗಳು ಬೆಳೆಯುತ್ತವೆ. ಇದು ಪ್ರಜಾಪ್ರಭುದ್ಧ ತಳಹದಿಗೆ. ಅಪಾಯವನ್ನು ಒಡ್ಡುತ್ತದೆ.

ಇಂತಹ ಗಂಭೀರ ಸನ್ನಿವೇಶದಲ್ಲಿ "ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಿಸಲು ಪರ್ಯಾಯಮಾರ್ಗೋಪಾಯಗಳು ಕುರಿತು ರಾಜ್ಯಮಟ್ಟದ ಸಮಾವೇಶವನ್ನು ಗುಲ್ಬರ್ಗದಲ್ಲಿ ಸಂಘಟಿಸಲಾಗಿದೆ. ಸೆಪ್ಟೆಂಬರ್ 5 ರಂದು ಕೂಬಾ ಕಲ್ಯಾಣಮಂಟಪದಲ್ಲಿ ಬೆಳಿಗ್ಗೆ 10.30ಕ್ಕೆ ಆರಂಭವಾಗುವ ಸಮಾವೇಶವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು ಉದ್ಘಾಟಿಸಲಿದ್ದು ಖ್ಯಾತ ಸಾಹಿತಿಗಳಾದ ಶಾಂತರಸರು ಅಧ್ಯಕ್ಷತೆ ವಹಿಸಲಿದ್ದಾರೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ಕೃಷಿ ಉಪನಿರ್ದೇಶಕರಾದ ಜಿ.ಎನ್.ನಾಗರಾಜ್‌ರವರು ಆಶಯಭಾಷಣ ನೀಡಲಿದ್ದು ಐಕ್ಯರಂಗ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್ ಪ್ರಸ್ತಾವನೆಯನ್ನು ಮಂಡಿಸಲಿದ್ದಾರೆ.

ಈ ಕೆಳಗಿನ 4 ಪ್ರಮುಖ ವಿಷಯಗಳ ಕುರಿತು ಪ್ರಮುಖರು ವಿಷಯ ಮಂಡಿಸಲಿದ್ದು ಮುಂದಿನ ದಿನಗಳಲ್ಲಿ ಜನಪರ ಚಳುವಳಿಗೆ ಸ್ಪಷ್ಟ ದಿಕ್ಸೂಚಿಯನ್ನು ಒದಗಿಸಲಿದೆ.

1. ಕರ್ನಾಟಕದ ಪ್ರಾದೇಶಿಕ ಅಸಮಾನತೆ : ಅಭಿವೃದ್ಧಿಯ ಕುರಿತು ವರದಿಗಳು - ಒಂದು ವಿಶ್ಲೇಷಣೆ
2. ಮಾನವ ಅಭಿವೃದ್ಧಿ , ಭೂಸಂಬಂದಗಳು ಹಾಗೂ ಕೃಷಿ
3. ಪ್ರಾದೇಶಿಕ ಅಸಮಾನತೆ ಮತ್ತು ಸಾಮಾಜಿಕ ಅಸಮಾನತೆ ಅಂತರ್‌ಸಂಬಂಧಗಳು
4. ಪ್ರಾದೇಶಿಕ ಅಸಮಾನತೆ ನಿವಾರಣೆ: ಜನಚಳುವಳಿಗಳ ಕಣ್ಣೋಟ

ಕಾಂ. ಸೂರಿ ಸ್ಮಾರಕ ವಿಚಾರಸಂಕಿರಣ......

ಪುಟ 2 ರಿಂದ

ಪಿತೂರಿ ಮೊಕದ್ದಮೆಗಳನ್ನು ಹಾಕುತ್ತಿದ್ದರು. ಅದೇ ಮನೋಭಾವ ಈಗಲೂ ಮುಂದುವರೆಯುತ್ತಿದೆ ಎಂದು ಖೇದ ವ್ಯಕ್ತಪಡಿಸುತ್ತಾ ಕಾರ್ಮಿಕರನ್ನು ಶತ್ರುಗಳಂತೆ ಕಾಣುವುದು ಸರ್ಕಾರದ ನೀತಿಯಾಗಿದೆ. ಕಾರ್ಮಿಕರಿಗೆ ರಕ್ಷಣೆ ನೀಡಬೇಕೆನ್ನುವ ಮನೋಭಾವ ಪೋಲೀಸ್ ಇಲಾಖೆಯಲ್ಲಿಲ್ಲ. ಸಾವಿರಾರು ಕಾರ್ಮಿಕರ ಬದುಕಿನೊಂದಿಗೆ ಚೆಲ್ಲಾಟವಾಡುವ ಲಾಕೌಟ್ ಅವರಿಗೆ ಅಪರಾಧವಾಗಿ ಕಾಣುತ್ತಿಲ್ಲ. ಸಮಾಜ ಘಾತುಕ ಮಾಲಿಕರನ್ನು ಶಿಕ್ಷಿಸುವ ಬದಲು, ಅವರ ವಿರುದ್ಧ ದನಿಯೆತ್ತಿದವರನ್ನು ಶಿಕ್ಷಿಸುತ್ತಾರೆ ಎಂದರು.

ಈ ಪೋಲೀಸ್ ನೀತಿಯನ್ನು ಬದಲಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ. ಆದರೆ ಒಬ್ಬ ಮಂತ್ರಿಯ ಮನಪರಿವರ್ತನೆ ಯಾದರೆ ಸಾಲದು. ತಾತ್ವಿಕ ತೀರ್ಮಾನ ಅಗತ್ಯವಿದೆ. ಅದಕ್ಕೆ ಸಂಘಟಿತ ಕಾರ್ಮಿಕ ವರ್ಗ ಹೋರಾಟ ಮಾಡಬೇಕಾಗಿದೆ ಎಂದು ಅವರು ಕರೆ ನೀಡಿದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಜಿ.ಎನ್.ನಾಗರಾಜ್ ಈಗಿನ ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿ ಒಂದು ಹೊಸ ಪ್ರಯೋಗ, ಮೊತ್ತ ಮೊದಲ ಬಾರಿಗೆ ಶೇ.56 ಜನ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿರುವ ಸರ್ಕಾರ ಎಂಬುದನ್ನು ಸರ್ಕಾರ ನಡೆಸುವವರು ನೆನಪಿಟ್ಟುಕೊಳ್ಳಬೇಕು ಎಂದರು. ಜನರ ಪರವಾಗಿ ಕೆಲಸ ಮಾಡಿ ಐದು ವರ್ಷಗಳ ಕಾಲ ಈ ಸರ್ಕಾರ ಉಳಿಯಬೇಕು, ಮತ್ತೆ ಅಧಿಕಾರಕ್ಕೆ ಬರುವ ರೀತಿಯಲ್ಲಿ ಆಡಳಿತ ನಡೆಸಬೇಕು ಎಂಬ ದುಡಿಯುವ ವರ್ಗಗಳ ನಿರೀಕ್ಷೆಗೆ ದನಿ ನೀಡುತ್ತಾ ಪೋಲೀಸರ ಧೋರಣೆಯನ್ನು ಸರ್ಕಾರ ಬದಲಿಸಬೇಕು ಎಂದರು. ಪೋಲೀಸರು ಮಾಲೀಕರಿಗೆ ಸಲಹಾಗಾರರಂತೆ ವರ್ತಿಸುತ್ತಿದ್ದಾರೆ, ಅವರೇ ಹೇಳಿ ದೂರುಗಳನ್ನು ಬರೆಸಿಕೊಂಡು ಅವರೇ ಕ್ರಮ ಕೈಗೊಳ್ಳುತ್ತಾರೆ. ಮಂತ್ರಿಗಳು 'ಅಗತ್ಯವಿದ್ದರೆ' ಪೋಲೀಸ್ ನೀತಿ ಬದಲಿಸುತ್ತೇವೆ ಎಂಬ ಭರವಸೆ ನೀಡಿದ್ದಾರೆ. ಅದು ಅಗತ್ಯವಿದೆ, ಆ ಭರವಸೆ ಜಾರಿಯಾಗುವಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂದ ಅವರು ಚಾಟಿ-ಮೇಟಿ ಎರಡೂ ಜತೆಗಿರಬೇಕು, ಇಲ್ಲವಾದರೆ ಮೂಗುದಾರವಿಲ್ಲದ ಎತ್ತು ಹಸಿರು ಕಂಡಲ್ಲೆಲ್ಲಾ ಮೇಯಲು ಹೋಗುತ್ತದೆ ಎಂದು ಎಚ್ಚರಿಸಿದರು.

ವಿಚಾರ ಸಂಕಿರಣದ ಸ್ವಾಗತ ಭಾಷಣ ಮಾಡಿದ ದತ್ತಿ ಉಪನ್ಯಾಸ ಸಮಿತಿಯ ಕಾರ್ಯದರ್ಶಿಯವರಾದ ಕಾಂ.ಕೆ.ಪ್ರಕಾಶ್‌ರವರು ಕಾಂ.ಸೂರಿಯವರ ಹೋರಾಟದ ಬದುಕನ್ನು ನೆನಪಿಸಿಕೊಟ್ಟರು. ಕೊನೆಯಲ್ಲಿ ಸಿಐಟಿಯು ಕಾರ್ಯದರ್ಶಿ ಕಾಂ.ಎಸ್.ಪ್ರಸನ್ನಕುಮಾರ್ ವಂದನಾರ್ಪಣೆ ಮಾಡಿದರು.

ದತ್ತಿ ಉಪನ್ಯಾಸ ಸಮಿತಿಯ ಅಧ್ಯಕ್ಷರಾಗಿರುವ ಹಾಗೂ ಕಾಂ.ಸೂರಿಯವರ ಪತ್ನಿ ಯಶೋಧ ಸೂರ್ಯ ನಾರಾಯಣರಾವ್‌ರವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾಂ.ಸೂರಿಯವರ ಪುತ್ರಿಯರಾದ ಮೀರಾ, ರೇಖಾ ಮತ್ತು ಅವರ ಅಳಿಯಂದಿರು, ಮೊಮ್ಮಕ್ಕಳು ಸಹ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

- ಕೆ.ವಿ.

ಕಳಪೆ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ವಿರುದ್ಧ
ಕೆಪಿಆರ್‌ಎಸ್ ಹೋರಾಟ

ಕಳೆದ ಮೂರು ವರ್ಷಗಳಲ್ಲಿ ಬರದ ಛಾಯೆಯಿಂದ ಮತ್ತು ಸರ್ಕಾರದ ನಿರ್ಲಕ್ಷ್ಯದಿಂದಾಗಿ ನಮ್ಮ ರಾಜ್ಯವೊಂದರಲ್ಲೇ 500ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿ ಇಡೀ ರೈತಾಪಿ ವರ್ಗವನ್ನೆ ಅಲುಗಾಡಿಸಿತ್ತು. ಈ ವರ್ಷದ ಮಳೆ ಒಂದಷ್ಟು ನೆಮ್ಮದಿ ತರುವಂತಿರುವಾಗಲೇ ಕಳಪೆ ರಸಗೊಬ್ಬರ ಮತ್ತು ಬಿತ್ತನೆ ಬೀಜ ವಿತರಣೆಯಿಂದಾಗಿ ಲಕ್ಷಾಂತರ ರೂಪಾಯಿ ನಷ್ಟವುಂಟಾಗಿರುವುದು ಕಳವಳಕಾರಿಯಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘವು ತನ್ನ ಪ್ರತಿಭಟನೆ ಮತ್ತು ಹೋರಾಟಗಳ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದರೂ ಸಹ ಸರ್ಕಾರ ಮೌನ ವಹಿಸಿರುವುದು ಇನ್ನಷ್ಟು ಆತಂಕ ಸೃಷ್ಟಿ ಮಾಡಿದೆ.

ಘಟನೆಯ ಹಿನ್ನೆಲೆ :

ಬೆಂಗಳೂರು ಜಿಲ್ಲೆಯ ಹೊಸಕೋಟೆ, ದೊಡ್ಡಬಳ್ಳಾಪುರ, ದೇವನಹ್ಳಿ, ಆನೇಕಲ್ಲು, ಕೋಲಾರ ಜಿಲ್ಲೆಯ ಮಾಲೂರು, ಕೋಲಾರ, ಮುಂತಾದ ತಾಲ್ಲೂಕುಗಳಲ್ಲಿ ಭೀಕರ ಬರಗಾಲದಿಂದಾಗಿ ಅಂತರ್ಜಲ ಕುಸಿದಿದ್ದು ರೈತರು ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ 1000 ಅಡಿಗಳಿಗೂ ಹೆಚ್ಚು ಆಳ ಬೋರ್‌ವೆಲ್‌ಗಳನ್ನು ಕೊರೆದು ಕೃಷಿ ಮಾಡುತ್ತಿದ್ದಾರೆ. ಕೆಪಿಟಿಸಿಎಲ್‌ನ ನೂತನ ನೀತಿಯಿಂದಾಗಿ ಹೊಸ ವಿದ್ಯುತ್ ಸಂಪರ್ಕ ಪಡೆಯಲಿಕ್ಕೇ ರೂ.1.5 ಲಕ್ಷ ಬೇಕಾದರೆ ಇನ್ನು ಬೋರ್‌ವೆಲ್ ಕೊರೆಯಲು ರೂ.1 ಲಕ್ಷಕ್ಕಿಂತಲೂ ಹೆಚ್ಚಾಗುತ್ತದೆ. ಬ್ಯಾಂಕುಗಳು ರೈತರಿಗೆ ಸಮರ್ಪಕವಾಗಿ ಸಾಲ ನಿಡುವಲ್ಲಿ ವಿಫಲವಾಗಿರುವುದರಿಂದ ಬಹುತೇಕ ರೈತರು ಲೇವಾದೇವಿಗಾರರ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಾರೆ. ಇಷ್ಟೆಲ್ಲ ಅಡಚಣೆಗಳೊಂದಿಗೆ ಕಳಪೆ ಗುಣಮಟ್ಟದ ವಿದ್ಯುತ್ ಸರಬರಾಜು, ದುಬಾರಿ ಬೆಲೆಯ ಬಿತ್ತನೆ ಬೀಜ ಮತ್ತು ಗೊಬ್ಬರಗಳನ್ನು ಉಪಯೋಗಿಸಿ ತರಕಾರಿ ಬೆಳೆಗಳನ್ನು ವರ್ಷದ ವಿವಿಧ ಕಾಲದಲ್ಲಿ ವಾಯುಗುಣಕ್ಕನುಗುಣವಾಗಿ ಬೆಳೆಯುತ್ತಾರೆ. ಇದರಲ್ಲಿ ಕ್ಯಾರೆಟ್ ಪ್ರಮುಖ ಬೆಳೆಯಾಗಿದ್ದು ಏಪ್ರಿಲ್‌ನಿಂದ ಜುಲೈ ತಿಂಗಳವರೆಗೆ ಬೆಳೆಯಲಾಗುತ್ತದೆ.

ಖಾಸಗಿ ಕಂಪನಿಯ ಏಕಸ್ವಾಮ್ಯತೆ ಮತ್ತು ವಂಚನೆ :

ಈ ಪ್ರದೇಶಗಳಲ್ಲಿ ಜಪಾನಿನ ಬಹುರಾಷ್ಟ್ರೀಯ ಕಂಪನಿ ಅಭಿವೃದ್ಧಿಪಡಿಸಿರುವ 'ಸೂಪರ್ ಟಾಕಿ' ಬ್ರಾಂಡಿನ ನಕಲಿ ಕ್ಯಾರೆಟ್ ಬೀಜಗಳನ್ನು ವಿತರಕರಾದ ನ್ಯಾಷನಲ್ ಸೀಡ್ಸ್ ಕಾರ್ಪೋರೇಷನ್‌ನ ಮಾಲೀಕ ಸೂರ್ಯನಾರಾಯಣಶೆಟ್ಟಿ ಮತ್ತು ಮಾರುತಿ ಆಗ್ರೋ ಏಜೆನ್ಸಿಯ ಬೆಟ್ಟಳ್ಳಿ ನಾರಾಯಣಪ್ಪನವರು ಸಾವಿರಾರು ಕೆ.ಜಿ. ಪ್ರಮಾಣದಲ್ಲಿ ರೈತರಿಗೆ ಸರಬರಾಜು ಮಾಡಿದ್ದಾರೆ. ಕಳೆದ ಬಾರಿಯ ಬೆಳೆಯಲ್ಲಿ ಸರಿಸುಮಾರಾಗಿ ಫಲ ನೀಡಿದ್ದರಿಂದ ಪರ್ಯಾಯವಿಲ್ಲದ ರೈತರಿಗೆ ಯವುದೇ ರಶೀತಿ ಸಹ ನೀಡದೆ ಸ್ವಯಂಕೃತ ಬೇಡಿಕೆಯನ್ನು ಸೃಷ್ಟಿಸಿ 300 ಗ್ರಾಮ ಟಿನ್ ಬೀಜಕ್ಕೆ ರೂ.350 ಗಳ ಬದಲಾಗಿ ರೂ. 750 ರಿಂದ 800 ವರೆಗೂ ದುಬಾರಿ ಬೆಲೆಯಲ್ಲಿ ಸವಿರಾರು ಕೆ.ಜಿ. ನಕಲಿ ಬೀಜಗಳನ್ನು ಮಾರಾಟ ಮಾಡಿರುತ್ತಾರೆ. ಮಾರಾಟದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮಾರಾಟ ಬೆಲೆ ಲೇಬಲ್‌ಅನ್ನು ತಾವೇ ಅಂಟಿಸಿ ಸಾಧ್ಯವಿರಬಹುದಾದಷ್ಟು ವಿವಧ ಬೆಲೆಗೆ ಮಾರಾಟ ಮಾಡಿರುತ್ತಾರೆ. ಎಕರೆಯೊಂದಕ್ಕೆ ರೂ.20,000ದಷ್ಟು ಬೆಳೆಗಾಗಿ ಖರ್ಚಾಗಿದ್ದು 1,000 ಎಕರೆಗೂ ಹೆಚ್ಚು ಬೆಳೆ ನಕಲಿ ಬೀಜದಿಂದಾಗಿ ಕವಲೊಡೆದು ಬೆಳೆ ನಷ್ಟವಾಗಿ ಬೆಳೆದದ್ದನ್ನು ಉಳುಮೆ ಮಾಡಿ ಭೂಮಿಯಲ್ಲೇ ಬಿಡಲಾಗಿದೆ. ಈ ಹಿನ್ನಲೆಯಲ್ಲಿ ರೈತರು ಸಾಮೂಹಿಕವಗಿ ವಿಷ ಕುಡಿದು ಸಾಲದ ಹೊರೆಯಿಂದಾಗಿ ಮತ್ತು ಬೆಳೆನಷ್ಟದಿಂದಾಗಿ ಸಾಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೆಪಿಆರ್‌ಎಸ್ ಹೋರಾಟ :

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ವಂಚನೆಗೊಳಗಾದ ರೈತರಿಗೆ ನ್ಯಾಯ ಒದಗಿಸಲು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ವು ಜಿಲ್ಲಾ ಕಾರ್ಯದರ್ಶಿಗಳಾದ ಆರ್.ಆರ್.ಮನೋಹರ್‌ರವರ ನಾಯಕತ್ವದಲ್ಲಿದ ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರು ಮತ್ತು ಸಹ ತೋಟಗಾರಿಕಾ ಅಧಿಕಾರಿಗಳಿಗೆ ದೂರು ನೀಡಿ ಬೀಜ ವಿತರಕರ ಬಂಧನಕ್ಕಾಗಿ ಮತ್ತು ನಷ್ಟಕ್ಕೀಡಾದ ರೈತರಿಗೆ ಪರಿಹಾರ ನೀಡಲು ಒತ್ತಾಯಿಸಿತು. ಸಹಾಯಕ ನಿರ್ದೇಶಕರು ಈ ವಿಷಯದ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಲು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ರವರಿಗೆ ಕೋರಿದಾಗ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವೊಂದು ಸಮೀಕ್ಷೆ ನಡೆಸಿ ಸುಮಾರು 400 ಎಕರೆಯಷ್ಟು ಕ್ಯಾರೆಟ್ ಬೆಳೆ ನಷ್ಟವಾಗಿದೆಯೆಂದೂ ಮತ್ತು ಬೆಳೆ ನಷ್ಟಕ್ಕೆ ಹೆಚ್ಚು ಮಳೆ ಕಾರಣವೇ ಹೊರತು ನಕಲಿ ಬೀಜ ಕಾರಣವಲ್ಲವೆಂದು ವರದಿ ನೀಡಿದರು. ಈ ವರದಿಯು ಬೀಜ ವಿತರಕರ - ವಿಜ್ಞಾನಿಗಳ ಶಾಮೀಲನ್ನು ಎತ್ತಿಹಿಡಿಯುತ್ತದಷ್ಟೆ. ಏಕೆಂದರೆ ಈ ವರ್ಷವೂ ಸಹ ಬೆಂಗಳೂರು ನಗರ ಬಾಗವನ್ನು ಹೊರತುಪಡಿಸಿದರೆ ಬೆಳೆ ನಷ್ಟಕ್ಕೀಡಾಗಿರುವ ಬೆಂಗಳೂರು ಜಿಲ್ಲೆಯ ಹೊಸಕೋಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಆನೇಕಲ್ಲು, ಕೋಲಾರ ಜಿಲ್ಲೆಯ ಮಾಲೂರು, ಕೋಲಾರ ಪ್ರದೇಶಗಳಲ್ಲಿ ಹೆಚ್ಚಾಗಿ ಮಳೆಯೇ ಆಗಿಲ್ಲ.



ಈ ಸಂಬಂಧವಾಗಿ ದಿನಾಂಕ 27.07.04 ರಂದು ಹಲವು ಹಕ್ಕೋತ್ತಾಯಗಳನ್ನು ಮುಂದಿಟ್ಟು ಮಾಜಿ ಶಾಸಕರೂ ಮತ್ತು ಕೆಪಿಆರ್‌ಎಸ್, ಬೆಂಗಳೂರು ಜಿಲ್ಲಾ ಸಮಿತಿಯ ಗೌರವಾಧ್ಯಕ್ಷರಾದ ಸೂ.ರಂ. ರಾಮಯ್ಯ ಮತ್ತು ಅಧ್ಯಕ್ಷರಾದ ಎನ್. ವೆಂಕಟಾಚಲಯ್ಯನವರ ನಾಯಕತ್ವದಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನೆನಡೆಸಿ ವಿಧಾನಸೌಧಕ್ಕೆ ತೆರಳಿ ಕೃಷಿ ಮಂತ್ರಿಗಳಾದ ಶ್ರೀನಿವಾಸಗೌಡರವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿದ ಕೃಷಿ ಮಂತ್ರಿಗಳು ಕೃಷಿ ವಿಜ್ಞಾನಿಗಳ ವರದಿಯಲ್ಲಿನ ಬೆಳೆ ನಷ್ಟಕ್ಕೆ ಹೆಚ್ಚು ಮಳೆ ಕಾರಣವೆಂಬುದನ್ನು ಒಪ್ಪದೆ, ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಕೆಪಿಆರ್‌ಎಸ್‌ನ ಹಕ್ಕೊತ್ತಾಯಗಳು : ಕಳಪೆ ಬಿತ್ತನೆಯಿಂದ ಬೆಳೆ ನಷ್ಟಕ್ಕೆ ಗುರಿಯಾಗಿರುವ ಕ್ಯಾರೆಟ್ ಬೆಳೆಗಾರರ ಪ್ರತಿ ಎಕರೆಗೆ ಕನಿಷ್ಟ ರೂ.20,000 ನಷ್ಟ ಪರಿಹಾರ ನೀಡಬೇಕು, ಕಳಪೆ ಬಿತ್ತನೆ ಮಾರಾಟ ಮಾಡಿರುವ ಕಂಪನಿ ಮತ್ತು ವಿತರಕರ ಪರವಾನಿಗೆಯನ್ನು ರದ್ದುಪಡಿಸಿ ಮಾಲೀಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ಮಾರಾಟಗಾರರ ಅಂಗಡಿಗಳಲ್ಲಿ ದರ ಮತ್ತು ಸ್ಟಾಕ್ ಇರುವ ಬೋರ್ಡ್‌ಗಳನ್ನು ಕಡ್ಡಾಯಗೊಳಿಸಬೇಕು, ರೈತರಿಗೆ ಕಡ್ಡಾಯ ಬಿಲ್ ನೀಡುವುದರ ಜೊತೆಗೆ ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳ ಜೊತೆ ರೈತ ಮುಖಂಡರ ಮತ್ತು ವಿತರಕರ ಜಂಟಿಸಭೆ ನಡೆಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ಸಮೀಕ್ಷೆ ನಡೆಸಿ ವರದಿ ನೀಡಲು ಕೋರಲಾಗಿದ್ದು ಆ ವರದಿ ಇನ್ನೂ ಮಂಡನೆಯಾಗಬೇಕಿದೆ.

'ರಾಷ್ಟ್ರೀಯ ಬೀಜ ಕಾಯಿದೆ' ಪ್ರಕಾರ ಬೀಜ ವಿತರಕರ ವಿರುದ್ಧ ಏನಾದರೂ ದೂರು ಬಂದ ತಕ್ಷಣವೇ ಅವರ ಪರವಾನಿಗೆಯನ್ನು ರದ್ದುಪಡಿಸಿ ರೈತರ ಹಿತಾಸಕ್ತಿ ಕಾಯಲು ಅವಕಾಶವಿದೆ. ನಕಲಿ ಬೀಜ ವಿತರಣೆ ಮಾಡಿರುವುದರಿಂದ ಪರವಾನಿಗೆರದ್ದುಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಸಲ್ಲಿಸಿದ್ದರೂ ಇದುವರೆವಿಗೂ ಯಾವುದೇ ಕ್ರಮ ಜರುಗಿಸಿಲ್ಲ. ಆನೇಕಲ್, ಮಾಲೂರು, ಹೊಸಕೋಟೆ ಸೇರಿದಂತೆ ಹಲವು ಕಡೆ 20ಕ್ಕೂ ಹೆಚ್ಚು ವಂಚನೆ ಪ್ರಕರಣದ ದೂರುಗಳನ್ನು ವಿತರಕರ ವಿರುದ್ಧ ಪೋಲೀಸ್ ಠಾಣೆಯ ಮುಂದೆ ಪ್ರತಿಭಟನೆ ನಡೆಸಬೇಕಾಯಿತು. ಹೊಸಕೋಟೆಯ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ವಿತರಕರಲ್ಲೊಬ್ಬನನ್ನು ಬಂಧಿಸಿದ್ದರೂ ಸಹ ಅವರಿಗೇ ಚೆನ್ನಾಗಿ ತಿಳಿದಿರುವ ಕಾರಣ ತಕ್ಷಣವೇ ಮುತ್ತಿಗೆ ಹಾಕಿದ್ದರು. ಆದರೆ ಕಾನೂನು ಬಾಹಿರವಾಗಿ ರಾತ್ರೋರಾತ್ರಿ ಅವನನ್ನು ಬಿಡುಗಡೆ ಮಾಡಲಾಯಿತು. ಇದರ ಬಗ್ಗೆ ಕೆಪಿಆರ್‌ಎಸ್ ತೀವ್ರವಾದ ಪ್ರತಿಭಟನೆ ಮಾಡಿದಾಗ ಸರ್ಕಲ್ ಇನ್ಸ್‌ಪೆಕ್ಟರು ಹಾಜರಾಗಿ ವಂಚಕರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಆಶ್ವಾಸನೆ ನೀಡಿದರು. ಕುಟುಂಬ ಸಮೇತ ಹೊಸಕೋಟೆಯ ವಿತರಕರು ತಲೆಮರೆಸಿಕೊಂಡಿದ್ದರೆ, ಸರ್ಜಾಪುರ, ಅತ್ತಿಬೆಲೆ ಮತ್ತು ಆನೇಕಲ್ ತಾಲ್ಲೂಕುಗಳಲ್ಲೂ ಅಲ್ಲಿನ ವಿತರಕರು ನಾಪತ್ತೆಯಾಗಿದ್ದಾರೆ.

ಕಳಪೆ ರಸಗೊಬ್ಬರ ವಿತರಕರ ವಿರುದ್ಧ ಹೋರಾಟ :

ಹೊಸಕೋಟೆಯ ಸೂಲಿಬೆಲೆಯಲ್ಲಿ ಕಳಪೆ ರಸಗೊಬ್ಬರ ವಿತರಿಸಿರುವುದರ ವಿರುದ್ಧ ಕೆಪಿಆರ್‌ಎಸ್‌ನ ಬೆಂಗಳೂರು ಜಿಲ್ಲಾ ಸಮಿತಿಯ ಗೌರವಾಧ್ಯಕ್ಷರೂ ಮತ್ತು ಮಾಜಿ ಶಾಸಕರೂ ಆದ ಸೂ.ರಂ.ರಾಮಯ್ಯರವರ ನಾಯಕತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆ ಮತ್ತು ಬಂದ್‌ನ ನಂತರವಷ್ಟೇ ಎಚ್ಚೆತ್ತುಕೊಂಡ ಪೊಲೀಸರು ಕಳಪೆ ರಸಗೊಬ್ಬರವನ್ನು ವಶಪಡಿಸಿಕೊಂಡರು. ದಿನಾಂಕ 21.08.2004 ರಂದು ಸರ್ಜಾಪುರ ಕೆಪಿಆರ್‌ಎಸ್‌ನ ಪದಾಧಿಕರಿಗಳಾದ ನಾಗಲಕ್ಷ್ಮಯ್ಯ, ಸೂ.ರಾಂ. ರೆಡ್ಡಿ, ಬಜ್ಜಪ್ಪ, ಮುಂತಾದವರು ಕಳಪೆ ರಸಗಬ್ಬರ ವಿತರಿಸಿರುವ ಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಾದ ವೆಂಕಟೇಶ್ ವಿರುದ್ಧ ಸಂಬಂಧಪಟ್ಟವರಿಗೆ ದೂರು ನೀಡಿರುತ್ತಾರೆ. ದಿನಾಂಕ 23.08.2004 ರಂದು ಈ ಪ್ರಾಂತ್ಯಗಳ ರೈತರೆಲ್ಲ ಪ್ರತಿಭಟನೆ ಮಾಡಿ ರಸಗೊಬ್ಬರ ವಿತರಕರ ಮತ್ತು ರೈತ ಮುಖಂಡರ ಜಂಟಿ ಸಭೆ ನಡೆಸುವಂತೆ ಒತ್ತಾಯಿಸಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ಮನವಿಗೆ ಜಿಲ್ಲಾಧಿಕರಿಗಳು ಒಪ್ಪಿ ಸ್ಸಭೆ ನಡೆಸಲು ತೀರ್ಮಾನಿಸಿದ್ದಾರೆ.

ಈ ಪ್ರದೇಶಗಳಲ್ಲಿ ವರದಿಯಾಗಿರುವ ವಿದ್ಯಮಾನ ಇಡೀ ರಾಜ್ಯದಲ್ಲಿ ರೈತಾಪಿ ವರ್ಗ ಅನುಭವಿಸುತ್ತಿರುವ ಸಂಕಷ್ಟಕ್ಕೆ ಕೈಗನ್ನಡಿಯಾಗಿದೆ. ಒಂದು ಕಡೆ ನೀರಿನ ಕೊರತೆಯಿಂದ ಸಾಲ ಮಾಡಿ ಅಂತರ್ಜಲದ ಕೊಳವೆಬಾವಿ ನೀರು, ಅಸಮರ್ಪಕ ವಿದ್ಯುತ್ ಸರಬರಾಜು, ದುಬಾರಿ ಬಿತ್ತನೆ, ಗೊಬ್ಬರಗಳು ಮತ್ತು ನಕಲಿ ಬೀಜ, ರಸಗೊಬ್ಬರಗಳನ್ನು ಉಪಯೋಗಿಸಿ ತಮ್ಮ ಶ್ರಮದಿಂದ ಬೆಳೆದ ಬೆಳೆ ನಷ್ಟವಾಗುತ್ತಿರುತ್ತದೆ ಅಥವಾ ಉತ್ತಮ ಬೆಂಬಲ ಬೆಲೆ ಇಲ್ಲದೆ ನಷ್ಟವಾಗುತ್ತದೆ. ಇನ್ನೊಂದು ಕಡೆ ರೈತರಿಗೆ ಆಗಿರುವ ಅನ್ಯಾಯಗಳನ್ನು ಪ್ರತಿಭಟನೆ ಮೂಲಕ ಸರ್ಕಾರದ ಗಮನಕ್ಕೆ ತಂದರೂ ಸಹ ಸರ್ಕಾರದ ಪೊಲೀಸ್ ಇಲಾಖೆಯಾಗಲಿ, ಕೃಷಿ ವಿವಿಯ ರೈತಪರ ಕಾಳಜಿಯಿಲ್ಲದೆ ವ್ಯಾಪಾರಿಗಳೊಂದಿಗೆ ಕೈಜೋಡಿಸಿ ಶಾಮೀಲಾಗಿರುವುದು ಮತ್ತು ಕೃಷಿ ಮಂತ್ರಿಗಳು ತತ್‌ಕ್ಷಣ ಪ್ರತಿಕ್ರಿಯೆ ನೀಡದೆ ನಿಸ್ತೇಜರಾಗಿರುವುದು ರೈತ ಪರ ಸರ್ಕಾರವೆಂಬ ಹಣೆಪಟ್ಟಿ ಅಂಟಿಸಿಕೊಂಡಿರುವುದನ್ನು ಪ್ರಶ್ನಿಸುವಂತಿದೆ. ರೈತರ ಬೇಡಿಕೆಗಳು ಈಡೇರಿ ನ್ಯಾಯ ಸಿಗುವವರೆಗೂ ತನ್ನ ಹೋರಾಟ ಮುಂದುವರಿಸುವುದಾಗಿ ಕರ್ನಾಟಕ ಪ್ರಾಂತ ರೈತ ಸಂಘ ತಿಳಿಸಿದೆ. ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳನ್ನು ಸರಬರಾಜು ಮಾಡುವುದು ಮತ್ತು ನಿಯಂತ್ರಿಸುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ರೈತರ ಹಿತಾಸಕ್ತಿ ಕಾಪಾಡುವಲ್ಲಿ ಸರ್ಕಾರ ವಿಫಲವಾಗಿರುವುದು ಅಕ್ಷಮ್ಯ ಅಪರಾಧ.

ವಿಕ್ರಾಂತ್ ನೌಕರರಿಂದ ಹಣ್ಣುಗಳ ವಿತರಣೆ



ದಿನಾಂಕ 24.08.2004 ರಂದು ಕಾಂ.ಸೂರಿಯವರ 80ನೇ ಜನ್ಮದಿನದ ಪ್ರಯುಕ್ತ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇ.ಎಸ್.ಐ. ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಗಳನ್ನು ವಿತರಿಸಲಾಯಿತು. ಸಂದರ್ಭದಲ್ಲಿ ಹಾಜರಿದ್ದ ಅಧ್ಯಕ್ಷ ಎಸ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಎಸ್.ಪಿ.ನಿಂಗೇಗೌಡ, ಕೆ.ಶಿವಪ್ಪ, ಚಂದ್ರಪ್ಪ, ಡಿ.ಪಿ.ಪಾಪೇಗೌಡ ಹಾಗೂ ವಿಕ್ರಾಂತ್ ಕಾರ್ಮಿಕ ಸಂಘದ ಎಲ್ಲಾ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಆಂಟನಿಯವರ ಲಜ್ಜಾಸ್ಪದ ನಿರ್ಗಮನ

ಕಾಂಗ್ರೆಸ್ ತನ್ನ ಎಂದಿನ ಪರಂಪರೆಯಂತೆ, ಜನರನ್ನು ಮರುಳುಮಾಡುವ ತಂತ್ರದ ಭಾಗವಾಗಿ ಕೇರಳದ ಮುಖ್ಯಮಂತ್ರಿಯಾಗಿದ್ದ ಎ.ಕೆ.ಆಂಟನಿ ರಾಜಿನಾಮೆ ನೀಡಿದ್ದಾರೆ. ಅವರ ಬದಲಿಗೆ ಓಮನ್ ಚಾಂಡಿ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

2001'ರ ವಿಧಾನಸಭಾ ಚುನಾವಣೆಯಲ್ಲಿ ಕೇರಳದ 140 ವಿಧಾನಸಭಾ ಸ್ಥಾನಗಳಲ್ಲಿ 100 ಸ್ಥಾನಗಳನ್ನು ಗಳಿಸಿದ್ದ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಯುಡಿಎಫ್) ಸರ್ಕಾರ ಅಧಿಕಾರ ವಹಿಸಿಕೊಂಡ 3 ವರ್ಷ 3 ತಿಂಗಳ ನಂತರ ಈ ಬೆಳವಣಿಗೆ ನಡೆದಿದೆ. ಜನತೆ ಹಾಗೂ ಯುಡಿಎಫ್ ಒಳಗಿನ ಮಿತ್ರಪಕ್ಷಗಳ ವಿಶ್ವಾಸವನ್ನು ಕಳೆದುಕೊಂಡ ಪರಿಣಾಮವಾಗಿ, ಇಂತಹ ಬಹುಮತ ಹೊಂದಿದ್ದರು ಸಹಾ ಮುಖ್ಯಮಂತ್ರಿಯವರು ಕೆಳಗಿಳಿಯುವಂತಹ ಪರಿಸ್ಥಿತಿ ಉಂಟಾಯಿತು. ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನುಭವಿಸಿದ ಐತಿಹಾಸಿಕ ಹೀನಾಯ ಸೋಲಿನ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ.

ಕೇರಳ ಸಮಾಜದಲ್ಲಿ ತೀವ್ರ ಬಿಕ್ಕಟ್ಟನ್ನು ಸೃಷ್ಟಿಸಿದ ಯುಡಿಎಫ್ ಸರ್ಕಾರದ ನೀತಿಗಳನ್ನು ಜನತೆ ತಿರಸ್ಕರಿಸಿದ ಪರಿಣಾಮವಾಗಿ ಆಂಟನಿ ನಿರ್ಗಮಿಸಿದ್ದಾರೆ. ಕೇರಳ ಹಿಂದೆಂದೂ ಕಂಡರಿಯದಂತಹ ರೈತರ ಆತ್ಮಹತ್ಯೆಗಳು ಅಲ್ಲಿನ ಗ್ರಾಮೀಣ ಸಂಕಷ್ಟದ ಪ್ರತಿಫಲನವಾಗಿದೆ. ವಯನಾಡ ಜಿಲ್ಲೆಯೊಂದರಲ್ಲೆ ಕಳೆದ ಒಂದು ವರ್ಷದಲ್ಲಿ ಸುಮಾರು 100 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಂಪ್ರದಾಯಿಕ ಕೈಗಾರಿಕೆಗಳಾದ ನಾರು, ಗೋಡಂಬಿ ಮತ್ತು ಕೈಮಗ್ಗವನ್ನು ಅವಲಂಬಿಸಿದ್ದ ಲಕ್ಷಾಂತರ ಕಾರ್ಮಿಕರು ಜೀವನಾಧಾರವನ್ನು ಕಳೆದುಕೊಂಡಿದ್ದಾರೆ. ಜಾತಿ ಹಾಗೂ ಕೋಮುವಾದಿ ಲಾಬಿಗಳನ್ನು ನೆಚ್ಚಿಸುವ ಯುಡಿಎಫ್ ಸರ್ಕಾರದ ಕ್ರಮಗಳು ಜಾತಿವಾದಿ ಹಾಗೂ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ನಾಂದಿಯಾಡಿದೆ. ಇದೆ ಲಾಬಿಗಳಿಗೆ ವೃತ್ತಿಪರ ಕಾಲೇಜುಗಳನ್ನು ನೀಡಿ ಶಿಕ್ಷಣವನ್ನು




ವಾಣಿಜ್ಯೀಕರಿಸಲಾಗಿದೆ. ಯುವ ದಲಿತ ವಿದ್ಯಾರ್ಥಿನಿಯ ಆತ್ಮಹತ್ಯೆ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಗಂಭೀರ ಪರಿಸ್ಥಿತಿಯ ಧ್ಯೋತಕವಾಗಿದೆ. ಆಂಟನಿ ಸರ್ಕಾರದ ಶಿಕ್ಷಣ ನೀತಿಯ ವಿರುದ್ಧ ವಿದ್ಯಾರ್ಥಿ- ಯುವಜನರು ಶಕ್ತಿಶಾಲಿ ಚಳುವಳಿಯನ್ನು ನಡೆಸುತ್ತಿದ್ದಾರೆ.

ಅಧಿಕಾರಕ್ಕಾಗಿನ ಕಾಂಗ್ರೆಸ್ ಒಳಗಿನ ಗುಂಪುಗಾರಿಕೆ 4 ಪ್ರಮುಖ ಗುಂಪುಗಳ ಒಳಜಗಳದಿಂದ ತಾರಕಕ್ಕೇರಿದೆ. ಈ ಗುಂಪುಗಾರಿಕೆಯ ಮುಕುಟಮಣಿಯಂತೆ ಆಂಟನಿ ಮತ್ತು ಕರುಣಾಕರನ್ ಕದನ ನಡೆದಿದೆ. ಮುಖ್ಯಮಂತ್ರಿಯ ಸ್ವಚ್ಛ ವ್ಯಕ್ತಿತ್ವದ ಪ್ರತಿಪಾದನೆ ಮತ್ತು ಅವರ ನೇತೃತ್ವದಲ್ಲಿನ ಭ್ರಷ್ಟ ಸರ್ಕಾರ, ಅದರಲ್ಲಿನ ಪ್ರತಿಯೊಬ್ಬ ಪಾಲುದಾರರು, ಜಾತಿ ಮತ್ತು ಕೋಮು ಗುಂಪುಗಳ ಅಧಿಕಾರ-ಹಣದ ಪಾಲಿಗಾಗಿನ ಕಚ್ಚಾಟವನ್ನು ಜನತೆಗೆ ಅರಗಿಸಿಕೊಳ್ಳಲಾಗಿಲ್ಲ. ಹಾಗೂ 2004'ರ ಮೇನಲ್ಲಿ ಯುಡಿಎಫ್‌ಗೆ ನೀಡಬಹುದಾದ ಅತ್ಯುಗ್ರ ಶಿಕ್ಷೆಯನ್ನೇ ಅದಕ್ಕೆ ನೀಡಿದರು.

ಕಾಂಗ್ರೆಸ್ ಹೈಕಮಾಂಡ್ ತನ್ನ ಎಂದಿನ ಪರಂಪರೆಯಂತೆ ಆಂಟನಿಯವರ ಬದಲಾಗಿ ಹೊಸ ಮುಖವನ್ನು ತಂದಿದೆ. ಆಂಟನಿಯವರಿಗೇನೊ ಕೇಂದ್ರದಲ್ಲಿನ ಸ್ಥಾನದ ಮೂಲಕ ಪುನರ್‌ಪಸತಿ ಕಲ್ಪಿಸಬಹುದು. ಆದರೆ ನೂತನ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಯುಡಿಎಫ್ ತನ್ನ ದಿಕ್ಕು ಬದಲಿಸಿಕೊಳ್ಳಲಿದೆ ಎಂಬ ಸಂಕೇತಗಳೇನೂ ಇಲ್ಲ. ನೀತಿಗಳನ್ನು ಬದಲಿಸುವ ಪ್ರಸ್ತಾಪಗಳೇನು ಬಂದಿಲ್ಲ. ಕೇರಳದ ಇಂದಿನ ಅಗತ್ಯ ಆಂಟನಿ ಸರ್ಕಾರದ ನೀತಿಗಳ ಬದಲಾವಣೆ ಸಾಂಪ್ರದಾಯಿಕ ಉದ್ದಿಮೆಗಳನ್ನು ಪುನಶ್ಚೇತನಗೊಳಿಸುವ, ಮೂಲಸೌಕರ್ಯ ಮತ್ತು ಕೃಷಿಗೆ ಸಾರ್ವಜನಿಕ ಹೂಡಿಕೆ ಹೆಚ್ಚಿಸುವ, ಸಾರ್ವಜನಿಕ ಉದ್ದಿಮೆಗಳನ್ನು ಸರಿದಾರಿಗೆ ತರುವ ಮತ್ತು ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತನ್ನ ಶಕ್ತಿಯನ್ನು ಕೇಂದ್ರೀಕರಿಸದ ಹೊರತು ಕೇರಳದ ಆರ್ಥಿಕತೆಯನ್ನು ಸರಿಪಡಿಸಲಾಗದು. ಉದ್ಯೋಗ ಸೃಷ್ಠಿ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸುವಿಕೆ ಇಂದಿನ ಅಜೆಂಡಾವಾಗಬೇಕು.

ಆಂಟನಿ ಸರ್ಕಾರದ ನೀತಿಗಳು ಈ ಗುರಿಗಳಿಗೆ ತದ್ವಿರುದ್ಧವಾಗಿದ್ದವು. ಕಳೆದ 3 ವರ್ಷಗಳನ್ನು ವ್ಯರ್ಥಮಾಡಿರುವ ಯುಡಿಎಫ್ ಸರ್ಕಾರ 2006'ರ ವಿಧಾನಸಭಾ ಚುನಾವಣೆವರೆಗೆ ಜೀವ ಉಳಿಸಿಕೊಳ್ಳುವ ತುರ್ತು ಚಿಕಿತ್ಸೆಯಾಗಿ ಮಾತ್ರವೇ ನೂತನ ಮುಖ್ಯಮಂತ್ರಿಗಳಡಿಯ ಯುಡಿಎಫ್ ಸರ್ಕಾರವನ್ನು ನೋಡಬೇಕಿದೆ.



ಚೆಡ್ಡಿಗಳ ದುಷ್ಟ ನಡವಳಿಕೆಗೆ ಜನ ಮರುಳಾಗದಿರಲಿ....

ತಿರಂಗವನ್ನು ಹಿಡಿದು ರಾಷ್ಟ್ರಭಕ್ತಿಯ ಸಾಕ್ಷಾತ್ ಸ್ವರೂಪವಾಗಲು ಹೊರಟಿರುವ ಉಮಾ ಭಾರತಿ ಮತ್ತು ಆಕೆಯ ಚೆಡ್ಡಿ ಬಳಗಕ್ಕೆ ವಾಸ್ತವವಾಗಿ ರಾಷ್ಟ್ರಧ್ವಜದ ಬಗ್ಗೆ ಕಿಂಚಿತ್ತೂ ಮರ್ಯಾದೆಯಾಗಲೀ, ಗೌರವವಾಗಲೀ ಇಲ್ಲವೇ ಇಲ್ಲ.

1994 ರಲ್ಲಿ ಈದ್ಗಾ ಮೈದಾನದತ್ತ ಧಾವಿಸಿದ ಉಮಾಭಾರತಿ ಮತ್ತು ಅದಕ್ಕಿಂತ ಮೊದಲು ಶ್ರೀನಗರದಲ್ಲಿನ ಲಾಲ್ ಚೌಕ್‌ದತ್ತ ಹಾರಿದ ಮುರಳಿ ಮನೋಹರ್ ಜೋಷಿಯವರ ಉದ್ದೇಶ ಈ ದೇಶದ ಘನತೆಯನ್ನು ಎತ್ತಿ ಹಿಡಿಯುವುದಾಗಿರಲಿಲ್ಲ. ಬದಲಿಗೆ, ಅಲ್ಲಿನ ಜನರ ಮನಸ್ಸಿಗೆ ಬೆಂಕಿ ಹಚ್ಚಿ ಕೋಮು ಸಾಮರಸ್ಯವನ್ನು ಕದಡುವುದಾಗಿತ್ತು. ಕೊನೆಗೂ ಧ್ವಜವನ್ನು ಹಾರಿಸುವಲ್ಲಿ ವಿಫಲಳಾದ ಉಮಾ ಭಾರತಿ, ಐದು ಜನರ ಜೀವ ತೆಗೆದುಕೊಳ್ಳುವುದರಲ್ಲಿ ಗೆದ್ದದ್ದು ಚೆಡ್ಡಿ ಬಳಗದ ನಿಜ ಉದ್ದೇಶಕ್ಕೆ ಸಾಕ್ಷಿ.

ಇತಿಹಾಸವನ್ನು ಮತ್ತು ಕೇಸರಿ ಬಳಗದವರ ಮನೋಭಾವವನ್ನು ಜಾಲಾಡಿದರೆ ಇವರಲ್ಲಿ ದೇಶಪ್ರೇಮ ಇಲ್ಲ ಎಂಬುದು ಸಾಬೀತಾಗುತ್ತದೆ.

ಉದಾಹರಣೆಗೆ ಆರ್‌ಎಸ್‌ಎಸ್‌ನ ವೆಬ್‌ಸೈಟ್‌ನಲ್ಲಿ ರಾಷ್ಟ್ರಧ್ವಜದ ಬಗ್ಗೆ ಹೀಗೆ ವರ್ಣಿಸಲಾಗಿದೆ : 'ಧ್ವಜವೊಂದು ದೇಶದ ಸಂಕೇತ ಮಾತ್ರವಲ್ಲ, ಅದು ಈ ದೇಶದಲ್ಲಿ ವಾಸಿಸುತ್ತಿರುವ ಪ್ರಜೆಗಳ ಜನಪದ್ಧತಿಯ ಸಂಕೇತ ಕೂಡ. ಜೊತೆಗೆ ದೇಶದ ಸ್ವತಂತ್ರ್ಯ, ಪ್ರಭುತ್ವ, ಘನತೆ ಮತ್ತು ಹೆಮ್ಮೆಯ ಸಂಕೇತವೂ ಹೌದು. ನಮ್ಮ ಎಲ್ಲವನ್ನೂ ತ್ಯಾಗ ಮಾಡಲು ಸಿದ್ಧವಾಗಿರಬೇಕು ಮತ್ತು ಅದರ ಘನತೆಯನ್ನು ಕಾಪಾಡಬೇಕು.'

ಆದರೆ ಆರ್‌ಎಸ್‌ಎಸ್ ಇಷ್ಟೆಲ್ಲ ಹೇಳಿರುವುದು ತಿರಂಗದ ಬಗ್ಗೆ ಅಲ್ಲ. ಬದಲಾಗಿ ಇದನ್ನು ಹೇಳಿರುವುದು ಕೇಸರಿ ಬಣ್ಣದ ಭಾಗವಾಧ್ವಜದ ಬಗ್ಗೆ.

ಇದೇ ಧಾಟಿಯಲ್ಲಿ ಮುಂದುವರೆಸುತ್ತಾ 'ಸೂರ್ಯೋದಯವನ್ನು ನೆನಪಿಸುವ ಕೇಸರಿ ಬಣ್ಣದ ಧ್ವಜವೇ ನಮ್ಮ ರಾಷ್ಟ್ರ ಧ್ವಜವಾಗಬೇಕು.' ಎಂದು ಸ್ಪಷ್ಟಪಡಿಸುವ ಆರ್.ಎಸ್.ಎಸ್. ಧ್ವಜಗಳು ಚಾಲನೆಗೆ ಬಂದದ್ದು ಹೇಗೆ ಎಂದೂ ವಿವರಿಸುತ್ತದೆ. 'ಸಂಯುಕ್ತ ರಾಷ್ಟ್ರಗಳು ಸ್ಥಾಪನೆಯಾದಾಗ ಬಲಿಷ್ಠವಾದ ಸಮುದಾಯದ ಧ್ವಜವನ್ನೇ ರಾಷ್ಟ್ರಧ್ವಜ ಎಂದು ನಿರ್ಧರಿಸಲಾಗುತ್ತಿತ್ತು' ಎಂಬುದು ಆರ್‌ಎಸ್‌ಎಸ್ ನಿಲುವು. ಅಂದರೆ, ಬಹುಸಂಸ್ಕೃತಿಯ ಭಾರತದಲ್ಲೂ ಬಹುಸಂಖ್ಯಾತ 'ಹಿಂದೂ'ಗಳ 'ಭಾಗವಾಧ್ವಜ'ವೇ ರಾಷ್ಟ್ರಧ್ವಜವಾಗಬೇಕು ಎಂಬುದು ಇವರ ತರ್ಕ. ಇಲ್ಲಿ ತಿರಂಗಕ್ಕೆ ಎಲ್ಲಿಯ ಜಾಗ?

ಇದರಷ್ಟೇ ಗಮನಾರ್ಹ ಅಂಶ ಯಾವುದೆಂದರೆ ತಿರಂಗದ ಬಗ್ಗೆ ಆರ್‌ಎಸ್‌ಎಸ್ ತಾಳಿರುವ ನಿಲುವು. ಅದೇ ಆರ್‌ಎಸ್‌ಎಸ್ ತಾಳಿರುವ ನಿಲುವು. ಅದೇ ಆರ್‌ಎಸ್‌ಎಸ್ ವೆಬ್‌ಸೈಟ್‌ನ ಇನ್ನೊಂದು ಪುಟದಲ್ಲಿ ಹೀಗೆ ಪ್ರಕಟಿಸಲಾಗಿದೆ :

'ಉತ್ತರದಲ್ಲಿರುವ ಹಿಮಾಲಯ ಪರ್ವತದಿಂದ ದಕ್ಷಿಣದಲ್ಲಿರುವ ಹಿಂದೂ ಮಹಾಸಾಗರದವರೆಗೂ, ಪಶ್ಚಿಮದಲ್ಲಿರುವ ಸಿಂಧೂ ಸಾಗರದಿಂದ ಪೂರ್ವದಲ್ಲಿರುವ ಗಂಗಾ ಸಾಗರದವರೆಗೂ ವಾಸಿಸುತ್ತಿರುವ ಜನರ ಧರ್ಮಶಾಸ್ತ್ರ ಇತಿಹಾಸ ಮತ್ತು ಸಾರ್ವಜನಿಕ ಅನಿಸಿಕೆಗಳು ತೋರುವುದೇನೆಂದರೆ ಅವರೆಲ್ಲಾ ಬರೀ ಈ ಕೇಸರಿ ಧ್ವಜವನ್ನೇ ಪ್ರೀತಿಸುತ್ತಾರೆ ಮತ್ತು ಗೌರವಿಸುತ್ತಾರೆ ಎಂದು. ಹೀಗಿದ್ದರೂ, ನಮ್ಮ ಪುರಾತನ ಇತಿಹಾಸವನ್ನು ಮತ್ತು ಅದನ್ನು ಸಂಕೇತಿಸುವ ಕೇಸರಿ ಧ್ವಜವನ್ನು ಮರೆತು, ಹಲವಾರು ಬಣ್ಣಗಳ ತ್ಯಾಪೆಯಂತಿರುವ ಧ್ವಜವನ್ನು ನಮ್ಮ ರಾಷ್ಟ್ರಧ್ವಜ ಎಂದು ಸ್ವೀಕರಿಸುವುದರಲ್ಲಿ ಅರ್ಥವಿದೆಯೇ? ಬಹುಮುಖಿ ಸಂಸ್ಕೃತಿ ಮತ್ತು ಸಂಘಟಿತ ರಾಷ್ಟ್ರೀಯತೆ ನೆಪದಲ್ಲಿ ಸಮಗ್ರವಾದ ಕೇಸರಿ ಧ್ವಜದ ಬದಲಿಗೆ ಈ ತ್ಯಾಪೆ ಹಾಕಿದಂತಿರುವ ಧ್ವಜವನ್ನು ಸ್ವೀಕರಿಸಲಾದೀತೆ?'

ಈ 'ತ್ಯಾಪೆ' ಧ್ವಜವನ್ನೇ ಇವತ್ತು ಉಮಾ ಭಾರತಿ ಹಿಡಿದು 'ರಾಷ್ಟ್ರಧ್ವಜದ ಗೌರವ'ದ ಬಗ್ಗೆ ಅಬ್ಬರಿಸುತ್ತಿದ್ದಾಳೆ!

ಇತಿಹಾಸದ ಪುಟಗಳೂ ಈ ಹಿಂದೂ ಮೂಲಭೂತವಾದಿಗಳ ಕಪಟತನವನ್ನು ತೆರೆದಿಡುತ್ತವೆ.

1925 ರಲ್ಲಿ ಜನಿಸಿದ ಆರ್‌ಎಸ್‌ಎಸ್‌ಗೆ ಅಂದಿನಿಂದಲೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಏಕತೆಯ ಏಕೀಕೃತ ಹೋರಾಟದ ಯಾವುದೇ ಸಂಕೇತ ಸಹಿಸಲು ಅಸಾಧ್ಯವಾದದ್ದೇ. 1929ರಲ್ಲಿ ಲಾಹೋರ್‌ನಲ್ಲಿ ಜರುಗಿದ ಕಾಂಗ್ರೆಸ್ ಸೆಷನ್‌ನಲ್ಲಿ ತಿರಂಗವನ್ನು ದೇಶದ ಧ್ವಜ ಎಂದು ಘೋಷಿಸಿದಾಗ, ಆರ್‌ಎಸ್‌ಎಸ್‌ನ ಸಂಚಾಲಕರಗಾಗಿದ್ದ ಹೆಗಡೆವಾರ್ ಒಂದು ಸುತ್ತೋಲೆಯನ್ನು ಹೊರಡಿಸಿ 'ಆರ್‌ಎಸ್‌ಎಸ್ ಶಾಖಾಗಳಲ್ಲಿ ಭಾಗವಾಧ್ವಜಕ್ಕೆ ಮಾತ್ರ ಪ್ರಾರ್ಥನೆಗಳನ್ನು ಸಲ್ಲಿಸಬೇಕು' ಎಂದು ಆದೇಶಿಸಿದ್ದರು. 'ನಮ್ಮ ಸಂಸ್ಕೃತಿಯ ಪ್ರತೀಕವೇ ಈ ಕೇಸರಿ ಧ್ವಜ. ಅಂತಿಮವಾಗಿ ಇಡೀ ದೇಶ ಈ ಕೇಸರಿ ಧ್ವಜಕ್ಕೆ ತಲೆಬಾಗಬೇಕಾಗುತ್ತದೆ ಎಂದು ನಾವು ನಿರ್ದಿಷ್ಟವಾಗಿ ನಂಬಿದ್ದೇವೆ' ಎಂದೂ ಹೆಗಡೆವಾರ್ ಘೋಷಿಸಿದ್ದರು.

ಅಷ್ಟೇ ಅಲ್ಲ, ತಿರಂಗದ ಬಗ್ಗೆ ತಮ್ಮ 'ಚಿಂತನಗಂಗಾ' ಪುಸ್ತಕದಲ್ಲಿ ಗೋಳ್‌ವಲಕರ್ ಹೀಗೆ ಬರೆದಿದ್ದರೆ : 'ನಮ್ಮ ನಾಯಕರು ಈ ದೇಶಕ್ಕೆ ಹೊಸ ಧ್ವಜವನ್ನು ನೀಡಿದ್ದರೆ. ಅವರ್‍ಯಾಕೆ ಇಂತಹ ಧ್ವಜವನ್ನು ನೀಡಿದ್ದಾರೆ. ಅವರ್‍ಯಾಕೆ ಇಂತಹ ಧ್ವಜವನ್ನು ನಮಗೆ ನೀಡಿದ್ದಾರೆ? ನಮ್ಮ ಪ್ರಾಚೀನ ದೇಶಕ್ಕೆ ಅದರದ್ದೇ ಆದ ಪ್ರಖ್ಯಾತ ಇತಿಹಾಸವಿರುವಾಗ ನಮ್ಮದೇ ಆದ ಧ್ವಜದ ಅಭಾವವಿತ್ತೇ? ಸಾವಿರಾರು ವರ್ಷಗಳ ಕಾಲ ನಮ್ಮದೇ ಆದ ರಾಷ್ಟ್ರೀಯ ಲಾಂಛನ ಇರಲಿಲ್ಲವೇ? ಖಂಡಿತವಾಗಿಯೂ ಇತ್ತು. ಆದರೂ ಯಾಕೆ ಶೂನ್ಯತೆ ನಮ್ಮ ಮನಸ್ಸಿನಲ್ಲಿ?' ಅಂದರೆ ಇವರ ಪ್ರಕಾರ ತಿರಂಗದ ಸಂಕೇತ ಭಾರತ ದೇಶದವರ ಬೌದ್ಧಿಕವಾದ ಶೂನ್ಯತೆ?

ಪುಟ 12 ಕ್ಕೆ



ನೂರು ದಿನಗಳ ಯುಪಿಎ ಅಧಿಕಾರ

ಪರೀಕ್ಷಿಸುವ ಅವಕಾಶವನ್ನು ಜನತೆಗೆ ನೀಡದ ವಿರೋಧ ಪಕ್ಷ

ಅಗಸ್ಟ್ 29 ರಂದು ಪ್ರಸ್ತುತ ಸರಕಾರ ತನ್ನ 100 ದಿನಗಳನ್ನು ಪೂರೈಸಿತು. ಡಾ.ಮನಮೋಹನ್‌ಸಿಂಗ್ ಮೇ 22 ರಂದು ಅಧಿಕಾರದ ಪ್ರತಿಜ್ಞೆ ಸ್ವೀಕರಿಸಿದ್ದರು. ಆದರೂ ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಸರಕಾರಕ್ಕೆ ಸಾಧನೆಯೆಂದು ಜನತೆಗೆ ತೋರಿಸಲು ಸಾಧ್ಯವಾಗದಿದ್ದರೆ, ಅದಕ್ಕೆ ಭಾರತೀಯ ಜನತಾಪಕ್ಷ ಮತ್ತು ಅವರ ಎನ್‌ಡಿಎ ಮಿತ್ರಪಕ್ಷಗಳೇ ಕಾರಣ. ಇವರು ಸರಕಾರ ನಡೆಯಬೇಕಾದ ರೀತಿಯಲ್ಲಿ ನಡೆಯಲು ಬಿಡಲಿಲ್ಲ.

ಇಲ್ಲಿ ಅತ್ಯಂತ ಬಿಜೆಪಿ-ಪರ ದೈನಿಕ 'ದಿ ಪಯೋನಿರ್' ಅಗಸ್ಟ್ 30 ರಂದು ಮಾಡಿರುವ ಟಿಪ್ಪಣಿಯನ್ನು ಗಮನಿಸಬೇಕು. ಆ ದಿನದ ಮುಖಪುಟದಲ್ಲಿನ ಒಂದು ವರದಿ ನೂರು ದಿನಗಳು ಯಾವುದೇ ಆಡಳಿತದ ಕೆಲಸ-ಕಾರ್ಯಗಳ ಮೌಲ್ಯಮಾಪನ ಮಾಡಲು ಬಹಳ ಸಣ್ಣ ಅವಧಿಯೇ. ಆದರೂ ಈ ಅವಧಿ ಸರಕಾರದ ಪ್ರವೃತ್ತಿಯನ್ನು, ದಾರಿಯನ್ನು ತೋರಿಸಲು ಸಾಕಷ್ಟಾಗುತ್ತದೆ" ಎಂದು ಆರಂಭಿಸುತ್ತದೆ. ಇದೆಲ್ಲಾ ಸರಿಯೇ. ಆದರೆ ರಾಜ್ಯದ ರಾಜಧಾನಿಯಲ್ಲಿ ಬಹಳ ಕಮ್ಮಿ ಮಂದಿ ಓದುವ ತನ್ನ ಬದುಕಿಗಾಗಿ ಬಿಪಿಪಿಯನ್ನು ಬಹಳಷ್ಟು ಅವಲಂಬಿಸಿರುವ ಈ ಪತ್ರಿಕೆಯ ನಿಜವಾದ ದುರುದ್ದೇಶ ಮುಂದಿನ ಸಾಲಿನಲ್ಲಿಯೇ ವೇದ್ಯವಾಗುತ್ತದೆ. ಸರಕಾರ ತಾನು ಮಾಡಬೇಕೆನಿಸಿದ್ದನ್ನು ಮಾಡಲು ಎಡಪಕ್ಷಗಳು ಬಿಡಲಿಲ್ಲ ಎಂದು ಅದು ಆಪಾದಿಸುತ್ತದೆ.

ಹೀಗೆ ಎಡಪಕ್ಷಗಳ ಮೇಲೆ ಧಾಳಿ ಮಾಡಿ ಈ ಪತ್ರಿಕೆ ಸಾಧಿಬಯಸುವುದಾದರೂ ಏನನ್ನು? ಜನಸಾಮಾನ್ಯರು ಮಾತ್ರವಲ್ಲ, ಮೊನ್ನೆ ಮೊನ್ನೆಯವರೆಗೆ ಬಿಜೆಪಿಯ ಪರಾಕು ಹಾಕುತ್ತಿದ್ದ ಮಾಧ್ಯಮಗಳೂ ಸೇರಿದಂತೆ ಎಲ್ಲರೂ ಬಿಜೆಪಿ ಮತ್ತು ಎನ್‌ಡಿಎ ಸಂಸತ್ತಿನ ಕಲಾಪಗಳು ನಡೆಯಲು ಬಿಡಲಿಲ್ಲ ಎಂದು ದೂರುತ್ತಿರುವಾಗ ಪಯೋನಿರ್ ಭಿನ್ನ ರಾಗ ಆಧ್ಯಾಪನೆಯ ನಿಜ ಉದ್ದೇಶ ಸ್ವಯಂವೇದ್ಯ. ಏಕೆಂದರೆ ಬಿಜೆಪಿಯ ದುಷ್ಕೃತ್ಯಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುವುದು. ಎಷ್ಟೆಂದರೂ ಇತ್ತೀಚೆಗಷ್ಟೇ ಕಿತ್ತೆಸೆಯಲ್ಪಟ್ಟ ಬಿಜೆಪಿ ಆಡಳಿತವೇ ತಾನೆ ಈ ಪತ್ರಿಕೆಯ ಮುಳುಗುತ್ತಿದ್ದ ವ್ಯವಹಾರಗಳಲ್ಲಿ ಹಣ ದೂಡುವಂತೆ ಯುಟಿಐಗೆ ಒತ್ತಡ ಹೇರಿದ್ದು. ಯುಪಿಎ ಮತ್ತು ಎಡಪಕ್ಷಗಳ ನಡುವೆ ಜಗಳ ತಂದೊಡ್ಡುವುದು ಬಿಜೆಪಿಯ ಬಾಡಿಗೆ ಲೇಖಕರ ಇನ್ನೊಂದು ಉದ್ದೇಶವಿರಬಹುದು.

ಆದರೆ ಬಿಜೆಪಿ ನೇತೃತ್ವದ ಎನ್‌ಡಿಎಯೇ ಮೊದಲ ದಿನದಿಂದಲೇ ತನ್ನ ಅಡ್ಡಿ-ತಂತ್ರಗಳಿಂದ 14ನೇ ಲೋಕಸಭೆಯ ಮೊದಲ ಅಧಿವೇಶನ ಕಲಾಪ ನಡೆಸದಂತೆ ಮಾಡಿದ್ದು ವಾಸ್ತವವನ್ನು ಸಾರ್ವಜನಿಕರಿಂದ ಮರೆಮಾಚಲು ಈ ಮಂದಿಗೆ ಆಗುತ್ತಿಲ್ಲ. ಇವರ ಅಡ್ಡಿತಂತ್ರಗಳು ಎಂತಹವೆಂದರೆ ಡಾ.ಸಿಂಗ್ ತನ್ನ ಮಂತ್ರಿಮಂಡಲದ ಸದಸ್ಯರನ್ನು ಪರಿಚಯಿಸಲೂ ಇವರು ಬಿಡಲಿಲ್ಲ.

ಫ್ಯಾಸಿಸ್ಟ್ ಸ್ವರೂಪಕ್ಕೆ ಇನ್ನೊಂದು ಸಾಕ್ಷಿ

ಬಿಜೆಪಿ ಮತ್ತು ಎನ್‌ಡಿಎ ಅಷ್ಟಕ್ಕೇ ನಿಲ್ಲಲಿಲ್ಲ. ಅವರು ಸರಕಾರ ತಿಕ್ಕಾಟದ ನಿಲುವು ತಳೆಯುತ್ತಿದೆ ಎಂದು ನಿರಂತರವಾಗಿ ಆರೋಪಿಸುತ್ತಲೇ ಸುಮಾರಾಗಿ ಪ್ರತಿದಿನವೂ ಎರಡು ಅಧಿವೇಶನಗಳಲ್ಲಿ ಕಲಾಪಗಳನ್ನು ಅಸ್ತವ್ಯಸ್ತಗೊಳಿಸಿದರು. ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚೆಗೆ ಉತ್ತರ ಕೊಡುವುದು ಪ್ರದೇಶದ ಮುಖ್ಯ ಕಾರ್ಯನಿರ್ವಾಹಕರಾಗಿ ಡಾ.ಸಿಂಗರ ಹಕ್ಕಾಗಿತ್ತು. ಅದಕ್ಕೂ ಅವರು ಅವಕಾಶ ಕೊಡಲಿಲ್ಲ. ಸಂಸತ್ತಿನ ಪರಂಪರೆಗೆ ವ್ಯತಿರಿಕ್ತವಾಗಿ ಅವರ ಬಹಿಷ್ಕಾರ ಸಂಸತ್ತಿನ ಸ್ಥಾಯೀ ಸಮಿತಿಗಳ ರಚನೆಯನ್ನು ವಿಳಂಬಗೊಳಿಸಿತು, ಈ ಮೂಲಕ ಈ ಸಮಿತಿಗಳು ಮಾಡಬೇಕಾಗಿದ್ದ ಕೆಲಸವನ್ನು ಮಾಡಲಾಗದೆ ಅಮೂಲ್ಯ ಸಮಯ ವ್ಯರ್ಥವಾಯಿತು. ಮಂತ್ರಿಗಳು ತಮ್ಮ ಇಲಾಖೆಗಳಿಗೆ ಅನುದಾನದ ಬೇಡಿಕೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲೂ ಬಿಡಲಿಲ್ಲ. ಬಜೆಟ್‌ನ ಮೇಲೆ ಚರ್ಚೆ ಸಂಸತ್ತು ನಿರ್ವಹಿಸಬೇಕಾದ ಎಲ್ಲಕ್ಕಿಂತ ಪ್ರಮುಖವಾದ ಕರ್ತವ್ಯ. ಬಿಜೆಪಿ ಮತ್ತು ಎನ್‌ಡಿಎ ವರ್ತನೆಗೆ ಸಾರ್ವಜನಿಕ ಆಕ್ರೋಶ ವ್ಯಕ್ತಗೊಂಡರೂ ಕೂಡಾ ಅವರು ಈ ಚರ್ಚೆಗೂ ಅವಕಾಶ ಕೊಡಲಿಲ್ಲ. ಅಂತಿಮವಾಗಿ ಬಿಜೆಪಿ/ ಎನ್‌ಡಿಎ ಮಾಡಿದ್ದೇನು? ಯಾವುದೇ ಚರ್ಚೆಯಿಲ್ಲದೆ ಬಜೆಟ್ ಅಂಗೀಕಾರವಾಗಿದೆಯೆಂದು ಪರಿಗಣಿಸಬೇಕೆಂದು ಸರಕಾರಕ್ಕೆ ಹೇಳಿದ್ದು. ಒಂದು ಸಂಸದೀಯ ಮಾದರಿಯ ಆಡಳಿತದಲ್ಲಿ ವಿವಿಧ ವಿಷಯಗಳ ಮೇಲೆ ಮತ್ತು ನಿಲುವಳಿ ಸೂಚನೆಗಳ ಮೇಲೆ ಚರ್ಚೆಗಳ ಮೂಲಕವೇ ಸಂಸತ್ತು ಸರಕಾರದ ಕಾರ್ಯನಿರ್ವಹಣೆಯ ಮೇಲೆ ಹತೋಟಿ ಚಲಾಯಿಸುತ್ತದೆ. ಆದರೆ ಬಿಜೆಪಿ/ ಎನ್‌ಡಿಎ ದೇಶದಲ್ಲಿ ಶಾಸನ ರಚಿಸುವ ಈ ಸರ್ವೋಚ್ಚ ಸಂಸ್ಥೆಯ ಈ ಹಕ್ಕನ್ನೇ ವಂಚಿಸಿವೆ. ಸಂಸದೀಯ ಇತಿಹಾಸದಲ್ಲೇ ಇದು ಅಭೂತಪೂರ್ವ. ಸರ್ವಾಧಿಕಾರಿಗಳು ತಮ್ಮ ಆಡಳಿತದ ಬಗ್ಗೆ ಚರ್ಚಿಸುವ ಹಕ್ಕನ್ನು ನಿರಾಕರಿಸಲು ಸಂಸತ್ತುಗಳನ್ನು ಕಾನೂನು ಬಾಹಿರವಾಗಿ ವಿಸರ್ಜಿಸುತ್ತಾರೆ. ಬಿಜೆಪಿ ಗುರಿಸಾಧನೆಗೆ ಇನ್ನೊಂದು ದಾರಿ ಹಿಡಿದರೆ ಬಹುಶಃ ಸಂಸತ್ತನ್ನು ವಿಸರ್ಜಿಸುವುದು ಅದರ ಸಾಮರ್ಥ್ಯಕ್ಕೆ ಮೀರಿದ್ದು ಎಂಬ ಕಾರಣಕ್ಕಿರಬಹುದು. ಇದು ಆರ್‌ಎಸ್‌ಎಸ್ ದೂರದಿಂದ ಹತೋಟಿ ಚಲಾಯಿಸುವ ಬಿಜೆಪಿಯ ಫ್ಯಾಸಿಸ್ಟ್ ಮಾದರಿಯ ಸ್ವರೂಪಕ್ಕೆ ಇನ್ನೊಂದು ಸಾಕ್ಷಿ.

ನೆವಗಳ ಸೃಷ್ಟಿ

ಇವೆಲ್ಲದರ ಫಲಿತಾಂಶವೇನು? ಸಂಸತ್ತಿನ ಇತ್ತೀಚಿನ ಅಧಿವೇಶನವನ್ನು ನಿಗದಿತ ಸಮಯಕ್ಕಿಂತ ಒಂದು ವಾರ ಮೊದಲೇ ಮುಂದಕ್ಕೆ ಹಾಕಲಾಯಿತು. ಎರಡೂ ಅಧಿವೇಶನಗಳಲ್ಲಿ ಅವರ ವಿಚ್ಛಿದ್ರಕಾರಿ ತಂತ್ರಗಳು ನ್ಯಾಯಯುತ ಪ್ರತಿಭಟನೆಗಳ ಮಿತಿಗಳನ್ನು ಬಹಳ ಹಿಂದೆ ಬಿಟ್ಟು ತಮ್ಮ ದುರ್ವರ್ತನೆಗಳನ್ನು ಮರೆಮಾಚಲು ಅವರು ನೆವಗಳನ್ನು ಸೃಷ್ಟಿಸಲು ಪ್ರಯತ್ನಿಸಿದರು. ಅವರ ಒಂದು ಇಂತಹ ನೆವವೆಂದರೆ 'ಕಳಂಕಿತ' ಮಂತ್ರಿಗಳ ಕುರಿತ ಆಲಾಪನೆ. ಸರಕಾರದ ವಿರುದ್ಧ ಇದನ್ನು ಬಳಸಲು ಬಿಜೆಪಿ/ ಎನ್‌ಡಿಎ ಎಷ್ಟರಮಟ್ಟಿಗೆ ಹೋಯಿತೆಂದರೆ ವಾಜಪೇಯಿ ಮಂತ್ರಿಮಂಡಳದ ಕೆಲವು ಮಂತ್ರಿಗಳು ಬಾಬ್ರಿ ಮಸೀದಿ ಧ್ವಂಸದ ಅಪರಾಧದಲ್ಲಿ ನೇರವಾಗಿ ಅಥವಾ ಭ್ರಷ್ಟ ವ್ಯವಹಾರಗಳಲ್ಲಿ ಸಿಲುಕಿದ್ದರೂ ಅವರು ಅಪರಾಧಿಗಳಲ್ಲ ಎಂಬ ಹಾಸ್ಯಾಸ್ಪದ ವಾದ ಮುಂದಿಟ್ಟರು. ಇದನ್ನು ನೋಡಿದ 'ಟೈಮ್ಸ್ ಆಫ್ ಇಂಡಿಯಾ' ದೈನಿಕ ' ಒಂದು ಅಪರಾಧಿ ಕೃತ್ಯ ಅದು ದುರಾಸೆಯಿಂದ ನಡೆದಿರಲಿ, ಭಯದಿಂದ ನಡೆದಿರಲಿ ಅಥವಾ ಕಾಮದಿಂದ ನಡೆದಿರಲಿ ಅಥವಾ ಸಿದ್ಧಾಂತದಿಂದ ನಡೆದಿರಲಿ, ಅದು ಒಂದು ಅಪರಾಧವೇ ಎಂದು ಸಂಪಾದಕೀಯ ಟಿಪ್ಪಣಿ ಮಾಡಬೇಕಾಗಿ ಬಂತು.

ನಮ್ಮ ದೇಶದಲ್ಲಿ ಬೇರು ಬಿಡುತ್ತಿರುವ ರಾಜಕೀಯದ ಅಪರಾಧೀಕರಣವನ್ನು ಯಾವುದೇ ರೀತಿಯಲ್ಲಿ ಸಮರ್ಥಿಸಿ ಕೊಳ್ಳಲು ಸಾಧ್ಯವಿಲ್ಲ. ಆದರೂ ರಾಜಕೀಯ ಕಾರ್ಯಕರ್ತರ ಮೇಲೆ ಅವರ ಕಾನೂನುಬದ್ಧ ಪ್ರತಿಭಟನೆ ಗಳನ್ನು ದಮನ ಮಾಡಲು ಆಡಳಿತ ಮತ್ತು ಪೊಲೀಸ್ ಸುಳ್ಳು ಮೊಕದ್ದಮೆ ಗಳನ್ನು ಹಾಕಿರುವ ಉದಾಹರಣೆಗಳಿವೆ ಎಂಬುದನ್ನು ಗಮನಿಸೋಣ. ನಮ್ಮ ದೈನಂದಿನ ಅನುಭವಗಳೂ ಕಟುವಾಸ್ತವದ ಅರಿವು ನಮಗಿದೆ. ಆದರೆ ಬಿಜೆಪಿ ಬಾಬ್ರಿಮಸೀದಿ ಧ್ವಂಸ ಮಾಡಿದವರ ಮೇಲೆ ಸುಳ್ಳು ಮೊಕದ್ದಮೆ ಹಾಕಲಾಗಿದೆ ಎಂದು ಹೇಳುತ್ತಿದೆಯೇ? ಪತ್ರಿಕಾ ವರದಿಗಳು, ವಿಡಿಯೋ ಚಿತ್ರಗಳು ಒತ್ತಟ್ಟಿಗಿರಲಿ, ಆರ್‌ಎಸ್‌ಎಸ್, ಬಿಜೆಪಿ, ವಿಹೆಚ್‌ಪಿ ಮತ್ತು ಶಿವಸೇನಾ ಮುಖಂಡರು ಕೂಡಾ ಅತ್ಯುತ್ಸಾಹದ ಭರದಲ್ಲಿ ಮಸೀದಿಯ ಧ್ವಂಸದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದರು ಎಂಬುದನ್ನು ಮರೆಯುವಂತಿಲ್ಲ. ಎಲ್‌ಕೆ ಅಡ್ವಾಣಿಯ ಕುಟುಂಬದ ಒಬ್ಬ ಮಾಜೀ ಸದಸ್ಯ, ಗೌರಿ ಅಡ್ವಾಣಿ ಈ ಕ್ರಿಮಿನಲ್ ಕೃತ್ಯದ ಪಿತೂರಿಯನ್ನು ಎಲ್.ಕೆ.ಅಡ್ವಾಣಿ ಮತ್ತು ವಿನಯ್ ಕಟಿಯಾರ್ ನಡೆಸುತ್ತಿದ್ದುದನ್ನು ನಾನು ಕೇಳಿದ್ದೇನೆ ಎಂದು ಲಿಬರ್‌ಹಾನ್ ಆಯೋಗದ ಎದುರು ಪ್ರತಿಜ್ಞೆ ತಗೊಂಡು ಸಾಕ್ಷ್ಯ ನುಡಿದಿದ್ದಾರೆ. ತನ್ನ ಹೊಸ ಉತ್ಸಾಹದಲ್ಲಿ ವಿರೋಧಪಕ್ಷ ಕಳಂಕಿತ ಮಂತ್ರಿಯನ್ನು ನಾನು ಗುರುತಿಸುವುದು ಹೇಗೆ ಎಂಬುದನ್ನು ಸಂಸತ್ತು ಚರ್ಚಿಸಬೇಕೆಂದೇನು ಒತ್ತಾಯಿಸಲಿಲ್ಲ.

ಬಿಜೆಪಿ ಎತ್ತಿದ ಇನ್ನೊಂದು ಪ್ರಶ್ನೆಯಲ್ಲದ ಪ್ರಶ್ನೆಯೆಂದರೆ ವಜಾಗೊಂಡ ರಾಜ್ಯಪಾಲರದ್ದು. ಇಲ್ಲಿ ಆ ರಾಜ್ಯಪಾಲರ ನೇಮಕವೇ ಅಸೂಕ್ತ ಎಂಬ

ಹರಿಕಿಶನ್ ಸಿಂಗ್ ಸುರ್ಜಿತ್

ಬಗ್ಗೆ ನಾವಿಲ್ಲಿ ಚರ್ಚಿಸುವುದಿಲ್ಲ. ಆ ಬಗ್ಗೆ ಗದ್ದಲ ಎಬ್ಬಿಸುವಾಗ ಬಿಜೆಪಿ ತಾನು ಕೂಡಾ ಅಧಿಕಾರ ವಹಿಸಿಕೊಂಡ ಕೂಡಲೇ ರಾಜ್‌ಭವನಗಳಲ್ಲಿ ಆರ್‌ಎಸ್‌ಎಸ್ ಮಂದಿಯನ್ನು ತುಂಬಲು ಕೆಲವು ರಾಜ್ಯಪಾಲರನ್ನು ನೇಮಿಸಿದೆ ಎಂಬುದನ್ನು ಮರೆತೇಬಿಟ್ಟಿತು. ಅಷ್ಟೇ ಅಲ್ಲ, ಇತ್ತೀಚೆಗೆ ಮಧ್ಯಪ್ರದೇಶದ ಬಿಜೆಪಿ ಸರಕಾರ ಭೂಪಾಲರ ಮೇಯರನ್ನು ವಜಾ ಮಾಡಿ ಇನ್ನೊಬ್ಬ ಮೇಯರನ್ನು ನೇಮಿಸಿತು ಎಂಬುದನ್ನು ಗಮನಿಸಿ! ಈ ಮೊದಲು ಅದು ಹಲವಾರು ಸಹಕಾರಿ ಸಂಸ್ಥೆಗಳನ್ನು ವಿಸರ್ಜಿಸಿತ್ತು. ಏಕೆಂದರೆ ಅದು ಬಿಜೆಪಿಯ ಹತ್ತೋಟಿಯಲ್ಲಿರಲಿಲ್ಲ.

ತಾರಕಕ್ಕೇರಿದ ಬಿಜೆಪಿ ಹತಾಶೆ

ನಂತರ ಬಂತು ಪ್ರಧಾನ ಮಂತ್ರಿಗಳ ಎನ್‌ಡಿಎ ಮುಖಂಡರೊಂದಿಗೆ 'ಒರಟಾಗಿ' ವರ್ತಿಸಿದರು ಎಂಬ ಆಪಾದನೆ. ಅವರ ಪ್ರಕಾರ ಎನ್‌ಡಿಎ ಮುಖಂಡರ ಒಂದು ಗುಂಪು ಡಾ.ಸಿಂಗ್‌ರನ್ನು ಭೇಟಿಯಾದಾಗ ಅವರು ವಿವೇಕದಿಂದ ವರ್ತಿಸಲಿಲ್ಲ ಮಾತ್ರವಲ್ಲ, ಬಜೆಟ್ ಬಗ್ಗೆ ಕೆಲವು ಸಲಹೆಗಳಿದ್ದ ಮನವಿಪತ್ರವನ್ನು ಎಸೆದುಬಿಟ್ಟರು.


ನಿಜವಾಗಿ ಕೇಳಬೇಕೆಂದು ಇದೇ ಎನ್‌ಡಿಎ ಮುಖಂಡರ ಒಂದು ದುರ್ವರ್ತನೆ. ನಮ್ಮ ಸಲಹೆಗಳು ಬಜೆಟ್ ಕುರಿತಾದವುಗಳು ಎಂಬುದನ್ನು ಅವರು ನಿರಾಕರಿಸಿಲ್ಲ. ಪತ್ರಿಕೆಗಳಲ್ಲಿ ಆ ಸಲಹೆಗಳೂ ಪ್ರಕಟವಾಗಿವೆ. ಆದರೆ ಅವರು ಈ ಸಲಹೆ-ಸೂಚನೆಗಳನ್ನು ಸಂಸತ್ತಿನಲ್ಲೇ ಮಂಡಿಸಿ, ಚರ್ಚಿಸಲಿಲ್ಲವೇಕೆ ಎಂದು ಕೇಳಬಹುದಲ್ಲವೆ? ಮಣಿಪುರದಂತಹ ಶೂನ್ಯ ಗಂಭೀರ ಪ್ರಶ್ನೆಗಳಿಗೆ ಕಳೆದ ಮೂರು ತಿಂಗಳಲ್ಲಿ ತಕ್ಷಣದ ಮಧ್ಯಪ್ರವೇಶ ಅಗತ್ಯವಾಗಿತ್ತು. ಆದರೆ ಜನತೆಯ ಪ್ರತಿನಿಧಿಗಳು ಅವನ್ನು ಸರಿಯಾಗಿ ಚರ್ಚಿಸಲಾಗಲಿಲ್ಲ. ಏಕೆಂದರೆ ಬಿಜೆಪಿ (ಎನ್‌ಡಿಎ ಸಂಸತ್ತಿನಲ್ಲಿ ಕೆಲಸ ಮಾಡಲು ಬಿಡಲಿಲ್ಲ. ಹೀಗಿರುವಾಗ ಅಧಿವೇಶನವನ್ನು ಅಸ್ತವ್ಯಸ್ತಗೊಳಿಸಿ ಬಜೆಟನ್ನು ಚರ್ಚೆಯಿಲ್ಲದೆ ಅಂಗೀಕರಿಸಲಾಗಿದೆ ಎಂದು ಪರಿಗಣಿಸಬಹುದೆಂದು ಸರಕಾರಕ್ಕೆ ಹೇಳಿದ ಮೇಲೆ ಜನಗಳ ಬೆನ್ನ ಹಿಂದೆ ಕೆಲವು ಸಲಹೆಸೂಚನೆಗಳನ್ನು ಕೊಡುವುದರ ಹಿಂದೆ ಇರುವ ತರ್ಕವೇನು?


ಇನ್ನು ಪ್ರಧಾನಮಂತ್ರಿಗಳ ವರ್ತನೆಯ ಬಗ್ಗೆ ಅವರ ಆಪಾದನೆಗಳು ಅವರನ್ನು ಅಪಹಾಸ್ಯಕ್ಕೆ ಗುರಿ ಮಾಡಿದೆ. ಇಂದು ಡಾ.ಸಿಂಗ್ ಅವರು ಆಪಾದಿಸಿದ ರೀತಿಯಲ್ಲಿ ವರ್ತಿಸಿರಬಹುದು ಎಂದು ನಂಬಲು ಯಾವ ನಾಗರಿಕನೂ ಸಿದ್ಧನಿಲ್ಲ. ಅಗಸ್ಟ್ 30ರ 'ಹಿಂದೂ' ಸಂಪಾದಕೀಯ ಡಾ.ಸಿಂಗ್‌ರ ವಿರುದ್ಧ ಫರ್ನಾಂಡೀಸ್‌ರ ನಿಂದನೆಗಳ ಬಗ್ಗೆ ಹೇಳುತ್ತಾ ಒಬ್ಬ ಬೀದಿ ಗಲಭೆಕೋರನಿಗೂ ಮುಜುಗರವಾಗಬಹುದಾದ ಭಾಷೆಯಲ್ಲಿ ಅದು ಇತ್ತು ಎಂದಿದೆ. ಮುಂದುವರೆಯುತ್ತಾ ಅದು " ಈಗ ಡಾ.ಸಿಂಗ್‌ರ ಅಸೌಜನ್ಯದ ಆಪಾದನೆ ಮಾಡುವ ವಿರೋಧಪಕ್ಷ ಅವರಿಗೆ ಹೊಸದಾಗಿ ಪ್ರತಿಜ್ಞೆ ಸ್ವೀಕರಿಸಿದ ಪ್ರಧಾನ ಮಂತ್ರಿಗಳಿಗೆ ಸಲ್ಲಬೇಕಾಗಿದ್ದ ಸೌಜನ್ಯವನ್ನು ತೋರಿಸಲಿಲ್ಲ ಎಂಬುದು ತಮ್ಮ ವ್ಯಂಗ್ಯವೇನಲ್ಲ" ಎಂದಿದೆ. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ (ಅಗಸ್ಟ್ 29') ರಲ್ಲಿ ಪಮೇಲಾ ಫಿಲಿಪೋಸ್‌ರವರು ಇಂದಿನ ಪ್ರತಿಪಕ್ಷ ಸೋನಿಯಾ ಗಾಂಧಿಯವರ ಹುಬ್ಬಿನ ಆಕಾರ ಅಥವಾ ಮನಮೋಜನ್ ಸಿಂಗ್ಗರ ಮುಂಡಾಸಿನ ಬಣ್ಣ ತಮಗೆ ಇಷ್ಟವಾಗಿಲ್ಲ ಎಂದು ಹೇಳುವ ತರಹದ್ದು' ಎಂದು ವ್ಯಂಗ್ಯಮಾಡಿದ್ದಾರೆ. ಬಿಜೆಪಿ/ಎನ್‌ಡಿಎ ಹೆಸರಿನಲ್ಲಿ ಸಿಲುಕಿಕೊಂಡಂತಿದೆ. ಅದರಿಂದ ಹೊರಬರಲು ಹೆಚ್ಚೆಚ್ಚು ಪ್ರಯತ್ನಿಸಿದಷ್ಟು ಇನ್ನಷ್ಟು ಆಳವಾಗಿ ಸಿಲುಕಿಕೊಳ್ಳುತ್ತಿದ್ದಾರೆ. ಅವರ ಹತಾಶೆ ನಿಜಕ್ಕೂ ಶಿಖರ ಮುಟ್ಟಿದೆ.

ಈ ಹತಾಶೆಯದ್ದಾಗಿಯೇ ಅವರು ಲೋಕಸಭಾಧ್ಯಕ್ಷರ ಸ್ಥಾನಕ್ಕೂ ಅವಮರ್ಯಾದೆ ತೋರಿದರು. ಈ ಸ್ಥಾನ ಪಕ್ಷ ರಾಜಕೀಯದಿಂದ ಮೇಲಿರುವ ಸ್ಥಾನವಷ್ಟೇ ಅಲ್ಲ, ಈಗ ಆ ಸ್ಥಾನದಲ್ಲಿರುವವರು ಸರಕಾರಕ್ಕೆ ಅನುಕೂಲ ಮಾಡಿಕೊಡುವ ಸೂಚನೆಗಳನ್ನೇನೂ ನೀಡಿಲ್ಲ. ನಿಜ ಸಂಗತಿಯೆಂದರೆ ಒಬ್ಬ ಬದ್ಧ ಎಡಪಂಥೀಯವಾದ ಸೋಮನಾಥ್ ಚಟರ್ಜಿ ಈ ಉನ್ನತ ಸ್ಥಾನದ ಗೌರವವನ್ನು ಕಾಪಾಡುವ ಸಾಮರ್ಥ್ಯವೂ ತನಗಿದೆ ಎಂಬುದನ್ನು ಈ ಮೂರು ತಿಂಗಳಲ್ಲಿ ತೋರಿಸಿಕೊಟ್ಟಿದ್ದಾರೆ. ನಿಜವಾಗಿ ಬಿಜಜೆಪಿ/ ಎನ್‌ಡಿಎ ಸ್ಥಾಯೀ ಸಮಿತಿಗಳನ್ನು ಸೇರಲು ಒಪ್ಪಲು ಕಾರಣ ಬಹು ಮಟ್ಟಿಗೆ ಅವರ ಪ್ರಯತ್ನವೇ ಕಾರಣ. ಆದರೂ ಪ್ರತಿಪಕ್ಷ ಅವರ ಮೇಲೂ ಆಗಾಗ ಅನಗತ್ಯವಾಗಿ ಗುರಿಯಿಟ್ಟಿತು.

ಸೋಲನ್ನಿನ್ನೂ ಅಡಗಿಸಲಾಗಿಲ್ಲ

ಆದರೆ ಈ ರೀತಿ ಎನ್‌ಡಿಎಯನ್ನು ಬಹಳ ಆಳವಾದ ಹತಾಶ ಭಾವನೆ ಆಧರಿಸಿದ್ದಾರೆ ಅದು ಯಾರ ತಪ್ಪು? ಅವರದ್ದೇ ತಪ್ಪು. ಬಿಜೆಪಿ/ಎನ್‌ಡಿಎಗೆ ತಮ್ಮ ಪರಾಭವವನ್ನು ಅಡಗಿಸಿಕೊಳ್ಳಲಾಗಿಲ್ಲ ಎಂಬ ಭಾವನೆ ಜನರಿಗೆ ಬಂದಿದೆ. ಸಾಕಷ್ಟು ಟಿಪ್ಪಣಿಗಾರರು ಇದನ್ನು ಗಮನಿಸಿದ್ದಾರೆ. ಜಗತ್ತಿನ ಯಾವುದೇ ಭಾಗದಲ್ಲಿ ಗೆಲುವು, ಸೋಲುಗಳು





ಸದೀಯ ಪ್ರಜಾಪ್ರಭುತ್ವದ ಬಗೆ. ಆದರೆ ಬಿಜೆಪಿ ತ್ರ ನಿಜವಾದ ಫ್ಯಾಸಿಸ್ಟರಂತೆ ತನಗೆ ಮತದಾರರ ಸ್ಕಾರವನ್ನು ಒಪ್ಪಲು ಸಾಧ್ಯವಿಲ್ಲ ಎಂಬುದನ್ನು ಶಿರಿಸಿಕೊಟ್ಟಿದೆ. ಇದರರ್ಥ ಪ್ರಜಾಪ್ರಭುತ್ವದ ನ್ನತ ನ್ಯಾಯಾಲಯ. ಅಂದರೆ ಜನತೆಯ ಯಾಲಯದ ಬಗ್ಗೆ ತಿರಸ್ಕಾರ. ಈ ಏಕೈಕ ಗತಿಯೇ ಕಳೆದ 14 ವಾರಗಳ ಅವರ ವರ್ತನೆಗೆ ವರಣೆ ನೀಡಬಲ್ಲದು.

ಇತ್ತೀಚಿನ ಉಮಾಭಾರತಿ ಪ್ರಕರಣ ಅವರ ನಿಲುವನ್ನು ಸ್ಪಷ್ಟವಾಗಿ ತೋರಿದೆ. ಹುಬ್ಬಳ್ಳಿ ಯಾಲಯ ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಸಿದಾಗ ಈ ವಿಷವುಗುಳುವ "ಸಾಧ್ವಿ" ಈ ದೇಶ ದು ವಿದೇಶಿ ಮಹಿಳೆಯು ಎಂತಹ ಷ್ಠಿಯಲ್ಲಿದೆಯೆಂದರೆ ರಾಷ್ಟ್ರೀಯ ಧ್ವಜವನ್ನು ರಿಸುವುದೂ ಅಪರಾಧವಾಗುತ್ತದೆ ಎಂದಿದ್ದಾರೆ. ದರಲ್ಲಿ ಎರಡು ಅಂಶಗಳಿವೆ. ಒಂದು, ರಾಷ್ಟ್ರೀಯ ಜವನ್ನು ಕೋಮು ಭಾವೋನ್ಮಾದವನ್ನು ಡದೆಬ್ಬಿಸಲು ದುರುಪಯೋಗಪಡಿಸುವ ಹಕ್ಕನ್ನು ಗೆ (ಅಥವಾ ಇನ್ಯಾರಿಗಾದರೂ) ಯಾರು ಟ್ಟಿದ್ದಾರೆ? ವಾಸ್ತವವಾಗಿ ಇದೇ ಆ ಧ್ವಜಕ್ಕೆ ೇರಿಸುವ ಅತಿ ದೊಡ್ಡ ಅವಮರ್ಯಾದೆ. ರಡನೆಯದಾಗಿ ಆಕೆಯನ್ನು ನ್ಯಾಯಾಂಗ ಕಸ್ಟಡಿಗೆ ಸಿದ್ದು ಒಂದು ನ್ಯಾಯಾಲಯ. ಇದರಲ್ಲಿ ೋನಿಯಾ ಗಾಂಧಿ ಏನು ಮಾಡಿದ್ದಾರೆ? ್ಯಾಯಾಲಯ ಶ್ರೀಮತಿ ಗಾಂಧಿಯು ಷ್ಟಿಯಲ್ಲಿದೆ ಎಂಬ ಪರೋಕ್ಷ ಸೂಚನೆಯೂ ಕೆಯನ್ನು ನ್ಯಾಯಾಲಯದ ಅವಮರ್ಯಾದೆ ಡಿದ ತಪ್ಪಿತಸ್ಥಳನ್ನಾಗಿ ಮಾಡುತ್ತದೆ.

ಇದರಲ್ಲೆಲ್ಲಾ ಆಶ್ಚರ್ಯವೇನೂ ಇಲ್ಲ. ಜನಗಳ ವನೆಗಳಿಂದ ದೂರವಾದ ಬಿಜೆಪಿ ಮತ್ತು ನ್‌ಡಿಎ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ತಸಿದ್ಧ ಎಂದು ಪ್ರಾಮಾಣಿಕವಾಗಿ ನಿರೀಕ್ಷಿಸಿದ್ದವು. ಜಸ್ಥಾನ್, ಮಧ್ಯಪ್ರದೇಶ ಹಾಗೂ ತ್ತೀಸಗಡದಲ್ಲಿ ಬಿಜೆಪಿ ವಿಜಯ ಈ ನಿರೀಕ್ಷೆಗೆ ಪ್ಪ ಸುರಿದಿತ್ತು. ಆದರೆ ಆರು ವರ್ಷಗಳ ರಾಡಳಿತದಿಂದ ಬೇಸತ್ತಿದ್ದ ಜನ ಅವರ ರೀಕ್ಷೆಗಳನ್ನೆಲ್ಲಾ ಮಣ್ಣುಪಾಲು ಮಾಡಿದರು. ಂದು ಆರ್‌ಎಸ್‌ಎಸ್‌ನ ಪ್ರಚಾರ ಮಂತ್ರ ಂಗ್ರೆಸ್ ಈ ವಿಧಾನಸಭಾ ಚುನಾವಣೆಗಳಲ್ಲಿ ೇಕೆಂದೇ ಸೋತು ಈ ಉಪಾಯ ಮಾಡಿತು ಂಬ ವದಂತಿಯನ್ನೂ ಉತ್ಪಾದಿಸಿದೆ. ಜವಾಗಿಯೂ ಅವರ ಮುಗ್ಧತೆಗೆ ಮಿತಿಯೇ ಇಲ್ಲ. ಯುಪಿಎ ಆಡಳಿತ ಇನ್ನೇನು ಪತನವಾಗಲಿದೆ ಎಂಬ ಜ್ಯೋತಿಷಿಯ ಮಾತನ್ನು ಅವರು ನಂಬುತ್ತಾರೆ.

ಬಿಜೆಪಿ / ಎನ್‌ಡಿಎ ಸಂಸತ್ತನ್ನು ಅಸ್ತವ್ಯಸ್ತ ೊಳಿಸಿದ್ದರಿಂದ ಇತರ ಪಕ್ಷಗಳಿಗೂ ಜನಗಳ ಪ್ರಶ್ನೆಗಳನ್ನು ಎತ್ತಲು ಅವಕಾಶವಾಗದಂತಾಯಿತು. ಾವು ಎಡಪಂಥೀಯರು ಮಣಿಪುರದಂತಹ ಕೆಲವು ಪ್ರಶ್ನೆಗಳನ್ನು ಎತ್ತಿದೆವು, ಆದರೆ ಇನ್ನೂ ಹಲವು ಜನ-ಪರ ಪ್ರಶ್ನೆಗಳನ್ನು ಎತ್ತದಂತೆ ಮಾಡಲಾಯಿತು.

ಇದಕ್ಕೆ ಇನ್ನೊಂದು ಆಯಾಮವೂ ಇದೆ. ಯುಪಿಎ ಸರ್ಕಾರದ ಬಳಿ ಜನಗಳಿಗೆ ನೀಡಲು ಏನೂ ಇಲ್ಲ ಎಂಬ ವಿರೋಧ ಪಕ್ಷದ ವಾದವನ್ನು ಂದು ವೇಳೆ ಒಪ್ಪಿದರೂ ಕೂಡಾ ಈ ಆಡಳಿತಪರ ಶ್ವಾಸಾರ್ಹತೆಯನ್ನು ಪರೀಕ್ಷಿಸಲು ಸಂಸತ್ತು ಒಂದು ವೇದಿಕೆಯಾಗಿತ್ತು. ಆದರೆ ತನ್ನ ವರ್ತನೆಯಿಂದಾಗಿ ಬಿಜೆಪಿ/ ಎನ್‌ಡಿಎ ಸರಕಾರದ ಆಚರಣೆಯನ್ನು ಪರೀಕ್ಷಿಸುವ ಒಂದು ಅವಕಾಶದಿಂದ ಜನಗಳನ್ನು ವಂಚಿಸಿತು. ಆದ್ದರಿಂದ ಬಿಜೆಪಿ ಮತ್ತು ಎನ್‌ಡಿಎ ಜನಗಳ ಪ್ರಶ್ನೆಗಳ ಬಗ್ಗೆ ಬೇಜವಾಬ್ದಾರಿತನ ಮತ್ತು ಉಪೇಕ್ಷೆ ತೋರಿದ ಅಪರಾಧವನ್ನು ಮಾಡಿವೆ.

ಇಂತಹ ವರ್ತನೆಯ ಮೇಲೆ ಹೇಳಿದ ಶ್ರೀಮತಿ ರಮೇಲಾ ಫಿಲಿಪೋಸ್‌ರವರು "ಈ ವಿರೋಧ ಾವು ಪಡೆದಿರುವ ಅತ್ಯುತ್ತಮ ವಿರೋಧ ಪಕ್ಷ, ವಾಸ್ತವವಾಗಿ ಈ ವಿರೋಧ ಪಕ್ಷ ಎಷ್ಟು ಉತ್ತಮವಾಗಿ ವಿರೋಧಿಸುತ್ತದೆಯೆಂದರೆ ಅದರ ಸದಸ್ಯರು ಮುಂದಿನ ಬಹಳಷ್ಟು ವರ್ಷಗಳ ಕಾಲ ವಿರೋಧ ಪೀಠಗಳಲ್ಲೇ ಆಸೀನರಾಗಿರಲಿ ಎಂಬುದು ನ್ನ ಪ್ರಾಮಾಣಿಕ ಆಸೆ" ಎಂದು ಉದ್ಗರಿಸಿದ್ದಾರೆ. ೆಗೆ ಎಲ್ಲವನ್ನೂ ವಿರೋಧಿಸುವ, ಯಾವುದನ್ನೂ ಮುಂದಿಡದ ಪ್ರವೃತ್ತಿಯು ಇವರ ಕುರಿತಾದ ಶ್ರೀಮತಿ ಫಿಲಿಪೋಸ್‌ರವರ ಆಸೆ ಖಂಡಿತಾ ಈಡೇರುತ್ತದೆ ಎಂದು ನಾವು ಭರವಸೆ ನೀಡಬಲ್ಲೆವು.

'ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಮಧ್ಯಪ್ರವೇಶ'

ಆರು ದಶಕಗಳಿಗಿಂತಲೂ ಹೆಚ್ಚಾಗಿ ಕರ್ನಾಟಕದ ಕಾರ್ಮಿಕ ವರ್ಗ ಹಾಗೂ ಜನತೆಗಾಗಿ ತಮ್ಮ ಸೇವೆಯನ್ನು ಅರ್ಪಿಸಿ ಜುಲೈ1, 2002ರಂದು ನಿಧನರಾದ ಕಾಂ.ಸೂರ್ಯನಾರಾಯಣರಾವ್‌ರವರ 80ನೇ ಜನ್ಮದಿನವಾದ ಇಂದು **"ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಮಧ್ಯಪ್ರವೇಶ"** ಎಂಬ ವಿಷಯದ ಬಗ್ಗೆ ಒಂದು ವಿಚಾರ ಸಂಕಿರಣವನ್ನು ನಡೆಸುವುದು ಸೂಕ್ತವೆಂದು ಭಾವಿಸಿ ಕಾಂ.ಸೂರ್ಯನಾರಾಯಣರಾವ್ ಸ್ಮಾರಕ ಸಮಿತಿ ಈ ಏರ್ಪಾಟನ್ನು ಮಾಡಿದೆ. ಕಾರಣ ಈ ವಿಚಾರ ಕಾರ್ಮಿಕರನ್ನು ಹಾಗೂ ಜನ ಸಾಮಾನ್ಯರನ್ನು ಸದಾ ಕಾಡುತ್ತಿರುವ ವಿಚಾರ. ಅದರಲ್ಲೂ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ.


ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಭಾಗವಹಿಸಲು ಒಪ್ಪಿಗೆ ನೀಡಿರುವುದು ನಮಗೆ ಬಹಳ ಸಂತೋಷದ ವಿಷಯ. ಈ ವೇದಿಕೆಯಲ್ಲಿ ಮಂಡಿಸಲ್ಪಡುವ ಹಾಗೂ ಚರ್ಚಿಸುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಮಿಕ ಹಾಗೂ ಪೊಲೀಸ್ ನೀತಿಗಳಲ್ಲಿ ತಕ್ಕ ವ್ಯವಸ್ಥೆ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.

ಕೈಗಾರಿಕಾ ವಿವಾದಗಳ ರೂಪ ಮತ್ತು ತಿರುಳು

ಯಾವುದೇ ವ್ಯಕ್ತಿಯ ಉದ್ಯೋಗ ಅಥವಾ ಉದ್ಯೋಗರಾಹಿತ್ಯ ಪರಿಸ್ಥಿತಿಯ ಕುರಿತು ಮಾಲೀಕರು ಮತ್ತು ಕಾರ್ಮಿಕರ ನಡುವಿನ ಯಾವುದೇ ಭಿನ್ನಾಭಿಪ್ರಾಯವೇ, ಮುಖ್ಯವಾಗಿ, ಕೈಗಾರಿಕಾ ವಿವಾದದ ವ್ಯಾಖ್ಯಾನವಾಗಿದೆ. ಈ ಅಭಿಪ್ರಾಯ ಭೇದಗಳು ಸಮಂಜಸವಾಗಿ ಇತ್ಯರ್ಥ ಆಗಬೇಕು. ಈ ವಿವಾದಗಳಲ್ಲಿ ಪೊಲೀಸರ ಮಧ್ಯಪ್ರವೇಶ ಅನಗತ್ಯ. ಸಾರ್ವಜನಿಕ ಹಿತಾಸಕ್ತಿಯಿಂದ ಈ ವಿವಾದಗಳನ್ನು ಬಗೆಹರಿಸಲು ಸರ್ಕಾರದ ಮಧ್ಯಪ್ರವೇಶ ಅಗತ್ಯವಿದೆ.

ಮೂಲತಃ ಉದ್ಯೋಗ/ಉದ್ಯೋಗರಾಹಿತ್ಯ ಅಥವಾ ಉದ್ಯೋಗದ ಸ್ಥಿತಿಗತಿಗಳ ಕುರಿತಾದ ಎಲ್ಲಾ ಪ್ರಶ್ನೆಗಳು, ಯಜಮಾನ ಮತ್ತು ಸೇವಕರಿಗೆ ಸಂಬಂಧಿಸಿದ ಕಾನೂನಿನ ಆಧಾರದ, ಒಪ್ಪಂದದ ಮೂಲಕ ತೀರ್ಮಾನವಾಗುತ್ತಿತ್ತು. 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಆರಂಭದ ಬ್ರಿಟಿಷ್ ಭಾರತದಲ್ಲಿ ಆಧುನಿಕ ಕೈಗಾರಿಕಾ ಬೆಳವಣಿಗೆಗೆ ಹೊಂದಿಕೊಂಡು, ಕಾರ್ಮಿಕರ ಪರಿಸ್ಥಿತಿಗಳ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಚರ್ಚೆ ನಡೆಯಿತು. ಬ್ರಿಟನ್ನಿನ ಪಾರ್ಲಿಮೆಂಟ್ ಮತ್ತು ಅಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಇಂತಹ ಚರ್ಚೆಗೆ ಕಾರಣವಾದ ಸಾಮಾಜಿಕ-ಆರ್ಥಿಕ-ರಾಜಕೀಯ ತಳಹದಿ ಯಾವುದು? ಇದು ಸಹಜವಾಗಿ ಒಂದು ಕಡೆ, ಬ್ರಿಟನ್ ಮತ್ತು ಭಾರತೀಯ ಬಂಡವಾಳದ ನಡುವಿನ ವೈರುಧ್ಯವಾದರೆ ಮತ್ತೊಂದು ಕಡೆ ಭಾರತದ ಬಂಡವಾಳ ಮತ್ತು ಭಾರತದ ಕಾರ್ಮಿಕ ವರ್ಗದ ನಡುವಿನ ವೈರುದ್ಧವಾಗಿತ್ತು. ಬ್ರಿಟಿಷ್ ಪಾರ್ಲಿಮೆಂಟಿನ ಮಧ್ಯಪ್ರವೇಶ ಸ್ವಾಭಾವಿಕವಾಗಿ ಭಾರತದ ಕೈಗಾರಿಕೆಯನ್ನು ನಿಯಂತ್ರಣಗೊಳಿಸುವುದಾಗಿತ್ತು. ಇದಕ್ಕಾಗಿ ಭಾರತದ ಶೋಷಿತ ಕಾರ್ಮಿಕವರ್ಗವನ್ನು ಕೌಶಲ್ಯದಿಂದ ಬಳಸಿಕೊಂಡರು. 1930ರ ರಾಯಲ್ ಕಾರ್ಮಿಕ ಆಯೋಗ, ಅದರ ಶಿಫಾರಸ್ಸುಗಳು, ಪ್ರಾಂತಗಳಲ್ಲಿ ಕಾರ್ಮಿಕ ಆಯುಕ್ತರ ಕಛೇರಿಗಳ ಸ್ಥಾಪನೆ, ಕಾರ್ಮಿಕ ಕಾನೂನುಗಳ ರಚನೆ ಇತ್ಯಾದಿಗಳು ಈ ಆಧಾರದಲ್ಲೇ ರೂಪುಗೊಂಡವು. ಕಾರ್ಮಿಕ ವಿವಾದಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಈ ರೀತಿಯಲ್ಲಿ ಪ್ರಾರಂಭವಾಯಿತು. ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ರಚನೆ ಮತ್ತು ಭಾರತ ಗಣರಾಜ್ಯದ ಸ್ಥಾಪನೆ, ಸಂವಿಧಾನದ ಅಂಗೀಕಾರ ಮತ್ತು ಮಾತಿಲ್ಲದ ಶಬ್ದಾಡಂಬರವಾದ ರಾಜ್ಯಾಂಗ ನಿರ್ದೇಶಕ ತತ್ವಗಳು ಮುಂತಾದವುಗಳ ಮೂಲಕ ಸರ್ಕಾರದ ಮಧ್ಯಪ್ರವೇಶವನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಯಿತು. ಸಂವಿಧಾನ ಜಾರಿಯ ಜವಾಬ್ದಾರಿ ಹೊಂದಿದ್ದ ಸರ್ವೋಚ್ಚ ನ್ಯಾಯಾಲಯ ಮುಂದೆ ಸಾಮಾಜಿಕ ನ್ಯಾಯದ ಬಗ್ಗೆ ಒಂದು ರೂಪವನ್ನು ಕೊಟ್ಟಿತು. ಪ್ರಭುತ್ವ ಮಧ್ಯಪ್ರವೇಶದ ಈ ಎಲ್ಲಾ ಬೆಳವಣಿಗೆಗಳು ಸ್ವಾಭಾವಿಕವಾಗಿ ಶೋಷಿತ ವರ್ಗಗಳ ಪರವಾಗಿತ್ತು. ಇದರಿಂದಾಗಿ ಬ್ರಿಟಿಷ್ ಆಡಳಿತದಲ್ಲಿದ್ದ ಭಾರತದಲ್ಲಾಗಲಿ ಅಥವಾ ಸ್ವತಂತ್ರ ಭಾರತದಲ್ಲಾಗಲಿ ಎಲ್ಲವೂ ಶೋಷಿತ ವರ್ಗಗಳ ಪರವಾಗಿತ್ತು ಎಂದು ಅರ್ಥವಲ್ಲ. ಹಾಗೆ ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತು. ನಿಜಕ್ಕೂ ಹೇಳುವುದಾದರೆ ಪ್ರಭುತ್ವ ವ್ಯವಸ್ಥೆ ಪ್ರಭಾವಿ ವರ್ಗಗಳ ಪರವಾಗಿರುತ್ತದೆ. ಬ್ರಿಟಿಷ್ ಆಡಳಿತದಲ್ಲಿ ಸ್ವಾಭಾವಿಕವಾಗಿ ಪ್ರಭಾವಶಾಲಿಗಳಾಗಿದ್ದವರು ಬ್ರಿಟಿಷ್ ಬಂಡವಾಳಗಾರರು. ಅವರಿಗೆ ಬೇಕಾಗಿದ್ದದ್ದು ಭಾರತದ ಕೈಗಾರಿಕೆ ಮತ್ತು ಬಂಡವಾಳಗಾರರನ್ನು ನಿಯಂತ್ರಿಸುವುದು. ಈ ಬೆಳವಣಿಗೆಯಲ್ಲಿ ಕಾರ್ಮಿಕ ಕಾನೂನುಗಳು ಹೊರಹೊಮ್ಮಿತು. ಆದರೆ ಭಾರತದಲ್ಲಿ ಕೈಗಾರಿಕೆಗಳು ಮತ್ತು ಬಂಡವಾಳ ಬ್ರಿಟಿಷರಿಗೆ ಸೇರಿತ್ತು. ಇಲ್ಲಿ ಮತ್ತು ಜೊತೆಗೆ ಭಾರತದ ಬಂಡವಾಳಗಾರರಿಗೆ ಸೇರಿದ ಕೈಗಾರಿಕೆಗಳೂ

ಕಾಂ. ಸೂರಿಯವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಏರ್ಪಡಿಸಿದ್ದ ದತ್ತಿ ಉಪನ್ಯಾಸದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್ ಮಂಡಿಸಿದ ಪ್ರಬಂಧವನ್ನು ಈ ಮುಂದೆ ಕೊಡಲಾಗಿದೆ.



ಒಳಗೊಂಡಂತೆ ಸರ್ಕಾರದ ಮಧ್ಯಪ್ರವೇಶವೆಂದರೆ ಕಾರ್ಮಿಕ ವರ್ಗದ ಚಳುವಳಿಗಳನ್ನು ದಮನ ಮಾಡಲು ಪೊಲೀಸರನ್ನು ಬಳಸುವುದೇ ಆಯ್ತು. ಈ ನೀತಿ ಭಾರತದ ಬಂಡವಾಳಗಾರರಿಗೂ ಅನುಕೂಲವಾಯಿತು. ಸ್ವಾತಂತ್ರ್ಯದ ನಂತರವು ಪೊಲೀಸರ ಮಧ್ಯಪ್ರವೇಶ ಕಡಿಮೆಯಾಗಲಿಲ್ಲ, ಬದಲಾಗಿ ತೀವ್ರಗೊಳಿಸಲಾಯಿತು.

ಕಾರ್ಮಿಕರಿಂದ ಹಿಂಸಾಚಾರ ಎಂಬ ಹೆಸರಿನಲ್ಲಿ ಈ ಮಧ್ಯಪ್ರವೇಶವನ್ನು ಯಾವಾಗಲೂ ಸಮರ್ಥಿಸಲಾಗುತ್ತಿತ್ತು. ಮುಷ್ಕರ, ಮೆರವಣಿಗೆ, ಪ್ರತಿಭಟನೆ ಮುಂತಾದವುಗಳಲ್ಲಿ ಪೊಲೀಸರ ಮಧ್ಯಪ್ರವೇಶವಾಗುತ್ತಿತ್ತು. ತತ್ವರಹಿತ ಆಡಳಿತವರ್ಗದವರು ಭ್ರಷ್ಟ ಅಧಿಕಾರಿಗಳನ್ನು ಅದರಲ್ಲೂ ಮುಖ್ಯವಾಗಿ ಪೊಲೀಸ್ ಅಧಿಕಾರಿಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವುದನ್ನು ಕಾರ್ಮಿಕರು ಕಂಡರು. ಪ್ರಭುತ್ವ ಮಧ್ಯಪ್ರವೇಶದ ಮತ್ತೊಂದು ಮುಖದಿಂದಾಗಿ ಬಂದ ವಿವಾದಗಳ ರೂಪವು, ಪ್ರಭುತ್ವ ಮಧ್ಯಪ್ರವೇಶದ ಸೈದ್ಧಾಂತವನ್ನು ಬಯಲು ಮಾಡಿತು.

ಪೊಲೀಸ್ ದೃಷ್ಟಿಕೋನ

ಇದು ಮೇಲೆ ಹೇಳಿದಂತಹ ವಿವಾದಗಳಿಗೆ ಸಂಬಂಧಪಟ್ಟಿದೆ. ಮೆರವಣಿಗೆ, ಪ್ರದರ್ಶನದಂತಹ ಪ್ರತಿಭಟನಾ ವಿಧಾನಗಳು ಪೊಲೀಸರ ದೃಷ್ಟಿಕೋನದಲ್ಲಿ, ಸಾರ್ವಜನಿಕ ಹಿತಕ್ಕಾಗಿ ಮಧ್ಯಪ್ರವೇಶ ಮತ್ತು ನಿಯಂತ್ರಣ ಮಾಡಬಹುದಾದ ಸಂದರ್ಭಗಳಾಗಿವೆ. ಪೊಲೀಸರ ತಪ್ಪು ನಿರ್ಬಂಧಗಳಿಗೆ ಕೈಗಾರಿಕಾ ವಿವಾದಗಳಲ್ಲಿನ ಪಿಕೆಟಿಂಗ್ ಸುಲಭವಾದ ಕಾರಣಗಳಾಗುತ್ತವೆ. ಅಂತಿಮವಾಗಿ ಪೊಲೀಸರು ತಮ್ಮ ಕ್ರಮಗಳನ್ನು ಕಾನೂನು ಮತ್ತು ವ್ಯವಸ್ಥೆಯ ತತ್ವವನ್ನು ಮುಂದುಮಾಡಿ ಸಮರ್ಥಿಸಿಕೊಳ್ಳುತ್ತಾರೆ.

ಕಾರ್ಮಿಕರ ದೃಷ್ಟಿಕೋನ

ತತ್ವರಹಿತ ಆಡಳಿತ ವರ್ಗದವರಿಂದ ವಿವಾದಗಳು ಕಾರ್ಖಾನೆಯಿಂದ ಗೇಟಿಗೆ ಮತ್ತು ಬೀದಿಗೆ ಬರುತ್ತವೆ. ಕಾರ್ಮಿಕರ ಹಕ್ಕುಗಳನ್ನು ಮತ್ತು ಸಂಘಗಳನ್ನು ಮಾನ್ಯತೆ ಮಾಡಲು ನಿರಾಕರಿಸುವುದು ಹಾಗೂ ದೇಶದ ಕಾನೂನಿಗೆ ತಲೆಬಾಗಲು ನಿರಾಕರಿಸುವ ಕ್ರಮಗಳಿಂದಾಗಿ ವಿವಾದಗಳು ತಲೆಯೆತ್ತುತ್ತವೆ. ಶೇ.90ರಷ್ಟು ವಿವಾದಗಳು ಬೀದಿಗೆ ಬರುವುದಕ್ಕೆ ಮಾಲೀಕರು ಸಂಘವನ್ನು ಮಾನ್ಯತೆ ಮಾಡಲು ನಿರಾಕರಿಸುವುದೇ ಕಾರಣವಾಗಿರುತ್ತದೆ. ಮಾಲೀಕರು ಸಂಘದ ಚಟುವಟಿಕೆಗಳಲ್ಲಿ ಪ್ರವೇಶ ಮಾಡಕೂಡದು ಮತ್ತು ಕಾರ್ಮಿಕರೊಡನೆ ಸಾಮೂಹಿಕ ಚೌಕಾಶಿಗೆ ನಿರಾಕರಿಸಕೂಡದು ಎಂಬುದು ದೇಶದ ಕಾನೂನು. ಕನಿಷ್ಠ ವೇತನದ ನಿರಾಕರಣೆ ಅನೇಕ ಕಾರ್ಮಿಕ ಹೋರಾಟಗಳಿಗೆ ಕಾರಣವಾಗಿದೆ. ಕಾರ್ಮಿಕ ಕಾನೂನು ಪಾಲನೆ ಮಾಡದೆ ,ಶಾಂತಿ ಪಾಲನೆ ಮಾಡುವುದು ಸಾಧ್ಯವಿಲ್ಲ. ಕಾನೂನು ಪಾಲನೆ ಮಾಡುವಂತೆ ನೋಡಿಕೊಳ್ಳಬೇಕಾದದ್ದು ಸರ್ಕಾರದ ಕರ್ತವ್ಯ. ನಿರಾಕರಣೆಯಾದಾಗ ಇಂತಹ ಪರಿಸ್ಥಿತಿಗಳು ಉದ್ಭವವಾಗುತ್ತವೆ. ಇಂತಹ ಪರಿಸ್ಥಿತಿಗಳಲ್ಲಿ ಕಾರ್ಮಿಕ ನ್ಯಾಯಾಲಯಕ್ಕೆ ಹೋಗಿ, ಬೀದಿಗೆ ಬರಬೇಡಿ ಎಂಬುವುದು ಪೊಲೀಸ್ ಬುದ್ಧಿವಾದ. ಇದರ ಜೊತೆಗೆ ಸಿವಿಲ್ ನ್ಯಾಯಾಲಯಗಳು ತಡೆಯಾಜ್ಞೆ ನೀಡುವ ಮೂಲಕ ಕಾನೂನು ಬಾಹಿರ ಮಧ್ಯಪ್ರವೇಶಗಳಾಗುತ್ತವೆ. ಕಾರ್ಮಿಕ ಕಾನೂನುಗಳಲ್ಲಿ ಸಿವಿಲ್ ಕೋರ್ಟುಗಳಿಗೆ ಅವಕಾಶವಿಲ್ಲ ಎಂದಿದ್ದರು ಸಹ ಎಡೆ ತಡೆಯಿಲ್ಲದೆ ಇದು ನಡೆಯುತ್ತಿದೆ. ತಡೆಯಾಜ್ಞೆ ಕಾನೂನಿನಲ್ಲಿ ಕಾನೂನು ಉಲ್ಲಂಘನೆ ಆಗಬಾರದು ಎಂದು ತಡೆಯಾಜ್ಞೆ ನೀಡಲು ಅವಕಾಶವಿಲ್ಲ. ಯಾವ ವಿಷಯದಲ್ಲಿ ಈಗಾಗಲೇ ಕಾನೂನು ಅಥವಾ ವ್ಯವಸ್ಥೆ ಇಲ್ಲವೋ ಅಂತಹ ಸಂದರ್ಭದಲ್ಲಿ ಮಾತ್ರ ನ್ಯಾಯಾಲಯ ತಡೆಯಾಜ್ಞೆಗಳ ಮೂಲಕ ಅದನ್ನು ಸರಿಪಡಿಸಬಹುದು. ಅನುಭವದಲ್ಲಿ ನೋಡುವುದಾದರೆ ದೇಶದಲ್ಲಿ ಇಂತಹ ಕಾನೂನು ಬಾಹಿರ ಆಜ್ಞೆಗಳನ್ನು ಮಾಲೀಕರ ಪರವಾಗಿ ಮಧ್ಯಪ್ರವೇಶಿಸುವುದನ್ನು ಪೊಲೀಸರು ಸಮರ್ಥಿಸಿಕೊಳ್ಳಲು ಬಳಸುತ್ತಿದ್ದಾರೆ.

ಚಾರಿತ್ರಿಕ ಅನುಭವಃ

ರಾಜ್ಯಗಳಲ್ಲಿ ಕಮ್ಯೂನಿಸ್ಟ್ ಸರ್ಕಾರಗಳು ರಚನೆಯಾದ ನಂತರ ಕಾರ್ಮಿಕ ವಿವಾದಗಳಲ್ಲಿ ಪೊಲೀಸ್ ಮಧ್ಯಪ್ರವೇಶದ ವಿಚಾರಗಳನ್ನು ಭಿನ್ನವಾಗಿ ನಿಭಾಯಿಸಲಾಯಿತು. ಇಂತಹ ಒಂದು ಸನ್ನಿವೇಶ ಮೊದಲಬಾರಿಗೆ 1968ರಲ್ಲಿ ಕೇಂದ್ರ ಸರ್ಕಾರದ ನೌಕರರ ಮುಷ್ಕರ ಕಾಲದಲ್ಲಿ ಉಂಟಾಯಿತು. ಕೇಂದ್ರ ಸರ್ಕಾರ ಮುಷ್ಕರ ನಿರತ ಕಾರ್ಮಿಕರನ್ನು ದಸ್ತಗಿರಿ ಮಾಡುವಂತೆ ರಾಜ್ಯ ಸರ್ಕಾರಗಳಿಗೆ ಆದೇಶ ನೀಡಿತು. ಇ.ಎಂ.ಎಸ್. ನಂಬೂದಿರಿಪಾಡ್ ಅವರ ನೇತೃತ್ವದಲ್ಲಿದ್ದ ಕೇರಳ ಸರ್ಕಾರ ಕೇಂದ್ರದ ಆದೇಶವನ್ನು ಜಾರಿಗೊಳಿಸಲು ನಿರಾಕರಿಸಿತು.

ದೇಶದ ಇತರ ಪ್ರದೇಶಗಳಲ್ಲಿ ವಿಶಿಷ್ಟವಾಗಿ ಪಶ್ಚಿಮ ಬಂಗಾಳದಲ್ಲಿ 1967ರಿಂದ 1971ರವರೆಗೆ ಜ್ಯೋತಿಬಸುರವರು ಗೃಹಮಂತ್ರಿಯಾಗಿದ್ದಾಗ ಕಾರ್ಮಿಕ ವಿವಾದಗಳಲ್ಲಿ ಪೊಲೀಸ್ ಮಧ್ಯಪ್ರವೇಶ ಮಾಡಕೂಡದು ಎಂಬ ಸಂದೇಶವನ್ನು ಕೊಟ್ಟಿದ್ದರು. ಕಾರ್ಮಿಕರ ಹೋರಾಟಗಳನ್ನು ದಮನ ಮಾಡಲು ಪೊಲೀಸರನ್ನು ಬಳಸುವುದಿಲ್ಲ ಎಂಬ ನೀತಿಯನ್ನು ಸಿಪಿಐ(ಎಂ) ಪಕ್ಷ ಬಹಿರಂಗವಾಗಿ ಘೋಷಿಸಿತು.

ತುರ್ತು ಪರಿಸ್ಥಿತಿಯ ನಂತರದಲ್ಲಿ ಕಾರ್ಮಿಕವರ್ಗದ ಇತರ ಜನವಿಭಾಗದ ಹಲವಾರು ಹೋರಾಟಗಾಳು ನಡೆಯುತ್ತಿದ್ದವು. ಕರ್ನಾಟಕದಲ್ಲಿ, ಸಾರ್ವಜನಿಕ ಕೈಗಾರಿಕೆಗಳ ಕಾರ್ಮಿಕರ ಹೋರಾಟದಲ್ಲಿ, ನರಗುಂದ, ನವಲಗುಂದ, ನಿಪ್ಪಾಣಿ ಮತ್ತು ರಾಜ್ಯದ ಇತರ ಪ್ರದೇಶಗಳಲ್ಲಿ ರೈತರ ಹೋರಾಟಗಳ ವಿರುದ್ಧ, ಗುಂಡುರಾವ್ ಸರ್ಕಾರ ಪೊಲೀಸ್ ದಮನ ನೀತಿಯನ್ನು ಅನುಸರಿಸಿತು. ಇದರ ವಿರುದ್ಧ ಸಿಡಿದೆದ್ದ ಜನ ಚಳುವಳಿಯಿಂದಾಗಿ 1983ರಲ್ಲಿ ಅಧಿಕಾರಕ್ಕೆ ಬಂದ ರಾಮಕೃಷ್ಣ ಹೆಗ್ಗಡೆಯವರ ಸರ್ಕಾರ ಪೊಲೀಸ್‌ನ್ನು ಹದ್ದುಬಸ್ತಿನಲ್ಲಿಟ್ಟಿತು. ಹಿಂದಿನ ಸರ್ಕಾರ ಕಾರ್ಮಿಕರ ಮೇಲೆ ಹಾಕಿದ್ದ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿತು.

ಬೆಂಗಳೂರಿನಲ್ಲಿ ಕಾಂ.ಸೂರ್ಯನಾರಾಯಣರಾವ್‌ರವರು ನಡೆಸಿದ ಮೈಕೋ ಹೋರಾಟದಲ್ಲಿ ಎಫ್.ಎಂ.ಖಾನ್ ಗುಂಪನ್ನು ಕವಚವಾಗಿಟ್ಟುಕೊಂಡು ನಡೆಸಿದ ಪೊಲೀಸ್ ಮಧ್ಯಪ್ರವೇಶ ಮತ್ತು ದೌರ್ಜನ್ಯ

ಪುಟ 10 ಕ್ಕೆ



ಜನರೇ ಸ್ವಯಂ ಘೋಷಿತ ಪರವಾನಿಗೆಯಿಂದ ಕಾರ್ಯಕ್ರಮ ನಡೆಯುವಾಗ ಪೋಲೀಸರ ಪಾತ್ರ ಪ್ರೇಕ್ಷಕರ ಪಾತ್ರವಾಗಿ ಮಾತ್ರ ಉಳಿದಿತ್ತು. ಒಂದು ಕಡೆ ಉಮಾ ಭಾರತಿ ಮತ್ತು ಕಂಪನಿ ಜನರನ್ನು ಬದುಕಿನ ನಿಜ ಸಮಸ್ಯೆಗಳಿಂದ ದಾರಿ ತಪ್ಪಿಸಿ ಭಾವನಾತ್ಮಕವಾಗಿ ರೊಚ್ಚಿಗೆಬ್ಬಿಸಲು ಪ್ರತಿದಿನ ಬೆಂಗಳೂರು ಜನರಿಗೆ ಅನಗತ್ಯ ಕಿರುಕುಳ ಮಾಡುತ್ತಿರುವ **"ಬಿಜೆಪಿ ಬಂಧನ ಬಿಡುಗಡೆ"** ನಾಟಕ ನಡೆದಿರುವಾಗಲೇ ಕಾರ್ಮಿಕರ ರ್‍ಯಾಲಿ ಜನರ ಜೀವಂತ ಪ್ರಶ್ನೆಗಳನ್ನು ಎತ್ತಿ ತೋರಿಸಿತು.

ಈ ಬೃಹತ್ ರ್‍ಯಾಲಿಯ ಮಹತ್ವ ಏನು? ಈ ರ್‍ಯಾಲಿಯ ಸಂದರ್ಭ ಮತ್ತು ಕಾರ್ಮಿಕವರ್ಗದ ಚಳುವಳಿಯ ಭವಿಷ್ಯ ದೃಷ್ಟಿಯಿಂದ ಈ ರ್‍ಯಾಲಿಯ ಪ್ರಾಮುಖ್ಯತೆ ಏನೆಂಬುದನ್ನು ನಾವು ಬಿಪಿಎಲ್ ನಂಬಿಯಾರ್ ಮುಂತಾದ ಬಂಡವಾಳಗಾರರ ಸೇವೆ ಸಲ್ಲಿಸುವುದೇ ಸರ್ಕಾರದ ಏಕೈಕ ಕರ್ತವ್ಯ ಎಂಬ ರೀತಿಯಲ್ಲಿ ಆಡಳಿತ ನಡೆಸಿದ ಕಾರಣ ಎಲ್ಲಾ ರೀತಿಯಲ್ಲಿ ಸಂಕಷ್ಟಕ್ಕೊಳಗಾದ ಕಾರ್ಮಿಕರು, ರೈತರು, ಬಡಜನತೆ, ಕಾಂಗ್ರೇಸನ್ನು ಸೋಲಿಸುವ ಪರ್ಯಾಯವಾಗಿ ಜೆಡಿ(ಎಸ್) ಎಲ್ಲಿ ಬಲವಾಗಿತ್ತೋ ಅಲ್ಲೆಲ್ಲಾ ಬಿಜೆಪಿಗೆ ಬದಲಾಗಿ ಜೆಡಿ(ಎಸ್)ಗೆ ಬೆಂಬಲ ನೀಡಿ 3ನೇ ಸ್ಥಾನ ನೀಡಿದ್ದಾರೆ. ಕೋಮುವಾದಿ ಬಿಜೆಪಿಯನ್ನು ಅಧಿಕಾರಕ್ಕೆ ಬರದಂತೆ ತಡೆಯಲು ಕಾಂಗ್ರೇಸ್ - ಜೆಡಿ(ಎಸ) ಸಮ್ಮಿಶ್ರ ಸರ್ಕಾರ ಧರ್ಮಸಿಂಗ್ ಮುಖ್ಯಮಂತ್ರಿಯಾಗಿ, ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿ ಜಾತ್ಯಾತೀತ ಸರ್ಕಾರ ರಚನೆಯಾಗಿರುವುದು ಸ್ವಾಗತಾರ್ಹವೇ ಆಗಿದೆ.

ಕಾರ್ಮಿಕರ ವಿರೋಧಿ ನೀತಿ ಬದಲಾಗಬೇಕು
ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರ ಕಿರುಕುಳ ನಿಲ್ಲಲೇಬೇಕು

ಕಾರ್ಮಿಕ ರ್‍ಯಾಲಿಯ ರಣಕಹಳೆ

ವರದಿ ಎಸ್.ಪ್ರಸನ್ನಕುಮಾರ್

ಬೆಂಗಳೂರಲ್ಲಿ ಎಲ್ಲಿ ನೋಡಿದರೂ ಕೆಂಬಾವುಟಗಳ ರೆಪ ರೆಪ, ಮಹಿಳೆಯರು ಸಾವಿರ ಸಾವಿರ ಸಂಖ್ಯೆಯಲ್ಲಿ ಬೀದಿಗಿಳಿದು ಘೋಷಣೆ ಹಾಕುತ್ತಿರುವುದು ಖಾಕಿ ಅಂಗಿ ಹಾಕಿಕೊಂಡು ಯೂನಿಫಾರಂನಲ್ಲೇ ಕೆಂಪು ಧ್ವಜ, ಹಿಡಿದ ಪಂಚಾಯಿತಿ ನೌಕರರ ಬಾರಿ ಸಂಖ್ಯೆಯಲ್ಲಿ ಮುಗಿಲುಮುಟ್ಟುವ ಘೋಷಣೆಗಳು. 20 ಸಾವಿರಕೂ ಹೆಚ್ಚಿನ ಕಾರ್ಮಿಕರು ರಾಜ್ಯದ ಮೂಲೆ ಮೂಲೆಗಳಿಂದ ಬೆಂಗಳೂರಿಗೆ ಸಿಐಟಿಯುವಿನ ವಿಧಾನಸೌಧ ಚಲೋ ಕರೆಗೆ ಓಗೊಟ್ಟು ಬಂದಿದ್ದರು. ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಬದಲಾಗಬೇಕು, ಕಾರ್ಮಿಕರ ಹೋರಾಟಗಳ ನಡುವೆ ಪೋಲೀಸರ ಮಧ್ಯಪ್ರವೇಶ ನಿಲ್ಲಲೇಬೇಕು, ಅಂಗನವಾಡಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿದ ಸರ್ಕಾರದ ಆದೇಶ ರದ್ದಾಗಲಿ, ಗ್ರಾಮ ಪಂಚಾಯಿತಿ ನೌಕರರಿಗೆ ಕೆಲಸ ಪರಬಾರೆ ಮಾಡಬಾರದು. ಇಲಾಖೆಯ ಹುದ್ದೆಗಳ ಬಡ್ತಿ ಮಾಡಿ, ಬಿಸಿ ಊಟಕ್ಕೆ ಅಡುಗೆ ಕಾರ್ಮಿಕರಿಗೆ ಜೀವನಾವಶ್ಯಕ ಸಂಭಾವನೆ ಹಾಗೂ ಉದ್ಯೋಗ ರಕ್ಷಣೆ ಬೇಕು. ಹಮಾಲಿ ಕಾರ್ಮಿಕರಿಗೆ ಮತ್ತು ಎಲ್ಲಾ ಕಾರ್ಮಿಕರಿಗೆ ಪಿಂಚಣಿ ಜಾರಿಯಾಗಲಿ. ಕಾರ್ಮಿಕ ಕಾನೂನುಗಳ ಜಾರಿಗೊಳಿಸದ ಸರ್ಕಾರಕ್ಕೆ ದಿಕ್ಕಾರ. ಕೇಂದ್ರ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳಿಗೆ ಧಿಕ್ಕಾರ. ಇತ್ಯಾದಿ ಘೋಷಣೆಗಳು ಮುಗಿಲು ಮುಟ್ಟುವಂತೆ ಮೊಳಗಿದವು.

ರೈಲ್ವೆ ನಿಲ್ದಾಣದಿಂದ ಬೆಳಿಗ್ಗೆ 11-30 ಗಂಟೆಗೆ ಆರಂಭವಾದ ಮೆರವಣಿಗೆ ಬೆಂಗಳೂರಿನ ವಿಶಾಲ ರಸ್ತೆಗಳಲ್ಲಿ ತುಂಬಿ ತುಳುಕಿ ಜನಸಾಗರವೇ ಹರಿದು ಬಂದಿದೆ ಎಂಬಂತೆ ಹಳೇ ಕೇಂದ್ರ ಕಾರಾಗೃಹದ ಮೈದಾನದಲ್ಲಿ ಭಾರಿ ಬಹಿರಂಗ ಸಭೆಯಾಗಿ ನೆರೆದಿತ್ತು. ಮೆರವಣಿಗೆ ಮತ್ತು ಬಹಿರಂಗ ಸಭೆಗೆ ಸೂಕ್ತ ಸ್ಥಳದ ಪರವಾನಿಗೆ ನೀಡಲು ಹಲವು ಕಿರುಕುಳ ಮಾಡಿದ ಪೋಲೀಸರು ಇಡೀ ಶೇಷಾದ್ರಿ ರಸ್ತೆ ತುಂಬ ಜನಸಾಗರ ನಿಂತಾಗ ಆ ರಸ್ತೆಯಲ್ಲಿ ಗಮನಿಸಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಹೊಸ ಸಮ್ಮಿಶ್ರ ಸರ್ಕಾರ 3 ತಿಂಗಳ ಕೆಳಗೆ ಅಧಿಕಾರವಹಿಸಿಕೊಂಡಿದೆ. ಈ ಹಿಂದೆ ಅಧಿಕಾರದಲ್ಲಿದ್ದ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೇಸ್ ಸರ್ಕಾರ ನಾಲ್ಕುವರೆ ವರ್ಷಗಳ ಆಡಳಿತದ ಕಾಲದಲ್ಲಿ ಅನುಸರಿಸಿದ ಜನ ವಿರೋಧಿ, ಕಾರ್ಮಿಕ ವಿರೋಧಿ, ರೈತ ವಿರೋಧಿ ನೀತಿಗಳ ಕಾರಣದಿಂದಾಗಿ ಹಾಗೂ ಕೋಮುವಾದಿ ಶಕ್ತಿಗಳ ಆರ್ಭಟವನ್ನು ಹದ್ದುಬಸ್ತಿಗೆ ತರುವ ಬದಲಾಗಿ ಮೃದು ಧೋರಣೆ ಅನುಸರಿಸಿದ ಕಾರಣಗಳಿಂದಾಗಿಯೂ ಕರ್ನಾಟಕದ ಜನತೆ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೇಸ್‌ಗೆ ಬಹುಮತ ನೀಡಲಿಲ್ಲ. ಅಷ್ಟೇ ಅಲ್ಲದೇ ಕೋಮುವಾದಿ ಬಿಜೆಪಿ ರಾಜ್ಯದ ವಿಧಾನಸಭೆಯಲ್ಲಿ ದೊಡ್ಡ ಪಕ್ಷವಾಗಿ ಬಲವನ್ನು ಪಡೆದಿರುವ ಅತ್ಯಂತ ಆತಂಕಕಾರಿ ಅಪಾಯದ ಪರಿಸ್ಥಿತಿ ಉಂಟಾಗಿದೆ. ಕರ್ನಾಟಕವನ್ನು ದಕ್ಷಿಣ ಭಾರತದ ಹೆಬ್ಬಾಗಿಲಾಗಿ ಮಾಡಿಕೊಂಡು ರಾಜ್ಯದಲ್ಲಿ ಅಧಿಕಾರಕ್ಕೆ ಬಂದೇ ಬರುತ್ತೇವೆಂದು ಬೀಗುತ್ತಿದ್ದ ಬಿಜೆಪಿಗೆ ಸರ್ಕಾರ ರಚನೆಗೆ ಅಗತ್ಯವಾದಷ್ಟು ಸ್ಥಾನಗಳು ದೊರೆಯಲಿಲ್ಲವೆಂಬುದಷ್ಟೇ ಸಮಾಧಾನದ ವಿಚಾರ. ಆದರೇ ಹಿಂದಿನ ವಿಧಾನಸಭೆಯಲ್ಲಿ 42 ಸ್ಥಾನಗಳಿದ್ದ ಬಿಜೆಪಿಗೆ 79 ಸ್ಥಾನಗಳು ಗೆಲ್ಲಲು ಸಾಧ್ಯವಾಗಿರುವುದು ಗಂಭೀರ ಅಪಾಯದ ಮುನ್ಸೂಚನೆಯೇ ಆಗಿದೆ. ಕೋಮು ದ್ವೇಷದ ವಿಷ ಪ್ರಚಾರವನ್ನೇ ಪ್ರಧಾನ ರಾಜಕೀಯ ಅಂಶವಾಗಿರಿಸಿಕೊಂಡು ಕ್ರಿಯಾಶೀಲವಾಗಿರುವ ಬಿಜೆಪಿ ಅತ್ಯಂತ ಹೆಚ್ಚಿನ ಸ್ಥಾನಗಳನ್ನು ಪಡೆಯಲು ಮುಖ್ಯ ಕಾರಣವೇನೆಂದು ನೋಡಿದಾಗ ಹಿಂದಿನ ಎಸ್.ಎಂ.ಕೃಷ್ಣ ಸರ್ಕಾರ ಜನ ಹಿತಕ್ಕೆ ವಿರುದ್ಧವಾಗಿ ಕಾರ್ಮಿಕರ ಬದುಕೆ ಮಾರಕವಾಗಿ, ರೈತರ ಜೀವಕ್ಕೆ ಉರುಳಾಗಿರುವ ವಿಶ್ವ ಬ್ಯಾಂಕು ನಿರ್ದೇಶಿತ ನೀತಿಗಳನ್ನು ಕಾರ್ಯಗತಗೊಳಿಸುತ್ತಾ ನಾರಾಯಣಮೂರ್ತಿ, ಅಜೀಂ ಪ್ರೇಂಜಿ,



ನೀತಿ ಬದಲಾಗಿಲ್ಲ

ಆದರೇ ಹೊಸ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೆಲವು ಜನಪರ ಅಂಶಗಳನ್ನು ಅದರಲ್ಲೂ ರೈತರಿಗೆ, ಬಡವರಿಗೆ ರಿಯಾಯಿತಿಗಳನ್ನು ನೀಡುವ ಭರವಸೆಗಳನ್ನು ನೀಡಿದ್ದರೂ ಕಾರ್ಮಿಕರ ವಿಚಾರದಲ್ಲಿ,



ಕೈಗಾರಿಕೆಗಳಲ್ಲಿ ಕಾನೂನುಗಳ ಜಾರಿ ವಿಚಾರದಲ್ಲಾಗಲಿ, ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರ ಅನಗತ್ಯ ಮಧ್ಯಪ್ರವೇಶ, ಕಿರುಕುಳ ವಿಚಾರದಲ್ಲಿ ಏನೂ ಬದಲಾವಣೆಗಳು ಕಾಣುತ್ತಿಲ್ಲ. ಅಷ್ಟೇ ಅಲ್ಲ ಹಿಂದಿನ ಸರ್ಕಾರ ಕೈಗೊಂಡ ಹಲವು ಜನ ವಿರೋಧಿ ನೀತಿಗಳನ್ನು ಅತ್ಯಂತ ಕಠೋರವಾಗಿ ಜಾರಿಗೊಳಿಸಲು ಮುಂದಾಗಿದೆ. ಹಿಂದಿನ ಸರ್ಕಾರ ವಿಶ್ವಬ್ಯಾಂಕ್ ನಿರ್ದೇಶನದಲ್ಲಿ ರಾಜ್ಯದಲ್ಲಿ ಎರಡು ಮುಖ್ಯವರದಿಗಳನ್ನು ಅಂಗೀಕರಿಸಿದೆ. 1. ಆಡಳಿತ ಸುಧಾರಣಾ ವರದಿ, 2. ಗ್ರಾಮೀಣ ಅಭಿವೃದ್ಧಿ ಕಾರ್ಯಪಡೆ ವರದಿ.

ಈ ಎರಡು ವರದಿಗಳು ಸರ್ಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ಹೇಗೆ ತಪ್ಪಿಸಿಕೊಳ್ಳಬೇಕೆಂದು ಮತ್ತು ಕಾರ್ಮಿಕರನ್ನು ನೌಕರರ ಸಂಖ್ಯೆಯನ್ನು ಕಡಿತಗೊಳಿಸಿ ನಿರುದ್ಯೋಗ ತೀವ್ರಗೊಳಿಸುವ, ಆಡಳಿತದಲ್ಲಿ ಖಾಸಗೀಕರಣವನ್ನು ತೀವ್ರಗೊಳಿಸುವ ಕಾರ್ಮಿಕ ಇಲಾಖೆಯನ್ನು ಮತ್ತಷ್ಟು ಬಲಹೀನಗೊಳಿಸುವ ಹಲವು ಕ್ರಮಗಳು ಒಳಗೊಂಡಿವೆ. ಹಿಂದಿನ ಸರ್ಕಾರ "ಬೇಲೂರು ಘೋಷಣೆ" ಅಂಗೀಕರಿಸಿ ಜಾರಿಗೊಳಿಸಲು ಸಿದ್ಧವಾಗಿತ್ತು. ಈ ಹಿನ್ನೆಲೆಯಲ್ಲೇ "ಬೇಲೂರು ಘೋಷಣೆ"ಯ ನಿರ್ಣಯಗಳನ್ನು ಈಗ ಹೊಸ ಸರ್ಕಾರ ಜಾರಿಗೊಳಿಸಿದೆ. ಅದರಂತೆ

1. ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ವಹಿಸಲಾಗಿದ
2. ಗ್ರಾಮ ಪಂಚಾಯಿತಿಗಳ ತೆರಿಗೆ ವಸ ಜವಾಬ್ದಾರಿಯನ್ನು ಸ್ತ್ರೀ ಶಕ್ತಿ ಸ್ವಸಹಾ ಗುಂಪುಗಳಿಗೆ ವಹಿಸಲಾಗಿ ಪ್ರಾಯೋಗಿಕವಾಗಿ ಚಿಕ್ಕಮಗಳೂರು ಜಿಲ್ಲೆ ಕಾರ್ಯಗತಗೊಳಿಸಲಾಗಿದೆ.
3. ಅಕ್ಷರ ದಾಸೋಹ ಯೋಜನೆಯ ಪ್ರಾ ಶಾಲೆಗಳ ವಿದ್ಯಾರ್ಥಿಗಳ ಬಿಸಿ ಊಟ ಕೆಲಸವನ್ನು ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗ ವಹಿಸಲು ನಿರ್ಣಯಿಸ ಲಾಗಿದೆ ವ ಸರ್ಕಾರದ ಒಂಬತ್ತು ಇಲಾಖೆಗಳನ್ನು ಗ್ರಾ ಪಂಚಾಯಿತಿಗಳಿಗೆ ವಹಿಸ ನಿರ್ಣಯಿಸಲಾಗಿದೆ.

ಈ ಎಲ್ಲಾ ಕ್ರಮಗಳನ್ನು ವಿಕೇಂದ್ರೀಕರ ಹೆಸರಲ್ಲಿ ಮಾಡಲಾಗುತ್ತಿದೆ. ಸರ್ಕಾರ ಹೇಳ ವಿಕೇಂದ್ರೀಕರಣವು ಪ್ರಜಾಪ್ರಭು ವಿಕೇಂದ್ರಿಕರಣವಲ್ಲ, ಜನಪರ ವಿಕೇಂದ್ರೀಕ ವಲ್ಲ, ಬದಲಾಗಿ ಸರ್ಕಾರ ತನ್ನ ಸಾಮಾ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡ ವಿಕೇಂದ್ರಿಕರಣದ ಹೆಸರಲ್ಲಿ ವಿಶ್ವಬ್ಯಾಂ ನಿರ್ದೇಶನಗಳ ಜಾರಿಗೊಳಿಸುವುದಾಗಿ ವಿಶ್ವಬ್ಯಾಂಕ್‌ನ 2002ರ ವರದಿಯ "ಮಾರುಕಟ್ಟೆಗಾಗಿ ಸಂಸ್ಥೆಗಳ ನಿರ್ಮಾಣ" ಎ ವಿಭಾಗದಲ್ಲಿ ನೀಡಿರುವ ನಿರ್ದೇಶನಗಳನ್ನು ಚಾ ತಪ್ಪದೇ ಜಾರಿಗೊಳಿಸುತ್ತಿರುವ ಸಾಮ್ರಾಜ್ಯಶಾ ವಿಕೇಂದ್ರೀಕರಣವಾಗಿದೆ. ಆಡಳಿತ ಸುಧಾರ ಆಯೋಗದ ಶಿಫಾರಸ್ಸಿನಂತೆ ಸರ್ಕಾರ ಸೇವೆಗಳನ್ನು ಅಂದರೆ ಡ್ರೈವರ್, ಪೀವ ವಾಚ್‌ಮನ್, ನೈರ್ಮಲ್ಯೀಕರಣ, ತೋಟ ನಿರ್ವಹಣೆ, ಮುಂತಾದ 'ಗ್ರೂಪ್ ಡಿ' ಕೆಲಸಗಳ ಖಾಸಗೀಕರಿಸಿ ಕಾಂಟ್ರಾಕ್ಟ್ ಪದ್ಧತಿ ಅಳವಡಿಸುವ ಹಾಗೂ ಎಲ್ಲಾ ಇಲಾಖೆಗಳಲ್ಲಿ ನೌಕರರ ಕಡಿತಗೊಳಿಸುವ ಹಿಂದಿನ ಸರ್ಕಾರದ ದಾರಿಯ ಈ ಸರ್ಕಾರವೂ ಮುಂದುವರೆಸಿದೆ. ಸ ಕಾರ್ಖಾನೆಗಳನ್ನು ಅದರಲ್ಲೂ ಸಹಕಾರಿ ಸ ಕಾರ್ಖಾನೆಗಳನ್ನು ಮುಚ್ಚಿಬಿಡಲು ಈ ಸರ್ಕಾರ ಮುಂದಾಗಿದೆ. ಸಹಕಾರಿ ಸಂಘಗಳ ಕಾಯ್ದೆ ತಿದ್ದುಪಡಿ ಮಾಡದೇ ಲಕ್ಷಾಂತರ ಸಹಕಾರಿ ರಂ ಕಾರ್ಮಿಕರು ತ್ರಿಶಂಕು ಸ್ಥಿತಿ ಅನುಭವಿಸುವಂತಾಗಿ ಅಸಂಘಟಿತ ಕಾರ್ಮಿಕರಿಗೆ ಸಂಬಂಧಿಸಿದ ಹಿಂದಿನ ಸರ್ಕಾರ ಮಂಡಿಸಿದ್ದ ಮಸೂ ಕಾಲಮಿತಿಯಿಂದಾಗಿ ಅಸ್ತಿತ್ವ ಕಳೆದುಕೊಂಡ ಹಿಂದಿನ ಸರ್ಕಾರ ಅಸಂಘಟಿತ ಕಾರ್ಮಿ ಮಸೂದೆಯಲ್ಲಿ ಸಿಐಟಿಯು ನೀಡ ತಿದ್ದುಪಡಿಗಳನ್ನು ಒಳಪಡಿಸಲೇ ಇಲ್ಲ. ಈ ಹೊಸ ಸರ್ಕಾರವೂ ತರಬಯಸಿರುವ ಅಸಂಘ ಕಾರ್ಮಿಕರ ಮಸೂದೆಯಲ್ಲಿ 65 ಉದ್ಯೋಗಗಳ ಸುಮಾರು 40 ಉದ್ಯೋಗಗಳಿಗೆ ಕಡಿತಗೊಳಿಸು ಮುಂದಾಗಿದ್ದಾರೆ. ಅಂದರೇ ಬಹು ಸಂಖ್ಯಾ ಅಸಂಘಟಿತ ಕಾರ್ಮಿಕರಿಗೆ ಈ ಕಾನೂ ಪ್ರಯೋಜನ ಸಿಗುವುದೇ ಇಲ್ಲ. ಅಷ್ಟೇ ಕಾರ್ಮಿಕ ಕಾನೂನುಗಳನ್ನು ಅಂದರೇ, ಕ ವೇತನ ಕಾನೂನು, ಫ್ಯಾಕ್ಟರಿಗಳ ಕಾನೂ ಕೈಗಾರಿಕಾ ವಿವಾದಗಳ ಕಾನೂನು, ವೇತನ ಪಾ ಕಾನೂನು, ಸ್ಟ್ಯಾಂಡಿಂಗ್ ಆರ್ಡರ್ಸ್ ಕಾನೂ ಟ್ರೇಡ್ ಯೂನಿಯನ್ ಕಾನೂನುಗಳ ಮಾಲೀಕರು ಯಥೇಚ್ಛವಾಗಿ ಉಲ್ಲಂಘಿಸಲು ವ

ಅವಕಾಶಗಳನ್ನು ನೀಡಲಾಗಿದೆ. ಕಾನೂನುಗಳ ಉಲ್ಲಂಘನೆಗಳನ್ನು ಸಂಘಟಿತ ಕಾರ್ಮಿಕರು ವಿರೋಧಿಸಿ ಹೋರಾಟಗಳನ್ನು ಮಾಡಲು ಮುಂದಾದಾಗ ಹೊಸ ಸರ್ಕಾರದ ಆಡಳಿತದ ಈ 3 ತಿಂಗಳ ಅವಧಿಯಲ್ಲಿ ಪೋಲೀಸರು ಮಾಲೀಕರ ಏಜೆಂಟರಂತೆ, ಸಲಹೆಗಾರರಂತೆ, ಅನಗತ್ಯವಾಗಿ ತಲೆ ಹಾಕಿ ಮಧ್ಯಪ್ರವೇಶಿಸಿ ಕಿರುಕುಳ, ಹಿಂಸೆ ದೌರ್ಜನ್ಯವನ್ನು ನಡೆಸಲಾಗುತ್ತಿದೆ. ಇತ್ತೀಚೆಗೆ ಮೈಸೂರು ಜಿಲ್ಲೆಯ ನಂಜನಗೂಡು ಪ್ರದೇಶದ "ಈಸ್ಟರ್ನ್ ಜಿಂಗಿಂಗ್" ಕಾರ್ಖಾನೆ ಮಾಲೀಕರು ಕಾನೂನು ಬಾಹಿರ ಲಾಕೌಟ್ ಮಾಡಿರುವುದನ್ನು ಪ್ರಶ್ನಿಸಿದ ಕಾರಣ ಕಾರ್ಮಿಕ ಮುಖಂಡರನ್ನು ಬಂಧಿಸಿ ಸಿಐಟಿಯು ಮುಖಂಡರು ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯ ಮೇಲೂ ದೌರ್ಜನ್ಯ ನಡೆಸಲಾಗಿದೆ. ಬೆಂಗಳೂರಿನಲ್ಲಿ "ಮೆಟಲ್ ಕ್ಲೋಶರ್ಸ್" ಕಾರ್ಖಾನೆ ಕಾರ್ಮಿಕ ಹೋರಾಟದ ಮೇಲೆ ಪೋಲೀಸ್ ಬಲಪ್ರಯೋಗ ಮತ್ತು ಬೆಂಗಳೂರಲ್ಲಿ ಕಾರ್ಮಿಕರು ಪ್ರಜಾಪ್ರಭುತ್ವ ಹಕ್ಕಾದ ಪ್ರತಿಭಟನೆ ನಡೆಸುವುದು ಮಹಾಕಷ್ಟದ ಪರಿಸ್ಥಿತಿ ಮುಂದುವರೆದಿದೆ. ಈ ಎಲ್ಲಾ ಹಿನ್ನೆಲೆಯನ್ನು ನೋಡಿದಾಗ ಸರ್ಕಾರ ಬದಲಾಗಿದೆ, ಆದರೇ ಹೊಸ ಸರ್ಕಾರದ ಕಾರ್ಮಿಕ ನೀತಿ, ಪೋಲೀಸ್ ನೀತಿ ಬದಲಾಗಲಿಲ್ಲ.

ಚಳುವಳಿಯ ದಾರಿ

ರಾಜ್ಯ ಸರ್ಕಾರದ ನೀತಿ ಬದಲಾಗದೇ ಸರ್ಕಾರ ಮಾತ್ರ ಬದಲಾದರೇ ಜನರಿಗೆ ಕಾರ್ಮಿಕರಿಗೆ ಆಗುವ ಪ್ರಯೋಜನವಾದರೂ ಏನು? ಈ ಮೇಲೆ ಪ್ರಸ್ತಾಪಿಸಿದ ವಿಚಾರಗಳಷ್ಟೇ ಅಲ್ಲದೇ ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ ಮತ್ತು ವಾರದ 6 ದಿನಗಳ ಕೆಲಸಕೊಡುವ ಬಗ್ಗೆ, ಕಾರ್ಖಾನೆಗಳ, ಕ್ಯಾಂಟೀನ್‌ಗಳ ಮತ್ತು ನಗರಸಭೆಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿ ಅಡಿಯಲ್ಲಿ ಲಂಗುಲಗಾಮಿಲ್ಲದೇ ಗುತ್ತಿಗೆ ಕಾರ್ಮಿಕರನ್ನು ಶೋಷಣೆ ಮಾಡುತ್ತಿರುವ ಬಗ್ಗೆ, ಯಾರಿಗೂ ಹೇಳದೇ ಕೇಳದೇ ಕೆಲ ಮಾಲೀಕರು ಕಾರ್ಖಾನೆಗಳನ್ನು ಕಾನೂನುಬಾಹಿರವಾಗಿ ಮುಚ್ಚಿ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತಿದ್ದು ಕಾರ್ಮಿಕರಿಗೆ ಬರಬೇಕಾದ ವೇತನ, ಗ್ರಾಚ್ಯುಟಿ ಇತ್ಯಾದಿ ಬಾಕಿ ಹಣವನ್ನು ವಸೂಲಿ ಮಾಡಿಕೊಡಲು ತ್ವರಿತವಾಗಿ ಕ್ರಮವಹಿಸಲು ಕೈಗಾರಿಕಾ ವಿವಾದಗಳ ಕಾನೂನು ಕಲಂ 33ಸಿ ಯನ್ನು ತಿದ್ದುಪಡಿ ಮಾಡುವ ಪ್ರಯತ್ನ ಅಥವಾ ಯೋಜನೆಯೂ ಇಲ್ಲ. ಎಪಿಎಂಸಿಗಳಲ್ಲಿ ಹಮಾಲಿ ಕಾರ್ಮಿಕರಿಗೆ ಪ್ರಾತಿನಿಧ್ಯ ನೀಡುವ ಬಗ್ಗೆ ಮಾಡಿದ ಒತ್ತಾಯಕ್ಕೆ ಸ್ಪಂದನೆ ದೊರೆತಿಲ್ಲ. ಸುಶಿಕ್ಷಿತ ಮೆಡಿಕಲ್ ರೆಪ್ರೆಸೆಂಟೆಟೀವ್‌ಗಳಿಗೂ ಸೇಲ್ಸ್ ಪ್ರೋಮೋಷನ್ ಎಂಪ್ಲಾಯೀಸ್ ಕಾನೂನು ಜಾರಿಯಾಗುತ್ತಿಲ್ಲ. ದಿನಗೂಲಿ ಕಾರ್ಮಿಕರಿಗೆ ಭದ್ರತೆ ನೀಡುವ ಯೋಜನೆಯೂ ಇಲ್ಲ. ಕಟ್ಟಡ ಕಾರ್ಮಿಕರಿಗೆ ನಿಯಮಗಳನ್ನು ರೂಪಿಸುವ ಪ್ರಯತ್ನವೂ ಇಲ್ಲ.

ಸಭೆಯ ಅಧ್ಯಕ್ಷತೆಯನ್ನು **ಕಾಂ. ಇ.ಕೆ.ಎನ್.ರಾಜನ್, ಬೆಂಗಳೂರು ಜಿಲ್ಲಾ ಸಿಐಟಿಯು ಅಧ್ಯಕ್ಷರು ಹಾಗೂ ರಾಜ್ಯ ಪದಾಧಿಕಾರಿಗಳು** ವಹಿಸಿದ್ದರು. ಸಭೆಯ ಆರಂಭದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ರಾಜ್ಯ ಸರ್ಕಾರದ ನೀತಿಗಳ ಬದಲಾವಣೆ ಅಗತ್ಯ ಒತ್ತಿ ಹೇಳಿದರು. ಸಿಪಿಐ(ಎಂ) ಶಾಸಕರಾದ .ಜಿ.ವಿ.ಶ್ರೀರಾಮರೆಡ್ಡಿ ಅವರು ರಾಜ್ಯ ಸರ್ಕಾರವು ಕಾರ್ಮಿಕರ ಪ್ರಶ್ನೆಗಳನ್ನು ವಿಧಾನಸಭೆಯಲ್ಲಿ ಧ್ವನಿ ಎತ್ತಿದ್ದೂ ಸರ್ಕಾರ ನಿರ್ದಿಷ್ಟ ಕ್ರಮಗಳನ್ನು ವಹಿಸದಿರುವುದು ಮುಖ್ಯವಾಗಿ ಸರ್ಕಾರದ ರಾಜಕೀಯ ಇಚ್ಛಾಶಕ್ತಿಯ ಕೊರತೆ ಬಯಲು ಮಾಡಿದರು. ಕೋಮುವಾದಿ ಶಕ್ತಿಗಳು ಉಮಾಭಾರತಿ ಪ್ರಕರಣವನ್ನೂ, ರಾಷ್ಟ್ರಧ್ವಜ ದುರುಪಯೋಗ ಮಾಡಿ ಜನರನ್ನು ದಾರಿತಪ್ಪಿಸುತ್ತಿರುವುದನ್ನು ಖಂಡಿಸಿದರು. ಕಾರ್ಮಿಕರು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಮೂಲಕ ಕಾರ್ಮಿಕ ವರ್ಗದ ಪ್ರಾತಿನಿಧ್ಯವನ್ನು ಶಾಸನಸಭೆಗಳಲ್ಲಿ ಹೆಚ್ಚಿಸುವ ಮೂಲಕ ಸರ್ಕಾರದ ನೀತಿಗಳ ಬದಲಾವಣೆ ದಿಶೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲು ಕರೆ ನೀಡಿದ್ದರು. ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ.ಮಾರುತಿ ಮಾನ್ಪಡೆ ಅವರು ರಾಜ್ಯಸರ್ಕಾರವು ಜನಪರ ನೀತಿಗಳನ್ನು ಅಳವಡಿಸಿಕೊಳ್ಳದಿರುವ ಬಗ್ಗೆ ಟೀಕೆ ಮಾಡಿದರು ಹಾಗೂ ಪಂಚಾಯಿತಿ ನೌಕರರ ಬವಣೆ ಹಾಗೂ ರಾಜ್ಯದ ವಿವಿಧ ಕಾರ್ಮಿಕರ ಸಂಕಷ್ಟಗಳನ್ನು ವಿವರಿಸಿ ಸರ್ಕಾರ ಕ್ರಮವಹಿಸಲು ಒತ್ತಾಯಿಸಿದರು.

ಹಿಂದಿನ ಸರ್ಕಾರವನ್ನು ಸೋಲಿಸುವಲ್ಲಿ ಮತ್ತು ಹೊಸ ಸರ್ಕಾರದ ಅಸ್ಥಿತ್ವಕ್ಕೆ ಬರುವ ದಿಶೆಯಲ್ಲಿ ಇಲ್ಲಿ ನೆರೆದ ಪ್ರತಿ ಒಬ್ಬ ಶ್ರಮ ಒಳಗೊಂಡಿರುವ ಬಗ್ಗೆ ಮಂತ್ರಿಗಳಿಗೆ ನೆನಪಿಸಿಕೊಟ್ಟರು. ಸಿಐಟಿಯು ಪರವಾಗಿ ಮನವಿ ಪತ್ರವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಸಲ್ಲಿಸಿದರು. ಮನವಿ ಪತ್ರಕ್ಕೆ ಪ್ರತಿಕ್ರಿಯಿಸಿದ ಮಂತ್ರಿ ಎಂ.ಪಿ.ಪ್ರಕಾಶ್ ಅವರು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮವಹಿಸುವುದಾಗಿ ಹಾಗೂ ಒಂದು ವಾರದಲ್ಲಿ ಸಿಐಟಿಯು ಮುಖಂಡರೊಂದಿಗೆ ಸಭೆ ಕರೆಯುವುದಾಗಿ ಭರವಸೆ ನೀಡಿದರು. ಸಿಐಟಿಯು ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ವಂದನೆಗಳನ್ನು ಸಲ್ಲಿಸಿದರು. ವೇದಿಕೆಯನ್ನು ಸಿಐಟಿಯು ರಾಜ್ಯ ಪದಾಧಿಕಾರಿಗಳಾದ ಕವಿ.ಸುಕುಮಾರ್, ಮೀನಾಕ್ಷಿ ಸುಂದರಂ, ತಿಲಕ್ ಜಟ್ಟಿಗೌಡ, ಎಂ.ಬಿ.ನಾಡಗೌಡ, ಟಿ.ಲೀಲಾವತಿ ಹಾಗೂ ಕೃಷಿ ಕೂಲಿಕಾರರ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಪ್ರಾಂತ ರೈತ ಸಂಘದ ಬಿಜಾಪುರ ಮುಖಂಡರಾದ ಬೀಮಸಿ ಕಲಾದಗಿ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ, ಮುಖ್ಯ ಮಂತ್ರಿಗಳ ಪರವಾಗಿ ಮನವಿ ಸ್ವೀಕರಿಸಲು ಬಹಿರಂಗ ಸಭೆ ಸ್ಥಳಕ್ಕೆ ಬಂದ ಕಂದಾಯ ಮಂತ್ರಿ ಎಂ.ಪಿ.ಪ್ರಕಾಶ್ ಅವರ ಉಪಸ್ಥಿತಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು ಸರ್ಕಾರವು ಜನಾದೇಶದ ಆಶೋತ್ತರಗಳನ್ನು ಕಡೆಗಣಿಸದೆ ಹಾಗೂ ಕಾರ್ಮಿಕರ ಜೀವನಕ್ಕೆ ಅನುಕೂಲವಾಗುವ ನೀತಿಗಳನ್ನು ಜಾರಿಗೊಳಿಸಲು ಒತ್ತಾಯಿಸಿದರು. ಸಭೆಯಲ್ಲಿ ವಿವರವಾದ ಮನವಿ ಪತ್ರವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಅಂಗನವಾಡಿ ನೌಕರರ ಸಂಘ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಓದಿದರು.

ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿಯೂ ಬೃಹತ್ ಮೆರವಣಿಗೆ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್‌ನ ದಕ್ಷಿಣಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ದುಡಿಯುವ ಕಾರ್ಮಿಕರ ಬೃಹತ್ ಸೆ. 2 ರಂದು ಜಿಲ್ಲಾಧಿಕರಿಗಳ ಕಛೇರಿ ಎದುರು ನಡೆಯಿತು.

ಬೆಂಗಳೂರಿನಲ್ಲಿ ನಡೆಯುವ ಕಾರ್ಮಿಕರ ಬೃಹತ್ ರ್‍ಯಾಲಿಯನ್ನು ಬೆಂಬಲಿಸಿ ಈ ಪ್ರದರ್ಶನ ನಡೆಯಿತು.

ಸಿಐಟಿಯು ಮೈದಾನ ಕಛೇರಿಯಿಂದ



ಹೊರಟ ಕಾರ್ಮಿಕರ ಬೃಹತ್ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿ ತನಕ ಬೇಡಿಕೆಗಳ ಘೋಷಣೆ ಮೂಲಕ ಸಾಗಿತು.

ಪ್ರದರ್ಶನಗಾರರನ್ನು ಉದ್ದೇಶಿಸಿ ಸಿಐಟಿಯು ಕರ್ನಾಟಕ ರಾಜ್ಯ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡುತ್ತಾ

'ಕರ್ನಾಟಕ ರಾಜ್ಯದ ಕಾಂಗ್ರೆಸ್ ಹಾಗೂ ಜನತಾದಳ ಸರಕಾರ ಕಾರ್ಮಿಕ ವರ್ಗದ ಬೇಡಿಕೆಗಳನ್ನು ಸ್ಪಂದಿಸಿ ಜಾರಿಗೊಳಿಸಬೇಕು. ಬೀಡಿ ಕಾರ್ಮಿಕರು ವಾರದಲ್ಲಿ ಬರೀ 2 ದಿನಗಳ ಕೆಲಸದಲ್ಲಿ ಇದ್ದಾರೆ. ಕಳೆದ 2 ವರ್ಷಗಳ ತುಟ್ಟಿಭತ್ತೆ ನೀಡಿಲ್ಲ. ಅಂಗನವಾಡಿ ನೌಕರರ ಮೇಲೆ ಗ್ರಾಮ ಪಂಚಾಯತ್ ಸವಾರಿ ಮಾಡುವ ಅವಕಾಶವನ್ನು ಕಲ್ಪಿಸಿ ಕೊಟ್ಟಿರುವುದು ಸರಿಯಲ್ಲ. ಅವರ ಹಿಂದೆ ಇದ್ದಂತೆ ದುಡಿಯಲು ಅವಕಾಶ ಕಲ್ಪಿಸಬೇಕೆಂದು ಸರಕಾರವನ್ನು ಒತ್ತಾಯಿಸಿದರು. ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರಿಗೆ 1996ರ ಕೇಂದ್ರ ಕಾನೂನಿನ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಕಾನೂನು ಜಾರಿಗೊಳಿಸಿ ಅವರಿಗೆ ಸವಲತ್ತು ನೀಡಬೇಕೆಂದ ಅವರು ಕೇಂದ್ರದ ಯುಪಿಎ ಸರಕಾರ ನೌಕರರ ಭವಿಷ್ಯನಿಧಿ ಠೇವಣಿ ಮೊತ್ತಕ್ಕೆ ಶೇಕಡ 12 ಬಡ್ಡಿ ದರ ನಿಗದಿ ಪಡಿಸಬೇಕೆಂದು ಅವರು ಒತ್ತಾಯಪಡಿಸಿದರು.

ಭರವಸೆ ಜಾರಿಗೆ ಕಾರ್ಯಪ್ರವೃತ್ತರಾಗಬೇಕು

'ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವನ್ನು ದೇಶದ ಕಾರ್ಮಿಕ ವರ್ಗ ತಿರಸ್ಕರಿಸಿದೆ. ಈಗ ಇರುವ ಯುಪಿಎ ಸರಕಾರ ತನ್ನ ಕನಿಷ್ಠ ಕಾರ್ಯಕ್ರಮದಲ್ಲಿ ನೀಡಿರುವ ಭರವಸೆಗಳನ್ನು ಜಾರಿಗೊಳಿಸಲು ಕಾರ್ಯಪ್ರವೃತ್ತರಾಗಬೇಕೆಂದು ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ.ಆರ್.ಶ್ರೀಯಾನ್‌ರವರು ಹೇಳಿದರು. ನಗರ ಮತ್ತು ಗ್ರಾಮಾಂತರ ಪ್ರದೇಶದ ನಿರುದ್ಯೋಗಿಗಳಿಗೆ ವರ್ಷದಲ್ಲಿ 100 ದಿನಗಳ ಕೆಲಸ ನೀಡಲು ಕಾರ್ಯಕ್ರಮ ಹಾಕಬೇಕು. ಅಸಂಘಟಿತ ಕಾರ್ಮಿಕರಿಗೆ ರಕ್ಷಣೆ ನೀಡುವ ಸಮಗ್ರ ರಾಷ್ಟ್ರೀಯ ಕಾನೂನು ಆಗಬೇಕು. ದುಡಿಯುವ ಮಹಿಳೆಯರ ಮೇಲೆ ಆಗುವ ದೌರ್ಜನ್ಯ ಅಸಮಾನತ ಲೈಂಗಿಕ ಕಿರುಕುಳ ನಿಲ್ಲಲು ಸುಪ್ರೀಂ ಕೋರ್ಟು ತೀರ್ಪಿನಂತೆ ಕಾನೂನು ಮಾಡಬೇಕು, ಕೃಷಿ ಕೂಲಿಗಾರರಿಗೆ ರಾಷ್ಟ್ರೀಯ ಸಮಗ್ರ ಕಾನೂನು ಆಗಬೇಕು. ವಿದ್ಯುತ್ ಕಾಯ್ದೆ 2003 ಪುನರ್ ವಿಮರ್ಶೆ ಮಾಡಬೇಕೆಂದು ಆಗ್ರಹ ಪಡಿಸಿದರು.

'ಕರ್ನಾಟಕ ರಾಜ್ಯ ಸರಕಾರದ ಅಕ್ಷರ ದಾಸೋಹ ಬಿಸಿಯೂಟ ಕಾರ್ಯಕ್ರಮ ಉತ್ತಮ ಯೋಜನೆ. ಅದರ ಅಡುಗೆ ಕಾರ್ಮಿಕರಿಗೆ ನಾಚಿಕೆಪಡುವ ಸಂಬಳ ನೀಡುತ್ತಿದೆ. ಕೂಡಲೇ ವೇತನ ಜಾಸ್ತಿಗೊಳಿಸಬೇಕು. ಅವರಿಗೆ ಕನಿಷ್ಠ ವೇತನ ಗೊತ್ತುಪಡಿಸಬೇಕೆಂದು ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಹೇಳಿದರು.

ಗ್ರಾಮ ಪಂಚಾಯತ್ ನೌಕರರಿಗೆ ಅನುದಾನದಲ್ಲಿ ವೇತನ ನೀಡಬೇಕು ಮತ್ತು ಅವರಿಗೆ ಭಡ್ತಿ ನೀಡಬೇಕಾದ ಕಾರ್ಯದರ್ಶಿ ಹುದ್ದೆಗಳಿಗೆ ಕೂಡಲೇ ಭಡ್ತಿ ನೀಡಬೇಕೆಂದು ಅವರು ಒತ್ತಾಯಿಸಿ ಮಾತನಾಡಿದರು.

ಪ್ರದರ್ಶನದ ನೇತೃತ್ವವನ್ನು ಯು.ಬಿ.ಲೋಕಯ ಸುಕುಮಾರ್, ಕೆ.ಪಿ.ಸಾಲಿಯಾನ್, ಮಂಜಪ್ಪ.ಕೆ.ರಮಣಿ, ಬಾಬು ದೇವಾಡಿಗ, ಕೆ.ಸದಾಶಿವದಾಸ್, ಗಂಗಯ್ಯ ಅಮೀನ್, ಎಲ್.ಟಿ.ಸುವರ್ಣ, ಎಲ್.ಮಂಜುನಾಥ್, ಸುಕನ್ಯ, ಗೀತಾ, ಜಯಂತ್.ಬಿ.ಶೆಟ್ಟಿ, ಅಬ್ರಹಂ ಕರ್ಕಡ ರವರು ವಹಿಸಿದ್ದರು.

ಸಿಐಟಿಯು ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಬಿ.ಎಂ.ಭಟ್ ಸ್ವಾಗತಿಸಿ, ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿಯವರು ಧನ್ಯವಾದ ನೀಡಿದರು.


ಉಡುಪಿ ಜಿಲ್ಲೆಯಲ್ಲಿ :

ಇದರಂತೆ ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರ ಮೆರವಣಿಗೆ ಪ್ರತಿಭಟನಾ ಸಭೆ ಪಡೆದ ವರದಿಯಿದೆ. ಈ ಸಭೆಯಲ್ಲಿ ದುಡಿಯುವ ವರ್ಗದ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಮುಖಂಡರಾದ ಕೆ.ಶರಣ್, ವಿ.ನರಸಿಂಹ, ಆಚಾರ್ ಮುಂತಾದವರು ಮಾತನಾಡಿದರು.

ಅಂಗನವಾಡಿಗಳನ್ನು ಗ್ರಾಮ ಪಂಚಾಯತಿಗೆ ವಹಿಸುವುದನ್ನು ವಿರೋಧಿಸಿ ಮತ್ತು ಸೇವಾ ನಿಯಮಾವಳಿಗಳನ್ನು ರೂಪಿಸಲು ಆಗ್ರಹಿಸಿ ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನ ಬನ್ನಪ್ಪ ಪಾರ್ಕಿನಲ್ಲಿ ಹಗಲು ರಾತ್ರಿ ಅನಿರ್ದಿಷ್ಟ ಕಾಲ ಧರಣಿ ನಡೆಸುತ್ತಿದ್ದಾರೆ.



ರೈತರ ದುರಂತಮಯ ಬದುಕಿನತ್ತ ಕಣ್ಮುಚ್ಚಿಕೊಂಡ ಕಾಂಗ್ರೆಸ್ಸಿಗರು




ಜಿ.ಎಸ್.ಮಣಿ

ಕಾಂಗ್ರೆಸ್‌ನ ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಹೋಗಿದ್ದಾರೆ. ಅವರ ಉದ್ದೇಶ ರೈತ ಸಮುದಾಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಸಿಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಹಾಗೊಮ್ಮೆ ಸಾಲ ಸಿಗುವಲ್ಲಿ ತೊಂದರೆಯಾಗುತ್ತಿದ್ದರೆ ಬ್ಯಾಂಕಿನವರ ಮೇಲೆ ಬೊಬ್ಬೆ ಹಾಕುವುದು, ಈ ಎರಡನ್ನೂ ಅವರು ಮಾಡಿದ್ದಾರೆ. ಬ್ಯಾಂಕಿನವರಿಗೆ ಹೊಗಳಿಕೆ/ ತೆಗಳಿಕೆ ಎರಡೂ ಬಂದಿರುತ್ತೆ. ಅಲ್ಲದೆ ಅಬ್ಬರವನ್ನು ಮಾಡಿ ಸುದ್ದಿ ಮಾಧ್ಯಮಗಳಲ್ಲಿ ಅವರು ಮಿಂಚಿದ್ದಾರೆ. ಸಾಲದ ಮೇಲಿನ ಬಡ್ಡಿಯನ್ನು ಕಟ್ಟದಿದ್ದರೆ ನಾನು ನಿಮ್ಮ ಮೇಲೆ ತೆರಿಗೆ ಹಾಕಬೇಕಾಗುತ್ತದೆ' ಎಂದು ಬುದ್ಧಿಜೀವಿಯ ಪೋಸನ್ನು ಅವರು ನೀಡಿದ್ದಾರೆ. ಇವೆಲ್ಲ ಕ್ರಮಗಳು ತಪ್ಪೆಂದೇನಲ್ಲ. ಆದರೆ ಇದು ರೈತರಿಗೆ ಸರ್ಕಾರ ಮಾಡಬಹುದಾದ ಕನಿಷ್ಠ ಕೆಲಸ ಅಷ್ಟೆ. ಈ ಕೆಲಸವನ್ನು ಯಾವಾತ ಮಂತ್ರಿಯಾದರೂ ಮಾಡಬಹುದು. ಯಾಕೆಂದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಸರ್ಕಾರದ ಮಾತನ್ನು ಕೇಳದೆ ಇನ್ನಾರ ಮಾತನ್ನು ಕೇಳಿಯಾವು? ಸರ್ಕಾರ ಹೇಳಿದರೆ ಕೂಡಲೇ ಜಾರಿಗೆ ತಂದೇ ತರುತ್ತವೆ ಅವು. ಈ ಅಬ್ಬರ, ಬೊಬ್ಬೆ ಸುದ್ದಿಗಳೊಂದೂ ಬೇಕಾಗೇ ಇರಲಿಲ್ಲ.

ರೈತರು ಇಂದು ಇರುವ ಪರಿಸ್ಥಿತಿಗೆ ಇಷ್ಟು ಮಾಡಿದರೆ ಸಾಕೆ ಎಂಬುದು ಪ್ರಶ್ನೆ. ಸಾಲದ ನೀತಿಯ ವಿಷಯದಲ್ಲೇ ಹಲವು ರೈತ ವಿಕೋಪ ನೀತಿಗಳನ್ನು ಹಿಂದಿನ ಸರ್ಕಾರಗಳು ಜಾರಿಗೆ ತಂದಿವೆ. ಈ ನೀತಿಗಳನ್ನು ಬದಲು ಮಾಡುವ ಅವಶ್ಯಕತೆ ಖಂಡಿತ ಇದೆ. ಆದರೆ ಆ ಬಗ್ಗೆ ಚಕಾರವೂ ಸರ್ಕಾರದಿಂದ ಬಂದಿಲ್ಲ. ಉದಾಹರಣೆಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೀಡುವುದು. ಸಾಲ ನೀಡುವ ಪ್ರಕ್ರಿಯೆಯಲ್ಲಿ ಸರಳತೆ ತರುವುದು. ಬಡ್ಡಿ ದರಗಳಲ್ಲಿ ಕಡಿತ ಮಾಡುವುದು ಇತ್ಯಾದಿ. ಈ ಎಲ್ಲ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದಿರಲಿ ಅವೆಲ್ಲ ಐಎಂಎಫ್ ವಿಶ್ವಬ್ಯಾಂಕ್ ನಿರ್ದೇಶನಗಳ ಪ್ರಕಾರವೇ ಇವೆ. ಹಾಗೇ ಇರಲಿ ಎಂಬ ಧೋರಣೆ ಇರುವುದು ಸ್ಪಷ್ಟ.

ವಿಶಾಲ ಜನಸಮೂಹಗಳಿಗೆ ಅನುಕೂಲವಾಗುವಂತೆ ನೀತಿಗಳನ್ನು ರೂಪಿಸುವ ಮಾತೇ ಇಲ್ಲ.

ಕೃಷಿಯ ಸಮಸ್ಯೆ ಸಾಲವೊಂದೇ ಅಲ್ಲ. ಸರಿಯಾದ ರೀತಿಯಲ್ಲಿ ಸಾಲ ಸಿಗುವುದೂ ಒಂದು ಸಮಸ್ಯೆ ಹೌದೆಂದು ಒಪ್ಪಿಕೊಳ್ಳೋಣ. ರೈತರ ಲಾಗುವಾಡುಗಳ ಧಾರಣೆ ಏರಿಕೆಯಾಗೇ ಇದ್ದು ರೈತರ ಬೆಳೆಗಳಿಗೆ ಬೆಲೆ ಕಡಿಮೆ ಸಿಗುತ್ತಿರುವುದು ಜೊತೆಗೆ ಮಳೆ ಇಲ್ಲದೆ ಬರಬಂದಿರುವುದು ನಿಜವಾದ ಸಮಸ್ಯೆ. ಈ ಸಮಸ್ಯೆಗಳನ್ನು ಪರಿಹರಿಸಲು ಯುಪಿಎ ಸರ್ಕಾರ ಏನು ಮಾಡಿದೆ ಎಂಬುದು ಪ್ರಶ್ನೆ. ಬೆಳೆ ಬೆಳೆವ ಖರ್ಚು ಉತ್ಪನ್ನದ ಮಾರಾಟದಿಂದ ಹುಟ್ಟದಿದ್ದರೆ ರೈತ ಏನು ತಾನೇ ಮಾಡಿಯಾನು? ಬೆಳೆದ ಬೆಳೆಗಳನ್ನು ಮಾರುಕಟ್ಟೆಯಲ್ಲಿ ಕೇಳುವವರೇ ಇಲ್ಲದಿದ್ದರೆ ಆತ ಏನು ಮಾಡಿಯಾನು? ಈ ಮೂಲಭೂತ ಪ್ರಶ್ನೆಗಳು ಕೇಂದ್ರ ಸರ್ಕಾರದ ಗಮನದಲ್ಲೇ ಇಲ್ಲವೆಂಬಂತೆ ತೋರುತ್ತಿದೆ.



ಬ್ಯಾಂಕುಗಳ ಮೇಲೆ ತೀವ್ರ ಒತ್ತಡವನ್ನು ಹೇರುವುದರಿಂದ ಬ್ಯಾಂಕುಗಳು ಹೆಚ್ಚೆಚ್ಚು ಸಾಲ ನೀಡಬಹುದು. ಆದರೆ ಯಾರಿಗೆ? ಹೆಚ್ಚಾಗಿ ದೊಡ್ಡ ರೈತರಿಗೆ ಮತ್ತು ಜಮೀನುದಾರರಿಗೆ ಒತ್ತಾಯದಿಂದಲೂ ಸಾಲ ನೀಡಬಹುದು. ಈ ರೀತಿ ಸಾಲ ನೀಡುವುದರಿಂದ ದೇಶದ ಕೃಷಿ ವಲಯಕ್ಕೆ ಯಾವುದೇ ಲಾಭವಿಲ್ಲ.

ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಒಂದುನೂರು ದಿನಗಳೊಳಗೆ ಏಳುನೂರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ. ಅಲ್ಲಿನ ಕಾಂಗ್ರೆಸ್ ಸರ್ಕಾರ ಏನು ಮಾಡಿತು?

ಚಿದಂಬರಂ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಒಂದು ಲಕ್ಷ ಐದು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ನೀಡುವಂತೆ ಬ್ಯಾಂಕುಗಳಿಗೆ ನಿರ್ದೇಶನ ನೀಡಲಾಗಿದೆಯಂತೆ. ಅದು ಸಾಧ್ಯವೂ ಆಯಿತೆನ್ನಿ. ನಿಜಕ್ಕೂ ಭಾರತದ ಕೃಷಿಗೆ ಎಂತಹ ನೆರವು ದೊರೆತಂತಾಯಿತು?

ಕಡಿಮೆ ದರದಲ್ಲಿ ಲಾಗುವಾಡುಗಳು ಬೆಳೆದ ಬೆಳೆಗೆ ಉತ್ತಮ ಬೆಲೆ ಮತ್ತು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೈಸರ್ಗಿಕ ವಿಕೋಪಗಳಿಗೆ ತುತ್ತಾದವರಿಗೆ ಸೂಕ್ತ ಪರಿಹಾರ. ಇವು ಅತಿ ಮುಖ್ಯ. ಈ ವಿಷಯದಲ್ಲಿ ಜನಸಮೂಹಗಳಿಗೆ ನೆರವಾಗುವ ನೀತಿಗಳನ್ನು ರೂಪಿಸದಿದ್ದರೆ ಯುಪಿಎ ಸರ್ಕಾರ ಜನಾದೇಶದ ವಿರುದ್ಧವಾಗಿಯಂತೂ ನಡೆದಂತಾಗುತ್ತದೆ.

ಇದೇ ಕಾಂಗ್ರೆಸ್ಸಿಗರ ಉದ್ದೇಶವೇ?

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ



ಆಸ್ಪತ್ರೆ ವಾತಾವರಣ ರೂಪಿಸಲು ನಾಗರೀಕ ಸನ್ನದು



ಆಸ್ಪತ್ರೆ ಉಪಯೋಗಿಸುವವರು ಸನ್ನದಿನಲ್ಲಿ ಏನನ್ನು ಹೇಳಲಾಗಿದೆಯೋ ಅದನ್ನು ಅನುಸರಿಸಬೇಕು

ಸನ್ನದಿನಲ್ಲಿ ಹೇಳುವುದಕ್ಕಿಂತ ಹೆಚ್ಚು ಸೇವೆಯನ್ನು ಅಪೇಕ್ಷಿಸಬಾರದು, ಹಾಗೆ ಮಾಡಿದಲ್ಲಿ ಇತರರಿಗೆ ತೊಂದರೆಯಾಗುವ ಸಂಭವವಿದೆ. ಆಸ್ಪತ್ರೆ ಸಿಬ್ಬಂದಿಗಳ ಹೇಳಿಕೆಯನ್ನು ಪ್ರಾಮಾಣಿಕವಾಗಿ ಅನುಸರಿಸಬೇಕು. ಅಸಮಾಧಾನವಿದ್ದಲ್ಲಿ ಕೂಡಲೇ ವ್ಯಕ್ತಪಡಿಸಲು ಕ್ರಮ ತೆಗೆದುಕೊಳ್ಳಬೇಕು.

ಉಪಯೋಗಿಸುವವರ ಪ್ರತಿಕ್ರಿಯೆ

ಆಸ್ಪತ್ರೆ ಸೇವೆಗಳನ್ನು ಉಪಯೋಗಿಸುವವರು, ತಮ್ಮ ಅನಿಸಿಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಲ್ಲಿ ಅದನ್ನು ವಿಶ್ಲೇಶಿಸಿ ಸೇವೆಗಳನ್ನು ಸುಧಾರಿಸಬೇಕಾಗುತ್ತದೆ.

ನಿರ್ವಹಣೆ ಪರಿಶೋಧನೆ ಹಾಗೂ ಸನ್ನದಿನ ಪುನರ್ವಿಮರ್ಶೆ ಕೈಗೊಳ್ಳಬೇಕು

ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಸನ್ನದು ಪುನರ್ವಿಮರ್ಶೆಯಾಗಬೇಕು. ಈ ಪರಿಶೋಧನೆ, ಪ್ರತಿಕ್ರಿಯೆ, ಗುಣಮಟ್ಟ ಇತ್ಯಾದಿಗಳನ್ನು ಪುನರ್ವಿಮರ್ಶೆ ಮಾಡುತ್ತದೆ.

ಚಿಕಿತ್ಸೆಯ ಗುಣಮಟ್ಟವನ್ನು ಹೆಚ್ಚಿಸುವುದು, ಖರ್ಚನ್ನು ಕಡಿಮೆ ಮಾಡುವುದು ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯವಿದೆ.

ಪ್ರತಿ ಐದು ವರ್ಷಕ್ಕೊಮ್ಮೆ ಸನ್ನದನ್ನು ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡಬೇಕು.

ಈ ನಾಗರೀಕ ಸನ್ನದನ್ನು ?ಯಾರು ಅನುಸರಿಸುತ್ತಾರೆ? ಎಂದು ರೋಗಿಗಳು ಹೇಳಿದರೆ, ?ಈ ಸನ್ನದನ್ನು ಯಾರು ಕೇಳುತ್ತಾರೆ? ಎಂದು ವೈದ್ಯರೇ ಹೇಳುತ್ತಾರೆ. ಸೌಹಾರ್ದ್ಯವಾದ ಆಸ್ಪತ್ರೆ ವಾತಾವರಣ ಕಲ್ಪಿಸಲು ಕೇವಲ ಪ್ರಾಮಾಣಿಕ ವೈದ್ಯ, ದಕ್ಷತೆಯಿಂದ ಕೆಲಸ ಮಾಡಿದರೆ ಸಾಲದು ನಾಗರೀಕ ಸನ್ನದನ್ನು ಎಲ್ಲರೂ ಅನುಸರಿಸಬೇಕಾಗುತದೆ.

ಪ್ರತಿನಿತ್ಯ ಒಂದಲ್ಲ ಒಂದು ಸ್ಥಳದಲ್ಲಿ ಆಸ್ಪತ್ರೆಗಳಲ್ಲಿಯ ಲೋಪದೋಷಗಳು ಹೊರಬರುತ್ತಲೇ ಇರುತ್ತವೆ. ಜನರು ಆಸ್ಪತ್ರೆಗಳ ಬಗ್ಗೆ ಯಾವಾಗಲೂ ಅಸಮಾಧಾನ ವ್ಯಕ್ತಪಡಿಸುತ್ತಲೇ ಇರುತ್ತಾರೆ. ಅದರಲ್ಲೂ ಸರ್ಕಾರಿ ಆಸ್ಪತ್ರೆಗಳ ಬಗ್ಗೆ "ಒಳ್ಳೇ ತರಬೇತಿ ಪಡೆದ ವೈದ್ಯರಿದ್ದರೂ, ಪ್ರಾಮಾಣಿಕವಾಗಿದ್ದರೂ ಇದು ಸಾಮಾನ್ಯವಾಗಿದೆ" ಎಂದು ಆಸ್ಪತ್ರೆ ಸೂಪರಿಂಟೆಂಡೆಂಟ್ ಹೇಳುತ್ತಾರೆ. ದಿನನಿತ್ಯದ ತೊಂದರೆಗಳನ್ನು ಸರಿಪಡಿಸಲು ನಾಗರೀಕ ಸನ್ನದು ಅಗತ್ಯ. ನಾಗರೀಕ ಸನ್ನದು ವೈದ್ಯರು ರೋಗಿಗಳೊಂದಿಗೆ ಹಾಗೂ ರೋಗಿಗಳು ವೈದ್ಯರೊಂದಿಗೆ ಸೌಹಾರ್ದ್ಯತೆಯಿಂದ ನಡೆದುಕೊಳ್ಳಲು ಸಹಾಯವಾಗುತ್ತದೆ.

ಆರೋಗ್ಯ ವ್ಯವಸ್ಥೆ ಸಂಕೀರ್ಣವಾಗಿದೆ. ಆದರೂ ಅದು ಜನರಿಗೆ ಪ್ರಯೋಜಕವಾಗುವಂತಿರಬೇಕು. ಜನರು ಯಾವ ತೊಂದರೆಯನ್ನು ಅನುಭವಿಸಬಾರದು ಎಂಬುದು ಮುಖ್ಯ ಉದ್ದೇಶ. ಈ ಉದ್ದೇಶಗಳನ್ನೊಳಗೊಂಡ ನಾಗರೀಕ ಸನ್ನದು ನಮ್ಮ ದೇಶದಲ್ಲಿ ರೂಪುಗೊಂಡಿದೆ ಹಾಗೂ ಭಾರತ ಸರ್ಕಾರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಅದನ್ನು ಗೆಜೆಟ್‌ನಲ್ಲಿ (ಪತ್ರ ಸಂಖ್ಯೆ ಜೆಡ್ 2801/131-96, ದಿನಾಂಕ 13-12-1996) ನಮೂದಿಸಿದೆ.

ಮುಂದುವರಿಯುವುದು

ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಮಧ್ಯಪ್ರವೇಶ

ಪುಟ 7 ರಿಂದ

ಗುರುತಿಸಬಹುದಾದಂತಹ ಒಂದು ಉದಾಹರಣೆ. ಇದು 1971ರಿಂದ 1977ರವರೆಗೆ ಬಂಗಾಳದಲ್ಲಿ ನಡೆದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯ ಮಾದರಿಯಲ್ಲಿತ್ತು.

ಇತ್ತೀಚಿನ ಕಾಲಘಟ್ಟ

ಜಾಗತೀಕರಣದ ನಂತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಒಂದು ಕಡೆ ಕಾರ್ಮಿಕ ಹಕ್ಕುಗಳ ಮೇಲೆ ನಿಯೋಜಿತ ದಮನ ನಡೆಯುತ್ತಿದೆ. ಮುಚ್ಚುವಿಕೆ, ಸ್ವಯಂ ನಿವೃತ್ತಿ ಎಂಬ ಹೆಸರಿನಲ್ಲಿ ಸಂಘಟಿತ ಕಾರ್ಮಿಕರನ್ನು ಹೊರಗೆ ಕಳುಹಿಸಲಾಗುತ್ತಿದೆ. ಆ ಸ್ಥಾನಗಳಲ್ಲಿ ಗುತ್ತಿಗೆ/ ತರಬೇತಿ ಎಂಬ ಹೆಸರಿನಲ್ಲಿ ತುಂಬಿಸುವುದು ಹೆಚ್ಚಾಗುತ್ತಿದೆ. ಖಾಯಂ ಕಾರ್ಮಿಕರು ನಿರ್ವಹಿಸುತ್ತಿದ್ದ ಕೆಲಸಗಳನ್ನು ಅಸಂಘಟಿತ ಕಾರ್ಮಿಕರಿಂದ ಮಾಡಿಸಲಾಗುತ್ತಿದೆ. ಸರ್ಕಾರ ಹೆಚ್ಚು ಹೆಚ್ಚಾಗಿ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಕೈಬಿಡುತ್ತಿದೆ. ಕಾರ್ಮಿಕ ಇಲಾಖೆ ಯಾರಿಗೂ ಬೇಡವಾಗಿದೆ. ಈಗಾಗಲೇ ಇನ್ಸ್‌ಪೆಕ್ಟರ್ ರಾಜ್ ಕೊನೆಗಾಣಬೇಕೆಂಬ ಕೋರಿಕೆ ಬರಲಾರಂಬಿಸಿದೆ. ಕಾರ್ಮಿಕ ಸಂಬಂಧಗಳ ಕ್ಷೇತ್ರದಲ್ಲಿ ಪ್ರಭುತ್ವದ ವಾಪಾಸಾತಿಯು ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಲು ಮಾಲೀಕರಿಗೆ ಅನುಕೂಲವಾಗಿ ಪರಿಣಮಿಸಿದೆ. ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಠ ಕೂಲಿ ಮತ್ತಿತರ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ. ಈ ಶೂನ್ಯವನ್ನು ಭರ್ತಿ ಮಾಡುವುದು ಕಾರ್ಮಿಕ ಸಂಘಗಳಿಗೆ ಬಹಳ ಕಠಿಣವಾಗುತ್ತಿದೆ. ಕಾರ್ಮಿಕ ವಿಚಾರಗಳಲ್ಲಿ ಸರ್ಕಾರ ತನ್ನ ಜವಾಬ್ದಾರಿಯಿಂದ ಹಿಂಜರಿಯುತ್ತಿರುವುದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಇದೇ ಸಂದರ್ಭದಲ್ಲಿ ಈ ಜಾಗವನ್ನು ಪೊಲೀಸರ ಮಧ್ಯಪ್ರವೇಶದಿಂದ ಹೆಚ್ಚಿಸಲಾಗುತ್ತಿದೆ.

ಕಾರ್ಮಿಕರ ಮತ್ತು ಕಾರ್ಮಿಕ ನಾಯಕರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕಲಾಗುತ್ತಿದೆ. ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಲು ಚಳುವಳಿ ಹೆಚ್ಚುತ್ತಿಲ್ಲ. ಹೆಜ್ಜಾಲದಲ್ಲಿ ಅಮಾಯಕರ ಮೇಲೆ ನಡೆದ ಪೊಲೀಸ್ ಫೈರಿಂಗ್ ಒಂದು ನಿದರ್ಶನ. ಅಮಾಯಕ ಜನರನ್ನು ಕೊಂದ ಪೊಲೀಸರು ಸ್ವತಂತ್ರವಾಗಿದ್ದರೆ, ಕಾರ್ಮಿಕ ಮುಖಂಡರ ಮೇಲೆ ಕೇಸುಗಳನ್ನು ಹಾಕಲಾಯಿತು. ನ್ಯಾಯಾಂಗದ ಆಯೋಗವು ಪೊಲೀಸರನ್ನು ತಪ್ಪಿತಸ್ಥರೆಂದು ಘೋಷಿಸಿದ್ದು, ಅದನ್ನು ಸರ್ಕಾರ ಒಪ್ಪಿಕೊಂಡಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಬಿಪಿಎಲ್ ಕಾರ್ಮಿಕ ನಾಯಕರುಗಳ ಮೇಲೆ ಹೂಡಿರುವ ಮೊಕದ್ದಮೆಗಳು ವ್ಯಥೆ ಭರಿಸುವಂತಹುದು. ಏಳು ಮುಖಂಡರುಗಳು ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಸರ್ಕಾರ ಜೀವಾವಧಿ ಶಿಕ್ಷೆಗೆ ಬದಲು ಅವರಿಗೆ ಮರಣದಂಡನೆ ವಿಧಿಸಬೇಕೆಂದು ಅಪೀಲು ಮಾಡಿದೆ.

ಮೆಟಲ್ ಕ್ಲೋಷರ್ಸ್ ಮತ್ತು ಜೆ.ಪಿ.ಡಿಸ್ಟಿಲರೀಸ್ ಕಾರ್ಮಿಕರ ಹೋರಾಟದಲ್ಲಿ ಆ ಪ್ರದೇಶದ ಪೊಲೀಸ್, ಕಾರ್ಮಿಕ ಸಂಘದೊಡನೆ ಮಾತುಕತೆ ನಡೆಸಲು ಮತ್ತು ಕನಿಷ್ಠ ವೇತನ ನೀಡಲು ನಿರಾಕರಿಸುತ್ತಿರುವ ಮಾಲೀಕರ ಹಿತಾಸಕ್ತಿಗಳನ್ನು ಕಾಪಾಡುವುದರಲ್ಲಿ ಹೆಚ್ಚು ಆಸಕ್ತಿವಹಿಸುತ್ತಿದ್ದಾರೆ.

ನಮ್ಮ ರಾಜ್ಯದ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಮತ್ತಿತರ ಕಾರ್ಮಿಕ ಮುಖಂಡರ ಮೇಲೆ ನಂಜನಗೂಡಿನ ಪೊಲೀಸರು ಕಳೆದ ತಿಂಗಳು ನಡೆಸಿದ ದೌರ್ಜನ್ಯ, ಈಸ್ಟರ್ನ್ ಜಿಗಿಂಗ್ ವಿವಾದ ಇನ್ನೂ ಬಗೆಹರಿದಿಲ್ಲ. ಪೊಲೀಸ್ ದೌರ್ಜನ್ಯಕ್ಕೆ ಒಳಗಾದ ಜಿ.ಎನ್.ನಾಗರಾಜ್ ಮತ್ತಿತರರ ಮೇಲೆ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಕಾರ್ಮಿಕರ ಪರವಾಗಿ ಕಾನೂನು ಜಾರಿಗೊಳಿಸುವುದು ಮತ್ತು ಸಂಘಟಿಸುವುದು ಇಷ್ಟು ಕಷ್ಟಕರವಾಗಿದೆ.

ಕಾಂ.ಸೂರ್ಯನಾರಾಯಣರಾವ್ 1970ರಿಂದ ಅವರ ಕೊನೆ ಉಸಿರಿನವರೆಗೆ ಅವರ ನೇತೃತ್ವದಲ್ಲಿ ಕೇಂದ್ರ ಸಂಘಟನೆಯಾದ ಸಿಐಟಿಯು ಕಾರ್ಮಿಕವರ್ಗವನ್ನು ಒಂದು ಶಿಸ್ತಿನ ಪಡೆಯನ್ನಾಗಿ ಕಟ್ಟಿ ಬೆಳೆಸಲು ಕಂಕಣಬದ್ಧವಾಗಿದೆ. ಈ ನಮ್ಮ ಪ್ರಯತ್ನವನ್ನು ಕಾನೂನು ಪಾಲನೆ ಮಾಡದ ಮಾಲೀಕರು ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಸ್ವತಂತ್ರ ಭಾರತದಲ್ಲಿ ಸರ್ಕಾರ ಕನಿಷ್ಠ ಪಕ್ಷ ಒಂದು ವ್ಯವಸ್ಥೆಯ ಮೂಲಕ ಕಾನೂನು ಉಲ್ಲಂಘನೆಯ ಬಗ್ಗೆ ಬರುವ ದೂರುಗಳನ್ನು ವಿಚಾರಿಸಲು ಏರ್ಪಾಡು ಮಾಡಬೇಕು. ಉಲ್ಲಂಘನೆ ಮಾಡುವವರನ್ನು ರಕ್ಷಿಸಬಾರದು. ಇಷ್ಟರ ಮಟ್ಟಿಗೆ ಒಂದು ಸಾಮಾಜಿಕ ಅರಿವನ್ನು ಸರ್ಕಾರದಿಂದ ನಿರೀಕ್ಷಿಸುತ್ತೇವೆ. ಇದಾಗ ಬೇಕಾದರೆ ಕಾರ್ಮಿಕ ವಿವಾದಗಳಲ್ಲಿ ಪೊಲೀಸ್ ಮಧ್ಯ ಪ್ರವೇಶವನ್ನು ತಡೆಗಟ್ಟಬೇಕು.

ರಶ್ಯನ್ ಕಮ್ಯುನಿಸ್ಟ್ ಪಾರ್ಟಿ ಒಡೆಯಲು ಯತ್ನ

ರಶ್ಯನ್ ಅಧ್ಯಕ್ಷ ಪುಟಿನ್‌ರ ವೈಯುಕ್ತಿಕ ನಿರ್ದೇಶನದ ಮೇಲೆ ರಶ್ಯನ್ ಸರ್ಕಾರ, ಕಮ್ಯುನಿಸ್ಟ್ ಪಕ್ಷ ಒಡೆಯುವ ಯತ್ನದಲ್ಲಿದೆ. ಇಲ್ಲವೆ ತಮಗೆ 'ಅಪಾಯಕಾರಿಯಲ್ಲದ ಸೋಶಲಿಸ್ಟ್ ಪಾರ್ಟಿ' ಯಾಗಿ ಬದಲಾಯಿಸುವ ಯತ್ನದಲ್ಲಿದೆ. ಜುಲೈನಲ್ಲಿ ಕರೆಯಲಾಗಿದ್ದ ಕಮ್ಯೂನಿಸ್ಟ್ ಪಾರ್ಟಿಯ 10ನೇ ಮಹಾ ಧಿವೇಶನದ ಸಮಯದಲ್ಲಿ ಈ ಪ್ರಯತ್ನ ನಡೆಯಿತು. ಪಾರ್ಟಿಯ ಕೆಲವು ಕೇಂದ್ರ ಸಮಿತಿ ಸದಸ್ಯರು ಒಂದು 'ಬದಲಿ' ಮಹಾಧಿವೇಶನ ಕರೆದರು. ಬೆರಳೆಣಿಕೆಯ ಕೇಂದ್ರ ಸಮಿತಿ ಸದಸ್ಯರು ಹಾಜರಿದ್ದ ಈ 'ಬದಲಿ ಮಹಾಧಿವೇಶನ' ದಲ್ಲಿ ಪಕ್ಷದ ಅಧ್ಯಕ್ಷ ಝುಗನೋವ್ ಸೇರಿದಂತೆ ಇಡೀ ಕೇಂದ್ರಸಮಿತಿ ಯನ್ನು ಕಿತ್ತುಹಾಕಲಾಯಿತು. ಈ ಬದಲಿ ಮಹಾಧಿವೇಶನ ನಡೆದ ಸ್ಥಳದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇರಲಿಲ್ಲ. ಎಷ್ಟು ಕಡಿಮೆ ಪ್ರತಿನಿಧಿಗಳು ಅಲ್ಲಿಗೆ ಬಂದಿದ್ದರು ಎಂಬುದನ್ನು ಮುಚ್ಚಿಕೊಳ್ಳುವ ಪ್ರಯತ್ನವೇನೋ? ಆದರೆ ರಶ್ಯನ್ ಸರ್ಕಾರದ ನ್ಯಾಯಾಂಗ ಖಾತೆಯ ವೀಕ್ಷಕರು ಮಹಾಧಿವೇಶನ ದಲ್ಲಿ ಹಾಜರಿದ್ದರಂತೆ. ಈ 'ಮಹಾಧಿವೇಶನ'ದಲ್ಲಿ ಹೊಸ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತಂತೆ.

ಸರ್ಕಾರ ಕೃಪಾಪೋಷಿತ ಬದಲಿ 'ಪಕ್ಷ'

ಈ ಬದಲಿ 'ಮಹಾಧಿವೇಶನ'ದಲ್ಲಿ ಆಯ್ಕೆಯಾದ ಅಧ್ಯಕ್ಷ ವ್ಲಾಡಿಮಿರ್ ಟಿಖೊನೊವ್. ಇವಾನೋವೊ ಎಂಬ ಪ್ರದೇಶದ ಗವರ್ನರ್ ಆಗಿರುವ ಈತ ಹಿರಿಯ ನಾಯಕನೆಂದು ಎಂದೂ ಪರಿಗಣಿಸಲ್ಪಟ್ಟಿರಲಿಲ್ಲ. ಈತನ ಹಿಂದಿರುವುದು ಗೆನ್ನಾಡಿ ಸೆಮಿಗಿನ್ - ಒಬ್ಬ ಕೋಟ್ಯಾಧೀಶ. ಈತನನ್ನು ಇತ್ತೀಚೆಗೆ ಪಕ್ಷದಿಂದ ಉಚ್ಚಾಟಿಸ ಲಾಗಿತ್ತು. ಈತ ಅಧ್ಯಕ್ಷ ಪುಟಿನ್‌ನ ಏಜೆಂಟ್. ಆತ ಪಕ್ಷ ಬುಡಮೇಲು ಕೃತ್ಯಗಳಲ್ಲಿ ತೊಡಗಿದ್ದ ಎಂದು ಹೇಳಲಾಗಿತ್ತು.

ಬದಲಿ 'ಕಮ್ಯುನಿಸ್ಟ್ ಪಕ್ಷ' ಈ ದಿವಾಳಿಕೋರ ನಾಯಕತ್ವದಲ್ಲಿ ನಿಜವಾದ ಎಡಪಕ್ಷ ಎಂದು ಸುದ್ದಿ ಮಾಧ್ಯಮಗಳು ಬಿಂಬಿಸುತ್ತಿವೆ. ಈ ಗ್ಯಾಂಗ್ ಕಮ್ಯುನಿಸ್ಟ್ ಪಕ್ಷವನ್ನು ಅಧ್ಯಕ್ಷ ಪುಟಿನ್‌ರಿಗೆ ಅಪಾಯಕಾರಿಯಲ್ಲದ ಆದರೆ ಹೆಸರಿಗೆ ಎಡಪಕ್ಷ ಎಂದು ಹೇಳಿಕೊಳ್ಳಬಹುದಾದ ಪಕ್ಷವಾಗಿ ಪರಿವರ್ತಿಸಲು ಹೆಣಗಿದ್ದರು. ಇದಕ್ಕಾಗಿ ಝುಗನೊವ್ ನಾಯಕ-ತಂಡದ ವಿರುದ್ಧ ಮಹಾಧಿವೇಶನದ ಮೊದಲು ಭಾರಿ ಅಪಪ್ರಚಾರ ಮಾಡಲಾಯಿತು. ದಿನಕ್ಕೆ ಇದಕ್ಕೆ 6 ಕೋಟಿ ರೂಬಲ್‌ಗಳಷ್ಟು ಖರ್ಚು ಮಾಡಲಾಯಿತಂತೆ. ಕಮ್ಯುನಿಸ್ಟ್ ಪಕ್ಷದ ಹಿರಿಯನಾಯಕರು(ಹಿಂದಿನ ಅಧ್ಯಕ್ಷೀಯ ಅಭ್ಯರ್ಥಿ ಸೇರಿದಂತೆ) ಈ ಸರ್ಕಾರಿ-ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಅಪಪ್ರಚಾರವನ್ನು ತಿರಸ್ಕರಿಸಿದ್ದಾರೆ. ಆದರೂ ಈ ಟಿಖೊನೊವ್-ಸೆಮಿಗನ್ ಗ್ಯಾಂಗ್ ನ್ಯಾಯಾಂಗ ಖಾತೆಗೆ ತಮ್ಮ ಪಕ್ಷವನ್ನು ನಿಜವಾದ 'ರಶ್ಯನ್ ಕಮ್ಯುನಿಸ್ಟ್ ಪಕ್ಷ' ಎಂದು ರಿಜಿಸ್ಟಾರ್ ಮಾಡುವಂತೆ-ಅರ್ಜಿ ಕೊಟ್ಟರೆ, ಅದನ್ನು ಸರ್ಕಾರ ಅಂಗೀಕರಿಸಿದರೂ ಏನೂ ಆಶ್ಚರ್ಯವಿಲ್ಲ.

ರಾಜಕೀಯವಾಗಿ ವಿಫಲ : ಆದರೆ ಇದು ಬರಿಯ 'ಕಾನೂನಿನ ವಿಜಯ'ರಾಜಕೀಯವಾಗಿ ಟಿಖೊನೊವ್- ಸೆಮಿಗನ್ ಯಾವುದೇ ಪ್ರಾಂತಿಯ ಪಕ್ಷ ಸಮ್ಮೇಳನಗಳಲ್ಲಿ ಕೇಂದ್ರ ನಾಯಕತ್ವ ಬದಲು ಮಾಡುವ ನಿರ್ಣಯಕ್ಕೆ ಶೇಕಡಾ 10 ಕ್ಕಿಂತ ಕಡಿಮೆ ಮತ ಬಿದ್ದಿದೆ. ನಿಜವಾದ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ ನಡೆಯದಂತೆ, ತೊಂದರೆ ಮಾಡುವ ಹಲವು ಬುಡಮೇಲು ಕೃತ್ಯಗಳನ್ನು ಸರ್ಕಾರಿ ಏಜೆಂಟರು ನಡೆಸಿದರೂ, ಮಹಾಧಿವೇಶನ ನಡೆದ ಸ್ಥಳಕ್ಕೆ ವಿದ್ಯುತ್ ಕಡಿತ, ಅಲ್ಲಿನ ವಿದ್ಯಮಾನಗಳ ಸುದ್ದಿ ಪ್ರಸಾರಕ್ಕೆ ಅಡ್ಡಿ, ವೆಬ್‌ಸೈಟ್‌ನಲ್ಲಿ ಸುದ್ದಿಗಳು ಬರದಂತೆ ತೊಂದರೆ - ಇವೆಲ್ಲಾ ಮಾಡಿ ಸರ್ಕಾರ ಮತ್ತು ಅವರ ಏಜೆಂಟರು ತಮ್ಮ ಕೀಳು ಮಟ್ಟ ಪ್ರದರ್ಶಿಸಿದ್ದಾರೆ.

'ತಾಲಿಬಾನೀಕರಣ'ದತ್ತ ಜಾರುತ್ತಿರುವ ಬಾಂಗ್ಲಾದೇಶ

ಬಾಂಗ್ಲಾದೇಶದ 64 ಜಿಲ್ಲೆಗಳ 41 ಜಿಲ್ಲೆಗಳಲ್ಲಿ ಒಂದೂವರೆ ಕೋಟಿ ಜನ ಭೀಕರ ನೆರೆಯಿಂದ ಬಳಲುತ್ತಿದ್ದಾರೆ. ಇದೇ ಸಮಯದಲ್ಲಿ ಆಡಳಿತ ನಡೆಸುತ್ತಿರುವ ಪ್ರಧಾನಿ ಖಲೀದಾ ಜಿಯಾರವರ ಆಳುವ ಪಕ್ಷ, ವಿರೋಧ ಪಕ್ಷದ ಜತೆ ರಕ್ತಸಿಕ್ತ ಕಾಳಗದಲ್ಲಿ ತೊಡಗಿದೆ. ವಿರೋಧ ಪಕ್ಷದ ನಾಯಕಿ ಮತ್ತು ಮಾಜಿ ಪ್ರಧಾನಿ ಶೇಕ್ ಹಸಿನಾ ಮತ್ತು ಅವರ ಅವಾಮಿ ಲೀಗ್‌ನ ಹಿರಿಯ ನಾಯಕರು ಮಾತನಾಡುತ್ತಿದ್ದ ಸಾರ್ವಜನಿಕ ಸಭೆಯ ಮೇಲೆ ಮರಣಾಂತಿಕ ಬಾಂಬ್ ದಾಳಿ ನಡೆಯಿತು. ಇದು ಬಾಂಗ್ಲಾದೇಶದ ಎರಡು ಅತಿದೊಡ್ಡ ಪಕ್ಷಗಳ ಪೈಪೋಟಿಯ ದೀರ್ಘ ಚರಿತ್ರೆಯಲ್ಲಿ ಕರಾಳ ಅಧ್ಯಾಯ. ಬಾಂಬ್ ಶೇಕ್ ಹಸಿನಾ ಮತ್ತು ಇತರ ಹಲವು ಹಿರಿಯ ನಾಯಕರು ಇದ್ದ ವೇದಿಕೆಯನ್ನು ಸ್ವಲ್ಪದಲ್ಲಿ ತಪ್ಪಿತು.

ಎರಡು ಪಕ್ಷಗಳ ನಡುವಿನ ಈ ಹಿಂಸಾತ್ಮಕ ಪೈಪೋಟಿ ಬಾಂಗ್ಲಾದೇಶ ಪ್ರಜಾಸತ್ತಾತ್ಮಕ ರಾಜಕೀಯ ಮತ್ತು ಶಾಂತಿಯುತ ಬೆಳವಣಿಗೆಗೆ ಮಾರಕವಾಗಿದೆ. ಕಳೆದ ಕೆಲವು ಚುನಾವಣೆಗಳಿಂದ ಈ ಎರಡು ಪಕ್ಷಗಳ ನಾಯಕತ್ವದ ಮೈತ್ರಿಕೂಟ ಅಧಿಕಾರಕ್ಕೆ ಬರುತ್ತಿದ್ದು, ಆದರೆ ಚುನಾವಣೆ ಸೋತ ಆಳುವ ರಂಗದ ಜತೆ ಪೂರ್ಣ ಅಸಹಕಾರ ತೋರುತ್ತದೆ. ಆಳುವರಂಗ ವಿರೋಧ ಪಕ್ಷದ ನಾಯಕರ, ರ್‍ಯಾಲಿಗಳ ಮೇಲೆ ಬಾಂಬ್ ದಾಳಿ, ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿರುತ್ತದೆ.

ವಿಮೋಚನಾ ಪರಂಪರೆ ಮರೆ ಬಿಎನ್‌ಪಿ

ಆದರೆ ಎರಡೂ ಒಂದೇ ರೀತಿಯ ಪಕ್ಷಗಳು. ಏನೂ ವ್ಯತ್ಯಾವಿಲ್ಲ ಎಂದರೆ ಅದು ತಪ್ಪಾದೀತು. ಶೇಕ್ ಹಸೀನಾರವರ ಅವಾಮಿ ಲೀಗ್ ಬಾಂಗ್ಲಾದೇಶದ ವಿಮೋಚನಾ ಸಮರ ಹೂಡಿ, ಸ್ವಾತಂತ್ರ್ಯ ಗಳಿಸಿದ ಶ್ರೀಮಂತ ಪರಂಪರೆ ಇರುವ ಪಕ್ಷ. ಹೆಚ್ಚು ಜಾತ್ಯತೀತ ಪ್ರಜಾಪ್ರಭುತ್ವ ಸ್ವರೂಪ ಇರುವ ಪಕ್ಷ. ಖಲೀದಾ ಜಿಯಾರವರ ಬಾಂಗ್ಲಾದೇಶ ನೇಶನಲ್ ಪಾರ್ಟಿಗಿಂತ ಹೆಚ್ಚು ಜನಬೆಂಬಲ ಇರುವ ಪಕ್ಷ. ಆದರೆ ಖಲೀದಾ ಜೀಯಾ ಪಕ್ಷ ಸಹಾ ವಿಮೋಚನಾ ಹೋರಾಟದ ಪರಂಪರೆಗೆ ತನ್ನ ಹಕ್ಕು ಸಾಧಿಸುತ್ತದೆ. ಆಕೆಯ ಪತಿ ಜಿಯಾ ಉಲ್ ರಹಮಾನ್, ಅವಿಭಜಿತ ಪಾಕಿಸ್ತಾನದ ಸೈನ್ಯದಲ್ಲಿ ಮೇಜರ್ ಆಗಿದ್ದವರು. ಪಾಕಿಸ್ತಾನದ ಮಿಲಿಟರಿ ಆಡಳಿತದ ವಿರುದ್ಧ ಸೈನ್ಯದ ಒಳಗೆ ದಂಗೆ ನಾಯಕತ್ವ ವಹಿಸಿ ವಿಮೋಚನಾ ಸಮರಕ್ಕೆ ಪ್ರಮುಖ ಕಾಣಿಕೆ ಕೊಟ್ಟಿದ್ದಾರೆ ಎಂಬುದು ಅವರ ಹೇಳಿಕೆ.


ಆದರೆ ಈಗ ಅದು ಆ ವಿಮೋಚನಾ ಸಮರದ, ಸ್ವಾತಂತ್ರ್ಯ ಚಳುವಳಿಯ ಮೌಲ್ಯಗಳಿಂದ ಬಹಳ ದೂರ ನಡೆದಿದೆ. ಅಧಿಕಾರಕ್ಕೆ ಕಚ್ಚಿಕೊಳ್ಳಲು ಮೂಲಭೂತವಾದಿ ಕೋಮುವಾದಿ ಬಲಪಂಥೀಯ ಪಕ್ಷಗಳ ಜತೆ ಶಾಮೀಲಾಗಿದೆ ಎಂಬುದು ಪ್ರಬಲ ಆಪಾದನೆ. ಹೆಚ್ಚಿನ ಈ ಪಕ್ಷಗಳು ಪಾಕಿಸ್ತಾನದ ಮಿಲಿಟರಿ ಆಡಳಿತದ ಪರವಾಗಿದ್ದು, ವಿಮೋಚನಾ ಸಮರಕ್ಕೆ ವಿರುದ್ಧವಿದ್ದ ಶಕ್ತಿಗಳು. ಪ್ರಜಾಸತ್ತಾತ್ಮಕ, ಜಾತ್ಯಾತೀತೆಯ ಮೌಲ್ಯಗಳಿಗೆ ವಿರುದ್ಧವಾಗಿರುವವು. ಧಾರ್ಮಿಕ ಮೂಲಭೂತವಾದಿ ಮೌಲ್ಯಗಳನ್ನು ಬಲಪಡಿಸಿ ತಮ್ಮ ಬೇಳೆ ಬೇಯಿಸುವ ಪಟ್ಟಭದ್ರ ಹಿತಾಸಕ್ತಿಗಳು. ಖಲಿದಾ ಜಿಯಾ ತಮ್ಮ ರಾಜಕೀಯ ಸ್ಥಾನ ಭದ್ರಪಡಿಸಿಕೊಳ್ಳಲು ಅವುಗಳನ್ನು ಬಳಸುತ್ತಿದ್ದಾರೆ. ಆದರೆ ಈ ಪಕ್ಷಗಳು ಖಲೀದಾ ಜಿಯಾರವರ ಪಕ್ಷ - ಸರ್ಕಾರದ ದಿಕ್ಕು ಬದಲಿಸುವ ಹುನ್ನಾರದಲ್ಲಿ ತೊಡಗಿವೆ. ಯಾರು ಯಾರನ್ನು ಬಳಸುತ್ತಿದ್ದಾರೆ ಎಂದು ಹೇಳುವುದು ಕಷ್ಟ. ಬಾಂಗ್ಲಾದೇಶದ ಜಾತ್ಯತೀತ ಪ್ರಜಾಸತ್ತಾತ್ಮಕ ರಾಷ್ಟ್ರೀಯತೆ ಬಲಿಪಶುವಾಗಿದೆ.

ಈ ನಡುವೆ - ತಾಲೀಬಾನೀಕರಣ

ಕಳೆದ ಐದು ವರ್ಷಗಳಲ್ಲಿ ಹಲವಾರು ಇಂತಹ ರಾಜಕೀಯ ರ್‍ಯಾಲಿಗಳ ಮೇಲೆ ಬಾಂಬ್ ದಾಳಿಗಳು ನಡೆದಿವೆ. 150 ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಆದರೆ ಈವರೆಗೂ ಬಾಂಬ್ ದಾಳಿಯ ಹಿಂದಿರುವವರನ್ನು ಬಂಧಿಸಲಾಗಿಲ್ಲ. ಸಾಕಷ್ಟು ಬಲಶಾಲಿಯಾದ ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಎಡಪಕ್ಷಗಳ ಮೇಲೂ ಇಂತಹದೇ ದಾಳಿಗಳು ನಡೆದಿವೆ. ಜಾತ್ಯತೀತ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಬುದ್ಧಿಜೀವಿಗಳ ಮೇಲೆ, ಸ್ವತಂತ್ರ ಮನಸ್ಸಿನ ಪತ್ರಕರ್ತರ ಮೇಲೆ ಹಿಂಸಾತ್ಮಕ ದಾಳಿಗಳು ನಡೆದಿದೆ. ಇತ್ತೀಚೆಗೆ ಪ್ರಸಿದ್ಧ ಸಾಹಿತಿ ಒಬ್ಬನನ್ನು ಜರ್ಮನಿಯಲ್ಲಿ ಕೊಲ್ಲಲಾಯಿತು. ಬಾಂಗ್ಲಾದೇಶದಲ್ಲೇ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಅವರಿಗೆ ಬೆದರಿಕೆ ಹಾಕಿದ್ದರಂತೆ. ಇದು ಧಾರ್ಮಿಕ-ಮೂಲಭೂತವಾದಿ ಶಕ್ತಿಗಳ ಕೆಲಸ. ಇವರ ಹಿಂತೆ ಪಾಕಿಸ್ತಾನಿ-ಅಮೆರಿಕನ್ ಸಾಮ್ರಾಜ್ಯಶಾಹಿ ಕೈವಾಡ ಇದೆ ಎಂಬ ತೀವ್ರ ಅನುಮಾನ ಹಲವರಿಗಿದೆ. ಇವರಿಗೆ ಕೊಲ್ಲಿ ದೇಶದ ಆಳುವ ವರ್ಗಗಳಿಂದ ಹರಿದುಬರುತ್ತಿದೆ. ಬಾಂಗ್ಲಾದೇಶದ ಮದರಾಸಗಳಲ್ಲಿ 'ತಾಲಿಬಾನ್' ನಂತಹ ಪಡೆಗಳನ್ನು ತರಬೇತಿ ಮಾಡಲಾಗುತ್ತಿದೆ. ಬಾಂಗ್ಲಾದೇಶದ ತುಂಬಾ ವಿದೇಶದಿಂದ ಆಮದಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ತುಂಬಿ ತುಳುಕುತ್ತಿವೆ. ಬಾಂಗ್ಲಾದೇಶದಲ್ಲೂ ತಾಲಿಬಾನೀಕರಣ ನಡೆದಿದೆ. ಬಾಂಗ್ಲಾದೇಶದಲ್ಲಿ ತೀವ್ರತರದ ಅಂತರ್ಯುದ್ಧ ನಡೆದರೂ ಆಶ್ಚರ್ಯವಿಲ್ಲ. ಪ್ರಗತಿಪರ ರಾಜಕೀಯ, ಜಾತ್ಯತೀತ ಪ್ರಜಾಸತ್ತೆಯ ಮೌಲ್ಯಗಳು ಬಲವಾಗಿರುವ ಬಾಂಗ್ಲಾದೇಶವನ್ನು 'ತಾಲೀಬಾನಿಕರಿ'ಸಲು ಪ್ರತಿಗಾಮಿ ಶಕ್ತಿಗಳು ನಡೆಸುವೆ ಎಂಬುದು ಸ್ಪಷ್ಟ.

ಸಾವಿರ ಶವಪೆಟ್ಟಿಗೆಗಳ ಮೆರವಣಿಗೆ

ನ್ಯೂಯಾರ್ಕ್‌ನಲ್ಲಿ ಇನ್ನೊಂದು ಭಾರಿ ಯುದ್ಧ-ವಿರೋಧಿ ಪ್ರದರ್ಶನ ನಡೆದಿದೆ. ಇರಾಕ್‌ನಲ್ಲಿ ಸತ್ತ ಅಮೆರಿಕನ್ ಸೈನಿಕರು ಸಾವಿರದ ಹತ್ತಿರ ಬರುತ್ತಿದೆ. ಅದನ್ನು ಪ್ರತಿನಿಧಿಸುವ ಸಾವಿರ ಅಣಕ 'ಶವಪೆಟ್ಟಿಗೆ' ಗಳನ್ನು ಹೊತ್ತ ಭಾರಿ ಪ್ರದರ್ಶನ ನಡೆಯಿತು. ಸಂಘಟಕರ ಪ್ರಕಾರ ನಾಲ್ಕು ಲಕ್ಷಕ್ಕೂ ಹೆಚ್ಚು ಜನ ಇದರಲ್ಲಿ ಭಾಗವಹಿಸಿದ್ದರು. ಬುಶ್‌ಗೆ ಇನ್ನೊಂದು ಅವಧಿ ಬೇಡ ಎಂಬ ರಾಜಕೀಯ ಘೋಷಣೆಯೂ ಇತ್ತು. ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಬುಶ್‌ನ್ನು ಅಧಿಕೃತವಾಗಿ ಅಭ್ಯರ್ಥಿ ಎಂದು ನೇಮಿಸಲು ಸೇರಿದ್ದ ರಿಪಬ್ಲಿಕನ್ ಪಕ್ಷದ ಸಮಾವೇಶ ಆರಂಭವಾಗುವ ಹಿಂದಿನ ದಿನ ಈ ಭಾರಿ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. 'ಬುಶ್-ನೀನು ನನ್ನ ಮಗನ ಕೊಂದಿಯಾ', 'ನೀನು ನಮ್ಮ ಅಧ್ಯಕ್ಷನಲ್ಲ', 'ಬುಶ್ - ನಿನ್ನ ಮಕ್ಕಳನ್ನು ಇರಾಕ್‌ಗೆ ಕಳಿಸಿಲ್ಲ', 'ಬುಶ್ - ಬ್ಲೇರನ್ನು ಯುದ್ಧಪರಾಧಗಳಿಗೆ ವಿಚಾರಣೆ ಮಾಡಬೇಕು' ಇತ್ಯಾದಿ ಪ್ಲೇಕಾರ್ಡ್‌ಗಳು, ಘೋಷಣೆಗಳು ಪ್ರದರ್ಶನದಲ್ಲಿ ಕಂಡುಬಂದವು.





ಒಲಂಪಿಕ್ಸ್ ಕ್ರೀಡೋತ್ಸವ

ಅಥೆನ್ಸ್‌ನಿಂದ ಬೀಜಿಂಗ್ ಮುಂದಿನ ಪಯಣ


28ನೇ ಒಲಂಪಿಕ್ಸ್ ಕ್ರೀಡೋತ್ಸವ ಆಗಸ್ಟ್ 29 ರಂದು ಅಥೆನ್ಸ್‌ನಲ್ಲಿ ವರ್ಣರಂಜಿತ ಮುಕ್ತಾಯ ಕಂಡಿತು. ಆರ್ಥಿಕ ಸಂಕಷ್ಟದಿಂದ ನರಳುತ್ತಿದ್ದ ಗ್ರೀಸ್ ಒಲಂಪಿಕ್ಸ್ ಕ್ರೀಡಾ ಚಳುವಳಿಯನ್ನು ಜೀವಂತವಾಗಿರುವ ನಿಟ್ಟಿನಲ್ಲಿ ಅಥೆನ್ಸ್‌ನಲ್ಲಿ 28ನೇ ಒಲಂಪಿಕ್ಸ್ ಅನ್ನು ಯಶಸ್ವಿಯಾಗಿ ನಡೆಸಿತು. ಭಯೋತ್ಪಾದನೆ ಕಾರಣದಿಂದ ರಕ್ಷಣಾ ವೆಚ್ಚವೇ ಕ್ರೀಡೋತ್ಸವದಲ್ಲಿ ಅಧಿಕವಾಗಿ ಕಂಡಿತು.

ಕ್ರೀಡೆಯಲ್ಲಿ ದೈತ್ಯ ಶಕ್ತಿಯಾಗಿ ಹೊರಹೊಮ್ಮುತ್ತಿರುವ ಚೀನಾ

ವಿಶ್ವದಲ್ಲಿ ಎಲ್ಲಾ ರಂಗಗಳಲ್ಲಿ ದೈತ್ಯಶಕ್ತಿಯಾಗಿ ಹೊರಹೊಮ್ಮುತ್ತಿರುವ ಚೀನಾ ಕ್ರೀಡೆಯಲ್ಲೂ ದೈತ್ಯವಾಗಿ ಬೆಳೆಯುತ್ತಿದೆ. ಅಥೆನ್ಸ್ ಒಲಂಪಿಕ್ಸ್‌ನಲ್ಲಿ ಒಟ್ಟು ಪದಕ ಗಳಿಕೆಯಲ್ಲಿ ಚೀನಾ ಎರಡನೇ ಸ್ಥಾನದಲ್ಲಿದೆ ಮಾತ್ರವಲ್ಲ ಒಟ್ಟು 32 ಚಿನ್ನ, 17 ಬೆಳ್ಳಿ, 14 ಕಂಚಿನ ಪದಕದೊಂದಿಗೆ ಒಟ್ಟು 63 ಪದಕ ಗಳಿಸಿ ಅಮೇರಿಕಾಕ್ಕೆ ತೀವ್ರ ಪೈಪೋಟಿ ನೀಡಿದೆ. ತನ್ನ ತಾಯ್ನಾಡಿನಲ್ಲಿ ನಡೆಯುವ 2008ರ ಬೀಜಿಂಗ್ ಒಲಂಪಿಕ್ಸ್‌ನಲ್ಲಿ ತನ್ನ ಅಗಾಧ ಶಕ್ತಿ ಪ್ರದರ್ಶನದ ಮುನ್ಸೂಚನೆಯನ್ನು ಚೀನಾ ಪ್ರಪಂಚಕ್ಕೆ ನೀಡಿದೆ. ವಿಭಜನೆ ನಂತರ ಛಿದ್ರಗೊಂಡ ಸೋವಿಯತ್ ರಷ್ಯಾ ಕಳೆದ ಒಲಂಪಿಕ್ಸ್‌ವರೆಗೆ ಕ್ರೀಡೆಯಲ್ಲಿ ಪಾರಂಪರಿಕವಾಗಿ ಬಲಶಾಲಿಯಾಗಿದ್ದು ಅಥೆನ್ಸ್‌ನಲ್ಲಿ ಚೀನಾ ರಷ್ಯಾವನ್ನು ಮೂರನೇ ಸ್ಥಾನಕ್ಕೆ ನೂಕಿದೆ. ಸಮಾಜವಾದಿ ವ್ಯವಸ್ಥೆಯಲ್ಲಿ ಅರಳಿದ ರಷ್ಯಾದ ಕ್ರೀಡಾ ವ್ಯವಸ್ಥೆ ಇನ್ನೂ ಜೀವಂತವಾಗಿದ್ದು ರಷ್ಯಾ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡಿದೆ. ಅವಿಭಜಿತ ಸೋವಿಯತ್ ರಷ್ಯಾದ ಎಲ್ಲಾ ರಾಜ್ಯಗಳು ಸೇರಿ ಗಳಿಸಿರುವ ಒಟ್ಟು ಚಿನ್ನದ ಪದಕಗಳ ಸಂಖ್ಯೆ 45, ಅವಿಭಾಜಿತ ಸೋವಿಯತ್ ರಷ್ಯಾದ ರಾಜ್ಯಗಳಾಗಿದ್ದ ರಷ್ಯಾ, ಬೈಲೋರಸ್, ಉಕ್ರೇನ್, ಖಜಾಕಿಸ್ತಾನ್, ಅಜರ್‌ಬೈಜಾನ್‌ಗಳು ಒಟ್ಟು ಗಳಿಸಿದ ಪದಕಗಳ ಸಂಖ್ಯೆ 159. ವಿಭಜನೆಗೊಳ್ಳದಿದ್ದರೆ ರಷ್ಯಾ ಅಮೇರಿಕಾಕ್ಕಿಂತ ಒಲಂಪಿಕ್ಸ್‌ನಲ್ಲಿ ಬಹಳ ಮುಂದಿರುತ್ತಿತ್ತು. ಉಳಿದಂತೆ ಸಮಾಜವಾದಿ ರಾಷ್ಟ್ರಗಳಾಗಿದ್ದ ಹಂಗೇರಿ, ರೊಮೇನಿಯಾ, ಪೋಲೆಂಡ್, ವಿಭಜಿತಗೊಂಡು ಯುಗೊಸ್ಲೋವಿಯಾ ಹಾಗೂ ಜೆಕೊಸ್ಲೋವಿಯಾ ರಾಷ್ಟ್ರಗಳು ತಾವು ಕ್ರೀಡೆಯಲ್ಲಿ ಇಂದಿಗೂ ಒಂದು ಶಕ್ತಿ ಎಂದು ಅಥೆನ್ಸ್ ಒಲಂಪಿಕ್ಸ್‌ನಲ್ಲಿ ಸಾಬೀತು ಪಡಿಸಿವೆ.

ಪುಟ್ಟ ಕ್ಯೂಬಾದ ದೈತ್ಯ ಸಾಧನೆ

ಅಮೇರಿಕಾದ ಎಲ್ಲಾ ಕುತಂತ್ರ, ಆರ್ಥಿಕ



ದಿಗ್ಬಂಧನಗಳನ್ನು ಸಮರ್ಥವಾಗಿ ಎದುರಿಸುತ್ತಿರುವ ಕ್ಯೂಬಾ ಅಥೆನ್ಸ್‌ನಲ್ಲಿ 9 ಚಿನ್ನ, 7 ಬೆಳ್ಳಿ, 4 ಕಂಚು ಒಟ್ಟಿಗೆ 27 ಪದಕ ಗಳಿಸಿ ಪದಕ ಪಟ್ಟಿಯಲ್ಲಿ ತನ್ನ ಸ್ಥಾನ ಮೆರೆದಿದ್ದು ವಿಶ್ವಕ್ಕೆ ಕ್ರೀಡೆಯಲ್ಲಿ ತನ್ನ ಪ್ರಾಬಲ್ಯವನ್ನು ಸಾರಿ ಹೇಳಿದೆ. ಸಮಾಜವಾದಿ ವ್ಯವಸ್ಥೆಯಲ್ಲಿ ಬೆಳೆದಿರುವ ಕ್ರೀಡಾ ವ್ಯವಸ್ಥೆಯನ್ನು ವಿಶ್ವಕ್ಕೆ ಮತ್ತೊಮ್ಮೆ ತಿಳಿ ಹೇಳಿರುವ ಕ್ಯೂಬಾ ಜನತೆ ಸಮಾಜವಾದಿ ವ್ಯವಸ್ಥೆಯ ಉಳಿಯುವಿಕೆಗೆ ತಮ್ಮ ದೃಢ ಸಂಕಲ್ಪವನ್ನು ಒಂಪಿಕ್ಸ್ ಮೂಲಕ ಪುನರುಚ್ಚರಿಸಿದ್ದಾರೆ.

ರಾಜವರ್ಧನ್ ಸಿಂಗ್ ಶೂಟಿಂಗ್‌ನಲ್ಲಿ ಗಳಿಸಿರುವ ಬೆಳ್ಳಿ ಪದಕದೊಂದಿಗೆ ಪದಕ ಪಟ್ಟಿಯಲ್ಲಿ ಭಾರತದ ಹೆಸರು ಈ ಸಲವೂ ದಾಖಲಾಯಿತು. ತನ್ನ ರಾಷ್ಟ್ರೀಯ ಕ್ರೀಡೆ ಹಾಕಿಯಲ್ಲಿ ಭಾರತ ಒಂದಾದರೂ ಪದಕ ಗಳಿಸುತ್ತದೆ ಎಂಬ ವಿಶ್ವಾಸ ನಿಜವಾಗಲಿಲ್ಲ. ಒಲಂಪಿಕ್ಸ್‌ಗೆ ಎರಡು ವಾರಗಳ ಮೊದಲು ಹಾಕಿ ತಂಡದ ತರಬೇತುದಾರರ ಬದಲಾವಣೆ, ಆಟಗಾರರಿಗೆ ದೈಹಿಕ ತೊಂದರೆಗಳು, ಭಾರತಕ್ಕೆ ಹಾಕಿಯಲ್ಲಿ ಪದಕ ದೊರಕದಂತೆ ಮಾಡಿ ಎಂದಿನಂತೆ ಭಾರತ ಹಾಕಿಯಲ್ಲಿ 7ನೇ ಸ್ಥಾನ ಪಡೆದಿದೆ.

ಕಳೆದ ವಿಶ್ವ ಅಥ್ಲೆಟಿಕ್ಸ್ ಕೂಟದಲ್ಲಿ ಮೊದಲ ಬಾರಿಗೆ ಕಂಚಿನ ಪದಕ ಗಳಿಸಿದ್ದ ಅಂಜು ಬಾಬಿ ಜಾರ್ಜ್ ಅಥೆನ್ಸ್ ಒಲಂಪಿಕ್ಸ್‌ನಲ್ಲಿ 6ನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. ತನ್ನ ಜೀವನದ ಅತ್ಯುತ್ತಮ ನೆಗೆತ ಮೂಲಕ ಉತದ್ದ ಜಿಗಿತದಲ್ಲಿ ದೂರ 6.83 ದೂರ ಜಿಗಿದ ಅಂಜು ಸಾಧನೆ ಪದಕ ಗಳಿಕೆಯಿಂದ ಬಹಳ ದೂರ ಉಳಿಯಿತು. ಅಥ್ಲೆಟಿಕ್ಸ್‌ನ ಹೆಪ್ಟಾತ್ಲಾನ್‌ನಲ್ಲಿ ಕರ್ನಾಟಕದ ಬಾಲೆ ಜೆ.ಜೆ.ಶೋಭಾ ಅತ್ಯುತ್ತಮ ಸಾಧನೆ ತೋರಿದ್ದು ಮಾತ್ರವಲ್ಲದೆ ಸ್ನಾಯು ಸೆಳೆತಕ್ಕೊಳಗಾಗಿ ಕೊನೆಯ ಓಟದಲ್ಲಿ ಕಾಲಿಗೆ ಪಟ್ಟಿ ಕಟ್ಟಿಕೊಂಡು ಓಟ ಮುಗಿಸಿದ್ದು ಎಲ್ಲರ ಮೆಚ್ಚುಗೆ ಗಳಿಸಿತು. ಕಳೆದ ಸಿಡ್ನಿ ಒಲಂಪಿಕ್ಸ್‌ನಲ್ಲಿ ಭಾರ ಎತ್ತುವಿಕೆಯಲ್ಲಿ ಭಾರತಕ್ಕೆ ಕಂಚಿನ ಪದಕ ಗಳಿಸಿಕೊಟ್ಟಿದ್ದ ಕರ್ಣಂ ಮಲ್ಲೇಶ್ವರಿ ಈ ಬಾರಿ ಪದಕ ಗಳಿಸುವಲ್ಲಿ ವಿಫಲಗೊಂಡರು. ಚಿನ್ನದ ಪದಕ ಗಳಿಸುವ ಭರವಸೆ ಹೊಂದಿದ್ದ ಲಿಯಾಂಡರ್ ಪೇಸ್-ಮಹೇಶ್ ಭೂಪತಿ ಜೋಡಿ ಕಂಚಿನ ಪದಕದಿಂದ ಸ್ವಲ್ಪದರಲ್ಲೇ ವಂಚಿತರಾದರು. ಉಳಿದಂತೆ ಭಾರತದ ಎಲ್ಲಾ ಕ್ರೀಡಾಪಟುಗಳು ನಿರಾಶಾದಾಯಕ ಪ್ರದರ್ಶನ ನೀಡಿದರು.

ಉದ್ದೀಪನಾ ಮದ್ದು ಸೇವನೆ ದಾಂದಲೆ

ಕ್ರೀಡೆಯಲ್ಲಿ ಉದ್ದೀಪನಾ ಮದ್ದು ಸೇವನೆ ಕಳಂಕ ಈ ಬಾರಿ ಭಾರತಕ್ಕೆ ತಟ್ಟಿತು. ಭಾರ ಎತ್ತುವಿಕೆಯ ಸ್ಪರ್ಧಿಗಳಾದ ಭಾರತದ ಸರಳಾ ಕುಮರಿ ಹಾಗೂ ಸನಮಾಂಚ ಚಾನೂ ಒಲಂಪಿಕ್ಸ್‌ನಲ್ಲಿ ಉದ್ದೀಪನಾ ಮದ್ದು ಸೇವಿಸಿ ಪರೀಕ್ಷೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದು ದುರಂತ.

ಉದ್ದೀಪನಾ ಮದ್ದು ಸೇವನೆಯ ಗುಸುಗುಸು ಸುದ್ದಿ ಎಲ್ಲರನ್ನು ಆತಂಕಕ್ಕೆ ಈಡು ಮಾಡುತ್ತದೆ. ಅತ್ಯುತ್ತಮ ಸಾಧನೆಗೈದವರನ್ನು ಜನತೆ ಸಂಶಯದಿಂದ ನೋಡುವಂತಾಗಿದೆ. ಹಿಂದಿನ ಪೂರ್ವ ಜರ್ಮನ್ ಕ್ರೀಡೆಯಲ್ಲಿ ದೈತ್ಯ ಶಕ್ತಿಯಾಗಿತ್ತು. ಇದೀಗ ಜರ್ಮನಿಯ ಏಕೀಕರಣ ನಂತರ ಪೂರ್ವ ಜರ್ಮನಿಯ ಕ್ರೀಡಾಪಟುಗಳಿಗೆ ವ್ಯವಸ್ಥಿತವಾಗಿ ಉದ್ದೀಪನಾ ಮದ್ದು ನೀಡಲಾಗಿತ್ತು ಎಂಬ ವಿಷಯ ಕೇಳಿ ಬರುತ್ತಿದೆ. ಅಮೇರಿಕಾದ ಪ್ರಖ್ಯಾತ ಕ್ರೀಡಾಪಟುಗಳಾದ ಕಾರ್ಲ್‌ಲೆವಿಸ್, ಫ್ಲೋರೆನ್ಸ್ ಗ್ರಿಫಿತ್ ಜೋಯ್ನರ್, ಮಾರಿಯಾನಾ ಜೋನ್ಸ್ ಕೂಡಾ ವ್ಯವಸ್ಥಿತವಾಗಿ ಉದ್ದೀಪನಾ ಮದ್ದು ಸೇವಿಸುತ್ತಿದ್ದರು ಎಂಬ ಅಂಶ ಅಮೇರಿಕಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಈ ಕಳಂಕದಿಂದ ಈ ಹಿಂದೆ ಚೀನಾ ಕೂಡಾ ಬಾಧಿತವಾಗಿತ್ತು. ಚೀನಾದ ಈಜುಗಾರರು ಹಾಗೂ ದೂರ ಓಟಗಾರರು ಉದ್ದೀಪನಾ ಮದ್ದು ಸೇವಿಸಿ ಸಿಕ್ಕಿ ಬಿದ್ದಿದ್ದರು. ಇದೀಗ ಚೀನಾ ಈ ಬಗ್ಗೆ ಎಚ್ಚರಗೊಂಡು ಕಟ್ಟುನಿಟ್ಟಿನ ಕ್ರಮವಹಿಸಿದೆ. ತನಗಾಗದ ದೇಶಗಳ ಮೇಲೆ ಉದ್ದೀಪನಾ ಮದ್ದು ಸೇವನೆ ಆರೋಪ ಹೊರಿಸುವಲ್ಲಿ ಸಹಾ ಅಮೇರಿಕಾ ಮುಂದಿದೆ.

ಉದ್ದೀಪನಾ ಮದ್ದು ಸೇವನಾ ಒಲಂಪಿಕ್ಸ್ ಕ್ರೀಡಾ ಚಳುವಳಿಗೆ ಮಾರಕವಾಗುವ ಪರಿಸ್ಥಿತಿ ಈ ಹಿಂದೆ ಉದ್ಭವವಾಗಿತ್ತು. ಅಂತರರಾಷ್ಟ್ರೀಯ ಒಲಂಪಿಕ್ಸ್ ಸಮಿತಿಯ ಕಟ್ಟುನಿಟ್ಟಿನ ಕ್ರಮದಿಂದಾಗಿ ಈ ಪರಿಸ್ಥಿತಿಯನ್ನು ನಿಭಾಯಿಸಲಾಯಿತು.

- ಮೆಲ್ಕಿಯೋರ್.ಆರ್.ಡಿ

ಚೆಡ್ಡಿಗಳ ದುಷ್ಟ ನಡವಳಿಕೆ....


ಪುಟ 5 ರಿಂದ

ಭಾರತದ ಸಂವಿಧಾನದ ಬಗ್ಗೆಯೂ ಆರ್‌ಎಸ್‌ಎಸ್‌ಗೆ ತಿರಸ್ಕಾರ ಭಾವನೆ ಇದೆ. 'ಹಲವಾರು ಲೇಖನಗಳಿಂದ ಮತ್ತು ಪಾಶ್ಚಾತ್ಯ ದೇಶಗಳ ಸಂವಿಧಾನಗಳಿಂದ ಮತ್ತು ಪಾಶ್ಚಾತ್ಯ ದೇಶಗಳ ಸಂವಿಧಾನಗಳಿಂದ ಆಯ್ದ ಭಾಗಗಳಂತಿದೆ ನಮ್ಮ ಸಂವಿಧಾನ. ಇದರಲ್ಲಿ ನಮ್ಮ ಎನ್ನಬಹುದಾದ ಒಂದೇ ಒಂದು ಅಂಶವೂ ಇಲ್ಲ. ನಮ್ಮ ರಾಷ್ಟ್ರೀಯ ಧ್ಯೇಯದ ಮೂಲ ತತ್ವಗಳ ಬಗ್ಗೆ ಇದರಲ್ಲಿ ಪ್ರಸ್ತಾಪಿಸಿಯೇ ಇಲ್ಲ ಯಾಕೆ?' ಎಂದು ನಮ್ಮ ಜಾತ್ಯತೀತ ಸಂವಿಧಾನದ ಬಗ್ಗೆ ಗುಡುಗಿದ್ದ ಎಂ.ಎಸ್.ಗೋಳ್‌ವಲಕರ್ ಪ್ರಕಾರ ಈ ದೇಶಕ್ಕೆ ಬೇಕಿದರುವುದು ಒಂದೇ ಧರ್ಮ, ಒಂದೇ ನಾಯಕತ್ವ ಮತ್ತು ಒಂದೇ ಸಿದ್ಧಾಂತ. ಅದು ಹಿಂದೂ ಧರ್ಮ, ಬ್ರಾಹ್ಮಣ ನಾಯಕತ್ವ ಮತ್ತು ಬ್ರಾಹ್ಮಣೀಕರಣ ಎಂದು ಪ್ರತ್ಯೇಕವಾಗಿ ಇಲ್ಲಿ ಹೇಳಬೇಕಿಲ್ಲ.

ನಮ್ಮ ದೇಶದ ಸಂಯುಕ್ತ ರಾಷ್ಟ್ರತತ್ವವನ್ನೇ ಇದೇ ಕಾರಣಕ್ಕೆ ತಿರಸ್ಕರಿಸುವ ಗೋಳ್‌ವಲಕರ್. 'ಈ ಸಂವಿಧಾನವು ಪ್ರತ್ಯೇಕತೆಯನ್ನು ಪ್ರಚೋದಿಸುವುದುದರಿಂದ, ಇದನ್ನು ಬುಡ ಸಮೇತ ಕಿತ್ತೊಗೆದು, ಇದರ ಶುದ್ಧೀಕರಣ ಮಾಡಿ, ಏಕವಾದಿ ಸಂವಿಧಾನವನ್ನು ತರಬೇಕು' ಎಂದೂ ಹೇಳಿದ್ದಾರೆ.

ಅಂದರೆ ಹಿಂದೂ ರಾಷ್ಟ್ರ!

ಹಾಗೆಯೇ ಆರ್‌ಎಸ್‌ಎಸ್‌ನ ಪ್ರಾರ್ಥನೆ ಮತ್ತು ಪ್ರಮಾಣ ವಚನ ಕೂಡ ನಮ್ಮ ಸಂವಿಧಾನದ ಮೂಲ ಆಶಯವಾಗಿರುವ ಜಾತ್ಯತೀತ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಆರ್‌ಎಸ್‌ಎಸ್ ಪ್ರಾರ್ಥನೆಯಲ್ಲಿ ಜಾತ್ಯತೀತ ಭಾರತದ ಬದಲಾಗಿ ಉಲ್ಲೇಖವಾಗಿರುವುದು 'ಹಿಂದೂಗಳ ಭೂಮಿ' ಮತ್ತು 'ಹಿಂದೂ ರಾಷ್ಟ್ರ' ಪರ ಪ್ರಮಾಣವಚನ ಕೂಡ ಇಷ್ಟೇ ಅನಿಷ್ಟವಾಗಿದೆ : 'ನಾನು ಈ ಪ್ರಮಾಣವಚನ ಸ್ವೀಕರಿಸುತ್ತಾ, ಆರ್‌ಎಸ್‌ಎಸ್ ಸದಸ್ಯನಾಗಿ ಪೂಜ್ಯ ಹಿಂದೂ ಧರ್ಮ, ಹಿಂದೂ ಸಮಾಜ ಮತ್ತು ಹಿಂದೂ



ಸಂಸ್ಕೃತಿಯ ಉದ್ಧಾರಕ್ಕಾಗಿ ಶ್ರಮಿಸಿ ಭರತ ವರ್ಷದ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತೇನೆ.'

ಸಂಘ ಪರಿವಾರಕ್ಕೆ ನಮ್ಮ ತಿರಂಗದ ಬಗ್ಗೆ ಎಷ್ಟು ಅಸಹನೆ ಇದೆ ಎಂದರೆ, 2000 ರಷ್ಟು ಇತ್ತೀಚೆಗೆ ಪ್ರಕಾಶ್ ಅಂಬೇಡ್ಕರ್‌ರವರು 'ನಾಗಪುರ್‌ದಲ್ಲಿರುವ ತನ್ನ ಕೇಂದ್ರ ಕಾರ್ಯಾಲಯದ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವುದಾಗಿ 1949 ರಲ್ಲೇ ಆರ್‌ಎಸ್‌ಎಸ್ ಲಿಖಿತ ಒಪ್ಪಂದ ನೀಡಿತ್ತು. ಆದರೆ ಇಲ್ಲಿಯವರೆಗೂ ಹಾಗೆ ಮಾಡಿಲ್ಲ' ಎಂದು ಹೇಳಿದಾಗ, ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯ ಎಂ.ಜಿ. ವೈದ್ಯ ಪ್ರತಿಕ್ರಿಯಿಸಿದ್ದು ಹೇಗೆ ಗೊತ್ತೆ? 'ನಾವು ರಾಷ್ಟ್ರಧ್ವಜವನ್ನು ಹಾರಿಸುವುದಾಗಿ ಒಪ್ಪಿದ್ದೆವು ಎಂಬುದಕ್ಕೆ ಸಾಕ್ಷ್ಯಾಧಾರಗಳನ್ನು ನೀಡಿ. ಇಲ್ಲವಾದರೆ ಹೀಗೆ ನಮ್ಮ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಿ ಆರ್‌ಎಸ್‌ಎಸ್ ಮೇಲೆ ಅಪವಾದವನ್ನು ಹೊರಿಸಬೇಡಿ' ಎಂದಿದ್ದ ವೈದ್ಯ?

ಅಂದಿನ ಗೋಳ್‌ವಲಕರ್‌ನ ಪುನರಾವರ್ತನೆಯೇ ಇಂದಿನ ಉಮಾಭಾರತಿ! ಇಂಥವರ ಕಪಟ ದೇಶಪ್ರೇಮಕ್ಕೆ ನಮ್ಮ ಜನ ಮರುಳಾಗದಿರಲಿ.....

- ಗೌರಿ ಲಂಕೇಶ್

ಕೃಪೆ : ಲಂಕೇಶ್ ಪತ್ರಿಕೆ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH